# ಯುಗರಶ್ಮಿ

- ಭೂಕಂಪಗಳೂ ಜಲಪ್ರಳಯಗಳೂ
- ಸ್ತ್ರೀಯ ಸ್ಥಾನಮಾನ - ಇಸ್ಲಾಮಿನ ಮುಂಚೆ ಮತ್ತು ನಂತರ
- ಈದ್ ಆಚರಣೆ
- ವ್ರತಾನುಷ್ಠಾನ ಮತ್ತು ಹಬ್ಬ
- ಇಸ್ರಾಅ್ - ಮಿಅ್‌ರಾಜ್
- ಪ್ರವಾದಿತ್ವ ಸಮಾಪ್ತಿಯ ನಿಜಸ್ಥಿತಿ


*ತ್ರೈಮಾಸಿಕ*
*ಎಪ್ರಿಲ್ 2000*
*ಬೆಲೆ. ರೂ. 5.00*


ನಮ್ಮ ವಿಚಾರದಲ್ಲಿ ಪರಿಶ್ರಮ ಪಡುವವರಿಗೆ ನಾವು ನಮ್ಮ ಮಾರ್ಗಗಳನ್ನು ತೋರಿಸಿಕೊಡುವೆವು. ನಿಶ್ಚಯವಾಗಿಯೂ ಅಲ್ಲಾಹನು ಸಜ್ಜನರ ಜೊತೆಯಲ್ಲಿದ್ದಾನೆ.

*- ಪವಿತ್ರ ಖುರ್‌ಆನ್ (29:70)*

# ಯುಗರಶ್ಮಿ

## ತ್ರೈಮಾಸಿಕ

10-23-1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು - 575 001

ಬಿಡಿ ಪ್ರತಿ: ರೂ. 5-00 ವಾರ್ಷಿಕ ಚಂದಾ: ರೂ. 20-00 ಅಂಚೆ ಮೂಲಕ : ರೂ. 25-00

ವಿಷಯ ಸೂಚಿಕೆ: ಪುಟ


- ಭೂಕಂಪಗಳೂ ಜಲಪ್ರಳಯಗಳೂ 1
- ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು 2
- ಸ್ತ್ರೀಯ ಸ್ಥಾನಮಾನ -ಇಸ್ಲಾಮಿನ ಮುಂಚೆ ಮತ್ತು ನಂತರ 3
- ಈದ್ ಆಚರಣೆ 8
- ವ್ರತಾನುಷ್ಠಾನ ಮತ್ತು ಹಬ್ಬ 10
- ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ - 14 13
- ಇಸ್ರಾಅ್ - ಮಿಅ್‌ರಾಜ್ (ಪೈಗಂಬರರ ನಿಶಾ ಪ್ರಯಾಣ- ಗಗನಾರೋಹಣ) 15
- ಪ್ರವಾದಿತ್ವ ಸಮಾಪ್ತಿಯ ನಿಜಸ್ಥಿತಿ - 6 23
- ಓದಿದ್ದು...! 35
- ಅಹ್ಮದಿಯಾ ವಾರ್ತೆಗಳು 36



**Statement about ownership and other particulars about the Newspaper YUGARASHMI Quarterly**

(FORM IV See Rule 8)

| | | | |
|---|---|---|---|
| 1. | Place of Publication | : | Mangalore |
| 2. | Period of its publication | : | Quarterly |
| 3. | Printer's Name | : | Muhammed Yusuf |
| | Whether citizen of India? | : | Yes |
| | Address | : | 10-3-1008/1, Ist Floor Ansari Road, Bunder, Mangalore - 575 001 |
| 4. | Publisher's Name | : | Muhammad Yusuf |
| | Whether citizen of India | : | Yes |
| | Address | : | 10-23-1008/ 1, Ist Floor Ansari Road, Bunder Mangalore - 575 001 |
| 5. | Editor's name | : | Muhammad Yusuf |
| | Whether citizen of India? | : | Yes |
| | Address | : | 10-23-1008/1, Ist Floor, Ansari Road, Bunder. Mangalore - 575 001 |
| 6. | Name and address of individuals who own the newspaper and partners or shareholders holding more than one percent of the capital | | Jamath Ahmadiyya 10-23-1008/1, Ist Floor, Ansari Road, Bunder Mangalore - 575 001 |

I, Muhammad Yusuf hereby declare that the particulars given above are true to the best of my knowledge and belief.

Date : 1-4-2000

Sd/-
**Muhammad Yusuf**

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ಸಂಪಾದಕ: ಮುಹಮ್ಮದ್ ಯೂಸುಫ್

ಆರಂಭ : 1975 ಸಂಪುಟ : 20 ಎಪ್ರಿಲ್ 2000 ಶಹಾದತ್ 1379 ಸಂಚಿಕೆ : 1

## ಭೂಕಂಪಗಳೂ ಜಲಪ್ರಳಯಗಳೂ

"ನೆನಪಿಡಿರಿ, ಈ ಭೂಲೋಕದಲ್ಲಿ ಅನೇಕ ಭೂಕಂಪಗಳು ಘಟಿಸಲಿವೆಯೆಂಬ ಸೂಚನೆಯನ್ನು ದೇವನು ನನಗೆ ಅರುಹಿದ್ದಾನೆ. ನಾನು ಮುಂಚಿತವಾಗಿಯೇ ಹೇಳಿದ್ದಂತೆ, ಅಮೇರಿಕ ಮತ್ತು ಯುರೋಪು ಭೂಕಂಪಗಳಿಗೆ ಗುರಿಯಾಗಿವೆ. ಹಾಗೆಯೇ ಏಷ್ಯಾ ಸಹ ಈಡಾಗುವುದು ಖಂಡಿತ. ಅವುಗಳಲ್ಲಿ ಕೆಲವು ಪ್ರಳಯಕಾಲದ ಭಯಂಕರವಾದ ಸರ್ವನಾಶಕ್ಕೆ ಸಮಾನವಾಗಿರಬಹುದು. ಹಲವಾರು ಮಂದಿ ಮಡಿಯುವರು. ರಕ್ತದ ಹೊಳೆಗಳೇ ಹರಿಯುವುವು.

"ಮನುಷ್ಯನುಂಟಾದ ಕಾಲದಿಂದ ಇಷ್ಟರ ವರೆಗೆ ಸಂಭವಿಸದ ರೀತಿಯ ಅತ್ಯಂತ ಭಯಂಕರವಾದ ನಾಶವು ಉಂಟಾಗುವುದು. ಭೂಮಿಯ ನಾನಾ ಭಾಗಗಳು ಅಲ್ಲಿ ಎಂದೂ ಜನವಾಸವಿರಲಿಲ್ಲವೆಂದು ಭಾಸವಾಗುವಷ್ಟರ ಮಟ್ಟಿಗೆ ಅಡಿಮೇಲಾಗಿ ಸರ್ವನಾಶವಾಗುವುವು. ಅದರೊಂದಿಗೆ ಭೂಮಿಯಲ್ಲಿಯೂ ಆಕಾಶದಲ್ಲಿಯೂ ಭಯಾನಕವಾದ ನಾಶಗಳು ಘಟಿಸುವುವು. ವಿವೇಕಿಗಳಾದ ಜನರು ಇವುಗಳ ಅಸಾಮಾನ್ಯತೆಯನ್ನು ಗ್ರಹಿಸುವರು. ಅವುಗಳ ಕುರಿತು ವೈಜ್ಞಾನಿಕ ಹಾಗೂ ತತ್ವಶಾಸ್ತ್ರ ಗ್ರಂಥಮಾಲೆಗಳಿಂದ ಏನನ್ನೂ ಅರಿಯಲು ಸಾಧ್ಯವಾಗಲಿಕ್ಕಿಲ್ಲ. ಆಗ ಜನರು ಮುಂದೇನು ಸಂಭವಿಸಬಹುದೆಂದು ಕಳವಳಗೊಳ್ಳುವರು. ಅನೇಕರು ರಕ್ಷಿಸಲ್ಪಡುವರು; ಅನೇಕರು ನಾಶವಾಗುವರು. ಅಂತಹ ದಿನಗಳು ಅತಿ ಸಮೀಪವಾಗಿವೆ. ಅಷ್ಟೇಕೆ, ಬಾಗಿಲಲ್ಲೇ ಬಂದು ನಿಂತಿವೆ. ಒಂದು ಮಹಾನಾಶವನ್ನು ಈ ಲೋಕವು ಕಣ್ಣಾರೆ ಕಾಣಲಿದೆ. ಭೂಕಂಪಗಳು ಮಾತ್ರವಲ್ಲ, ಭೂಮಿಯಲ್ಲೂ ಆಕಾಶದಲ್ಲೂ ಇನ್ನೂ ಭಯಂಕರವಾದ ವಿಪತ್ತುಗಳು ಘಟಿಸುವುವು. ಮನುಷ್ಯರು ಪರಮಾತ್ಮನನ್ನು ಮರೆತು, ತಮ್ಮ ಪ್ರಯತ್ನ ಹಾಗೂ ಹೃದಯದ ಸಕಲ ಆಶಯಗಳನ್ನು ಕೇವಲ ಲೌಕಿಕ ಆಡಂಭರಗಳಿಗಾಗಿ ಮೀಸಲಾಗಿರಿಸಿದ ಕಾರಣದಿಂದಾಗಿ ಇವೆಲ್ಲ ಸಂಭವಿಸುವುವು... 'ಓರ್ವ ಪ್ರವಾದಿಯನ್ನು ಕಳುಹಿಸದೆ ನಾವು ಜನರನ್ನು ಶಿಕ್ಷಿಸುವುದಿಲ್ಲ' ಎಂದು ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ (17:16) ಹೇಳಿರುವನು.

"ಪಶ್ಚಾತ್ತಾಪಪಡುವವರು ರಕ್ಷಣೆಯನ್ನು ಹೊಂದುವರು. ಆಪತ್ತುಗಳಿಗೆ ಭಯಪಡುವವರೊಡನೆ ಕರುಣೆ ತೋರಿಸಲ್ಪಡುವುದು. ಈ ಕಷ್ಟ ಪರಂಪರೆಗಳಿಗೆ ಗುರಿಯಾಗಲಾರೆವೆಂದು ನೀವು ಭಾವಿಸುವಿರಾ? ಅಥವಾ ಉಪಾಯದಿಂದ ಸ್ವಯಂ ರಕ್ಷಣೆ ಪಡೆಯಲು ನಿಮಗೆ ಸಾಧ್ಯವಿದೆಯೇ? ಎಂದಿಗೂ ಸಾಧ್ಯವಿಲ್ಲ. ಅಂದು ಮನುಷ್ಯರ ಎಲ್ಲ ಯೋಜನೆಗಳು ಪರಾಜಯಗೊಳ್ಳುವುವು. ಅಮೇರಿಕದಲ್ಲಿ ಮತ್ತು ಇನ್ನಿತರ ಭೂಖಂಡಗಳಲ್ಲಿ

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

- ಅಲ್ಲಾಹನು ನಿಮ್ಮ ರೂಪವನ್ನೂ ಸಂಪತ್ತನ್ನೂ ನೋಡುವುದಿಲ್ಲ. ಆದರೆ, ನಿಮ್ಮ ಹೃದಯವನ್ನೂ ಕರ್ಮವನ್ನೂ ನೋಡುತ್ತಾನೆ.
- ತಾನು ಮಾಡಿದ ಪಾಪದ ಬಗ್ಗೆ ಪಶ್ಚಾತ್ತಾಪಪಡುವವನು ಪಾಪ ಮಾಡದವನ ಹಾಗೆ.
- ಜನರು ಸಾಮಾನ್ಯವಾಗಿ ನಾಲ್ಕು ವಿಚಾರಗಳನ್ನು ಆಧಾರವಾಗಿಟ್ಟುಕೊಂಡು ವಿವಾಹ ಸಂಬಂಧವನ್ನು ಬಯಸುತ್ತಾರೆ. ಧನ, ಕುಲ, ಸೌಂದರ್ಯ ಮತ್ತು ಧಾರ್ಮಿಕತೆ. ನೀವು ಧಾರ್ಮಿಕತೆಗೆ ಆದ್ಯತೆ ನೀಡಿ ಪತ್ನಿಯನ್ನು ಆಯ್ಕೆ ಮಾಡಿರಿ.
- ಪತಿಯೊಡನಿರುವ ಬಾಧ್ಯತೆಯನ್ನು ನಿರ್ವಹಿಸದೆ ಇರುವ ವರೆಗೆ ಓರ್ವ ಸ್ತ್ರೀ ಅಲ್ಲಾಹನೊಡನಿರುವ ಬಾಧ್ಯತೆಯನ್ನು ನಿರ್ವಹಿಸಲಾರಳು.
- ಒಬ್ಬ ಸತ್ಯವಿಶ್ವಾಸಿ ಒಂದೇ ಬಿಲದಿಂದ ಎರಡು ಸಲ ಕಚ್ಚಿಸಿಕೊಳ್ಳಲಾರ.
- ಅಲ್ಲಾಹನ ತ್ರಾಸಿನಲ್ಲಿ ಶ್ರೇಷ್ಠ ಸ್ವಭಾವಕ್ಕಿಂತ ಭಾರದ ಬೇರೊಂದು ವಸ್ತುವಿಲ್ಲ.
- ದುಡಿಯುವವನಿಗೆ ಅವನ ಬೆವರು ಆರುವ ಮುಂಚೆ ಕೂಲಿ ಕೊಡಬೇಕಾಗಿದೆ.
- ಬಡವರನ್ನು ಅವಗಣಿಸಿ ಶ್ರೀಮಂತರನ್ನು ಮಾತ್ರ ಆಹ್ವಾನಿಸಿ ಕೊಡುವ ಸತ್ಕಾರ ಬಹಳ ಹೀನವಾದುದು.
- ಮೇಲಿನ ಕೈ ಕೆಳಗಿನ ಕೈಗಿಂತ ಉತ್ತಮವಾದುದು.
- ಜ್ಞಾನಾರ್ಜನೆ ಎಲ್ಲ ಮುಸ್ಲಿಂ ಸ್ತ್ರೀ ಪುರುಷರಿಗೆ ಕಡ್ಡಾಯವಾಗಿದೆ.

ಭೂಕಂಪಗಳಾದರೂ ನಿಮ್ಮ ರಾಜ್ಯವು ಸುರಕ್ಷಿತವಾಗಿಯೇ ಇರುವುದೆಂದು ಭಾವಿಸಬೇಡಿ. ಅದಕ್ಕಿಂತಲೂ ಅತ್ಯಂತ ದಾರುಣವಾದ ಕಷ್ಟನಷ್ಟಗಳಿಗೆ ನೀವು ಗುರಿಯಾಗಬೇಕಾದೀತು.

"ಎಲೈ ಯುರೋಪಿನ ಜನಾಂಗಗಳೇ, ನೀವು ಸುರಕ್ಷಿತರಲ್ಲ. ಎಲೈ ಏಷ್ಯಾದ ಜನಾಂಗಗಳೇ, ನೀವು ಸಹ ಸುರಕ್ಷಿತರಲ್ಲ. ಎಲೈ ದ್ವೀಪನಿವಾಸಿಗಳೇ, ನಿಮ್ಮ ಸ್ವಯಂ ಕಲ್ಪಿತ ದೇವರುಗಳು ಆ ದಿನದಂದು ನಿಮ್ಮ ರಕ್ಷಣೆಗೆ ಬರಲಾರರು. ದೊಡ್ಡ ದೊಡ್ಡ ನಗರಗಳು ನಾಶವಾಗುವುದನ್ನು ಮತ್ತು ಜನಭರಿತ ಪ್ರದೇಶಗಳು ಜನಶೂನ್ಯವಾಗುವ ಭವಿಷ್ಯದ ಚಿತ್ರವನ್ನು ನಾನು ಈಗಲೇ ಕಾಣುತ್ತಿದ್ದೇನೆ. ಆ ಸರ್ವಾಧಿಪತಿಯಾದ ದೇವನು ಒಂದು ದೀರ್ಘಕಾಲದ ವರೆಗೆ ಮೌನಾವಲಂಬಿಯಾಗಿದ್ದನು. ಅವನ ಸಮ್ಮುಖದಲ್ಲೇ ಹೇಯವಾದ ಅನೇಕ ಅತಿ ದುಷ್ಕೃತ್ಯಗಳು ನಡೆಯುತ್ತಿದ್ದರೂ ಅವನು ಸುಮ್ಮಗಿದ್ದನು. ಆದರೆ ಈಗ ಅವನು ಭಯಂಕರ ಸ್ವರೂಪದಿಂದ ತನ್ನ ಮುಖವನ್ನು ತೋರಿಸುವನು. ಅಂತಹ ಕಾಲ ದೂರವಿಲ್ಲ! ಕಿವಿ ಇದ್ದವರು ಕೇಳಿಕೊಳ್ಳಲಿ! ನಾನು ಎಲ್ಲರನ್ನೂ ದೇವರ ರಕ್ಷಣೆಯಲ್ಲಿ ಒಂದುಗೂಡಿಸಲಿಕ್ಕೆ ಕೈಲಾದಷ್ಟು ಪ್ರಯತ್ನಿಸಿದೆ. ಆದರೆ ನಿಯತಿ ನಿಯಮ ಪೂರ್ಣಗೊಳ್ಳಬೇಕಲ್ಲವೇ? ನಾನು ಸತ್ಯವಾಗಿಯೂ ನಿಮ್ಮೊಡನೆ ಹೇಳುತ್ತೇನೆ: ಈ ರಾಜ್ಯದ ಸರದಿ ಸಹ ಸಮೀಪಿಸುತ್ತಿದೆ. ನೋಹಾ ಪ್ರವಾದಿಯ ಕಾಲ* ನಿಮ್ಮ ಕಣ್ಣಮುಂದೆ ಪ್ರತ್ಯಕ್ಷವಾಗುವುದು. ಪ್ರವಾದಿ ಲೂತ್‌ರವರ ರಾಜ್ಯದಲ್ಲಿ ಸಂಭವಿಸಿದ್ದನ್ನು ** ನಿಮ್ಮ ಸ್ವಂತ ಕಣ್ಣುಗಳಿಂದ ಕಾಣುವಿರಿ. ಆದರೆ ಪರಮಾತ್ಮನು ತನ್ನ ಕೋಪವನ್ನು ನಿಧಾನವಾಗಿ ತೋರಿಸುವನು. ನಿಮ್ಮ ಮೇಲೆ ದಯಾದೃಷ್ಟಿಯನ್ನು ಬೀರುವಂತೆ ನೀವು ಅವನನ್ನು ಪಶ್ಚಾತ್ತಾಪದಿಂದ ಪ್ರಾರ್ಥಿಸಿರಿ. ದೇವರನ್ನು ಮರೆತವನು ಮನುಷ್ಯನಲ್ಲ; ಕ್ರಿಮಿಕೀಟಕ್ಕೆ ಸಮಾನನು. ದೇವನಿಗೆ ಯಾರು ಹೆದರುವುದಿಲ್ಲವೋ ಅವನು ಸತ್ತಂತೆಯೇ ಸರಿ; ಜೀವವಿಲ್ಲದವನು." (ಹಖೀಖತುಲ್ ವಹ್ಯ್. 1907 ಪುಟ : 256-257)

- ಹಜ್ರತ್ ಮಿರ್ಝಾ ಗುಲಾಂ ಅಹ್ಮದ್

ಅಹ್ಮದಿಯಾ ಸಂಘಟನೆಯ ಸ್ಥಾಪಕರು

* ಭಯಂಕರ ಜಲಪ್ರಳಯ

** ಭೀಕರ ಭೂಕಂಪ

# ಸ್ತ್ರೀಯ ಸ್ಥಾನ ಮಾನ - ಇಸ್ಲಾಮಿನ ಮುಂಚೆ ಮತ್ತು ನಂತರ

ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್

## ಸ್ತ್ರೀ - ಇಸ್ಲಾಮಿನ ಮುಂಚೆ

ಮುಹಮ್ಮದ್ ಪೈಗಂಬರರ (ಸ) ಆವಿರ್ಭಾವದ ಮೊದಲು ಎಲ್ಲಾ ರಾಜ್ಯಗಳಲ್ಲಿ ಸ್ತ್ರೀಯರನ್ನು ಕೇವಲ ಗುಲಾಮರಂತೆ ಮತ್ತು ಚರಸೊತ್ತುಗಳಂತೆ ಕಾಣಲಾಗುತ್ತಿತ್ತು. ಸ್ತ್ರೀಯರ ಗುಲಾಮಗಿರಿ ಪುರುಷರ ಮೇಲೆಯೂ ಪ್ರತಿಕೂಲ ಪರಿಣಾಮಗಳನ್ನು ಉಂಟು ಮಾಡದಿರಲಿಲ್ಲ. ಗುಲಾಮ ಸ್ತ್ರೀಯರ ಪುತ್ರರಿಗೂ ಸ್ವಾತಂತ್ರ್ಯ ಚೈತನ್ಯವನ್ನು ಮೈಗೂಡಿಸಿಕೊಳ್ಳುವ ಅವಕಾಶವಿರಲಿಲ್ಲ.

ಸ್ತ್ರೀ ಅವಳ ಸೌಂದರ್ಯದ ಕಾರಣದಿಂದಲೋ ವಿಶಿಷ್ಟ ಗುಣ ನಿಮಿತ್ತವೋ ವ್ಯಕ್ತಿಪರವಾಗಿ ಪುರುಷನನ್ನು ಸ್ವಾಧೀನಿಸಿದ್ದರೂ ಈ ರೀತಿ ಲಭಿಸಿದ ಸ್ವಾತಂತ್ರ್ಯವನ್ನು ಯಥಾರ್ಥ ಸ್ವಾತಂತ್ರ್ಯವೆಂದು ಹೇಳಲು ಸಾಧ್ಯವಿಲ್ಲ. ಕಾರಣವೇನೆಂದರೆ ಅದು ಅವಳ ಹಕ್ಕೆಂಬಂತೆ ಪರಿಗಣಿಸಲ್ಪಡುತ್ತಿರಲಿಲ್ಲ. ಸಾಮಾನ್ಯ ನಿಯಮಕ್ಕೆ ಇದೊಂದು ಅಪವಾದ ಮಾತ್ರ. ಇಂತಹ ಸ್ವಾತಂತ್ರ್ಯ ವಾಸ್ತವದಲ್ಲಿ ಲಕ್ಷ್ಯವನ್ನು ರೂಪಿಸುವುದಕ್ಕೂ ಸಾಧಿಸುವುದಕ್ಕೂ ಸಹಾಯಕಾರಿಯಲ್ಲ.

ಸುಮಾರು 1400 ವರ್ಷಗಳ ಮೊದಲು ಮುಹಮ್ಮದ್ ಪೈಗಂಬರರ ಆಗಮನವಾಯಿತು. ಅವರ ಕಾಲಕ್ಕಿಂತ ಮೊದಲು ಯಾವುದೇ ಧರ್ಮವಾಗಲಿ ರಾಷ್ಟ್ರವಾಗಲಿ ಸ್ತ್ರೀಗೆ ಹಕ್ಕೆಂಬ ರೀತಿಯಲ್ಲಿ ಸ್ವಾತಂತ್ರ್ಯ ನೀಡಿರಲಿಲ್ಲ. ನಿರ್ದಿಷ್ಟ ನಿಯಮ ಜ್ಯಾರಿಯಲ್ಲಿಲ್ಲದ ರಾಜ್ಯಗಳಲ್ಲಿ ಎಲ್ಲಾ ರೀತಿಯ ಅಯೋಗ್ಯತೆಗಳಿಂದ ಸ್ತ್ರೀಯನ್ನು ವಿಮುಕ್ತ ಮಾಡಿದ್ದರೂ ಅಂತಹ ಸ್ವಾತಂತ್ರ್ಯ ಸಹ ಯಥಾರ್ಥ ಸ್ವಾತಂತ್ರ್ಯವೆನಿಸುವುದಿಲ್ಲ. ಒಂದು ಅನುಮತಿ ಎಂದು ಮಾತ್ರ ಅದನ್ನು ಹೇಳಬಹುದು. ನಾಗರಿಕ ಹಾಗೂ ನಿಯಮಾನುಸಾರವಾದ ರೀತಿಯಲ್ಲಿ ಅನುಭವಿಸುವ ಸ್ವಾತಂತ್ರ್ಯ ನಿಜವಾದ ಸ್ವಾತಂತ್ರ್ಯವಾಗಿದೆ. ನಿಯಮಗಳನ್ನು ಉಲ್ಲಂಘಿಸಿ ಸಿಗುವ ಸ್ವಾತಂತ್ರ್ಯ ಕೂಡ ಸ್ವಾತಂತ್ರ್ಯವಲ್ಲ. ಅದರಲ್ಲಿ ಸ್ವಾತಂತ್ರ್ಯದ ಚೈತನ್ಯವಿರುವುದಿಲ್ಲ.

ಪೈಗಂಬರರ ಕಾಲದಲ್ಲೂ ಅದರ ಮೊದಲೂ ಸ್ತ್ರೀಗೆ ಆಸ್ತಿಯಲ್ಲಿ ಹಕ್ಕಿರಲಿಲ್ಲ. ಗಂಡ ಅವಳ ಸೊತ್ತಿಗೆ ಯಜಮಾನನಾಗಿದ್ದನು. ಪಿತನ ಸೊತ್ತಿನಲ್ಲೂ ಅವಳಿಗೆ ಹಕ್ಕಿರಲಿಲ್ಲ. ಕೆಲವೊಮ್ಮೆ ಗಂಡನ ಜೀವಿತ ಕಾಲದಲ್ಲಿ ಆತನ ಸೊತ್ತುಗಳ ಮೇಲ್ನೋಟವನ್ನು ಅವಳು ನಿರ್ವಹಿಸಿದ್ದರೂ ಆತನ ಮರಣಾ ನಂತರ ಆ ಸೊತ್ತಿನಲ್ಲಿ ಅವಳಿಗೆ ಹಕ್ಕಿರಲಿಲ್ಲ. ವಿವಾಹದ ನಂತರ ಅವಳು ಗಂಡನ ಸೊತ್ತಾದಳು. ಅವನಿಂದ ಯಾವ ರೀತಿಯಲ್ಲೂ ಬೇರ್ಪಡಲು ಅವಳಿಗೆ ಸಾಧ್ಯವಿರಲಿಲ್ಲ. ಇಷ್ಟ ಬಂದಾಗ ಗಂಡ ಅವಳನ್ನು ತ್ಯಜಿಸಬಹುದು. ಆದರೆ ಎಂತಹ ದಾರುಣ ಪರಿಸ್ಥಿತಿಯಲ್ಲಿದ್ದರೂ ಗಂಡನಿಂದ ವಿಚ್ಛೇದನ ಪಡೆಯಲು ಸ್ತ್ರೀಗೆ ಸ್ವಾತಂತ್ರ್ಯವಿರಲಿಲ್ಲ. ಗಂಡ ಅವಳನ್ನು ವಿಚ್ಛೇದಿಸಿದರೆ ಅಥವಾ ಅವಳ ಋಣಾನುಬಂಧವನ್ನು ನಿರ್ವಹಿಸದಿದ್ದರೆ, ಅಥವಾ ಬಿಟ್ಟು ಹೋದರೆ, ಅವಳನ್ನು ಸಂರಕ್ಷಿಸಲು ಯಾವ ನಿಯಮವೂ ಇರಲಿಲ್ಲ. ತನ್ನ ಪ್ರಾರಬ್ಧಕ್ಕೆ ತಲೆಬಾಗಿ ಬದುಕುವುದು ಅವಳ ಕರ್ತವ್ಯವಾಗಿತ್ತು. ತನ್ನ ಮತ್ತು ಮಕ್ಕಳ ಜೀವನವನ್ನು ಮುಂದೆ ಸಾಗಿಸಲು ಅವಳು ದುಡಿಯಬೇಕಾಗಿತ್ತು. ಕೋಪ ಬಂದಾಗ ಇಷ್ಟಬಂದಂತೆ ಥಳಿಸಲು ಗಂಡನಿಗೆ ಅಧಿಕಾರವಿತ್ತು. ಆದರೆ ಅದಕ್ಕೆ ವಿರೋಧವಾಗಿ ಚಕಾರವೆತ್ತಲು ಅವಳಿಗೆ ಹಕ್ಕಿರಲಿಲ್ಲ.

ಪತಿ ಮೃತಪಟ್ಟರೆ, ಕೆಲವು ರಾಜ್ಯಗಳ ನಿಯಮ ಪ್ರಕಾರ ಪತ್ನಿ ಅವನ ಸಂಬಂಧಿಕರ ಅಧೀನವಾಗುತ್ತಾಳೆ. ಅವರಿಚ್ಛಿಸಿದವರಿಗೆ, ದಾನವೆಂಬ ರೀತಿಯಲ್ಲಿ ಅಥವಾ ಪ್ರತಿಫಲವನ್ನು ಪಡೆದು ಅವಳನ್ನು ವಿವಾಹ ಮಾಡಿಕೊಡುವರೆ ಅವರಿಗೆ ಅಧಿಕಾರವಿತ್ತು. ಕೆಲವೆಡೆಗಳಲ್ಲಿ, ಅವಳು ಗಂಡನ ಒಂದು ಸೊತ್ತಾಗಿ ಮಾತ್ರ ಗಣಸಲ್ಪಡುತ್ತಿದ್ದಳು. ಕೆಲವು ಗಂಡಂದಿರು ಹೆಂಡಂದಿರನ್ನು ಮಾರಾಟ ಮಾಡುತ್ತಿದ್ದರು ಅಥವಾ ಜೂಜಾಡಿಯೂ ಪಂಥಕಟ್ಟಿಯೂ ಅವರನ್ನು ಕಳಕೊಳ್ಳುತ್ತಿದ್ದರು. ಹಾಗೆ ಮಾಡುವುದು ತಮ್ಮ ಹಕ್ಕೆಂದು ಅವರು ತಿಳಿದುಕೊಂಡಿದ್ದರು.

ಪತ್ನಿಯೆಂಬ ಆಶ್ರಿತ ಸ್ಥಿತಿಯಲ್ಲಾಗಲೀ ಗಂಡನಿಂದ ಸ್ವತಂತ್ರಳೆಂಬ ಸ್ಥಿತಿಯಲ್ಲಾಗಲೀ, ಸ್ತ್ರೀಗೆ ಸಂತಾನಗಳ ಮೇಲೆ ಯಾವ ಅಧಿಕಾರವೂ ಅಂಗೀಕರಿಸಲ್ಪಟ್ಟಿರಲಿಲ್ಲ. ಗೃಹ ಕಾರ್ಯಗಳಲ್ಲೂ ಅವಳಿಗೆ ಯಾವ ಸ್ವಾತಂತ್ರ್ಯವೂ ಇರಲಿಲ್ಲ. ಧರ್ಮದಲ್ಲಿ ಅವಳಿಗೆ ಯಾವ ಸ್ಥಾನವೂ ಇರಲಿಲ್ಲ. ಆಧ್ಯಾತ್ಮಿಕಾನುಗ್ರಹಗಳಲ್ಲೂ ಅವಳಿಗೆ ಪಾಲು ಸಿಗುತ್ತಿರಲಿಲ್ಲ. ಇದರ ಪರಿಣಾಮವಾಗಿ, ಗಂಡದಿರು ತಮ್ಮ ಹೆಂಡತಿಯರ ಸಂಪತ್ತನ್ನು ದುರ್ವ್ಯಯ ಮಾಡಿ ಅವರ ಉಪಜೀವನಕ್ಕೆ ಯಾವ ಏರ್ಪಾಡನ್ನೂ ಮಾಡದೆ ಕಡೆಗೆ ಬಿಟ್ಟು ಬಿಡುತ್ತಿದ್ದರು. ಗಂಡನ ಒಪ್ಪಿಗೆ ಇಲ್ಲದೆ ಅವಳ ಸ್ವಂತ ಸಂಪತ್ತಿನಿಂದಲೇ ಏನನ್ನಾದರೂ ದಾನ ಮಾಡಲಿಕ್ಕಾಗಲೀ ಸಂಬಂಧಿಕರಿಗೆ ಸಹಾಯ ನೀಡಕ್ಕಾಗಲೀ ಅವಳಿಗೆ ಸಾಧ್ಯವಾಗುತ್ತಿರಲಿಲ್ಲ. ದುರಾಸೆಯ ಗಂಡ ಅಂತಹ ಸಂದರ್ಭಗಳಲ್ಲಿ ಅವಳಿಗೆ ಒಪ್ಪಿಗೆ ಕೊಡುವುದು ಸಂಭವನೀಯವಾಗಿರಲಿಲ್ಲ.

ಮಕ್ಕಳು ಮಾತಾಪಿತರೊಂದಿಗೆ ಬಹಳ ಆಗಾಧವಾದ ಮಮತೆಯಿಂದ ಬಂಧಿಸಲ್ಪಟ್ಟವರಾಗಿದ್ದರೂ ಹೆಣ್ಣು ಮಕ್ಕಳಿಗೆ ತಮ್ಮ ಮಾತಾಪಿತರ ಸೊತ್ತುಗಳಿಂದ ಪಾಲು ಸಿಗುತ್ತಿರಲಿಲ್ಲ. ಆದರೂ ಹೆಣ್ಣು ಮಕ್ಕಳಿಗೆ ಗಂಡು ಮಕ್ಕಳಂತೆಯೇ ಮಾತಾಪಿತರ ಮೇಲೆ ಬಾಧ್ಯತೆ ಇತ್ತು. ನ್ಯಾಯ ಪ್ರಜ್ಞೆಯಿಂದ ಪ್ರೇರಿತರಾಗಿ ಮಾತಾಪಿತರು ಹೆಣ್ಣು ಸಂತಾನಗಳಿಗೆ ಸೊತ್ತಿನಲ್ಲೊಂದು ಅಂಶವನ್ನು ತಮ್ಮ ಜೀವನ ಕಾಲದಲ್ಲಿ ನೀಡಿದರೆಂದಾದರೆ, ಅದು ಕುಟುಂಬ ಕಲಹಕ್ಕೆ ನಾಂದಿಯಾಗುತ್ತಿತ್ತು. ಮಾತಾಪಿತರ ಮರಣಾನಂತರ ಅವರ ಸೊತ್ತೆಲ್ಲಾ ತಮಗೆ ಮಾತ್ರ ಲಭಿಸುವುದರಿಂದ ತಮ್ಮ ಸಹೋದರಿಯರಿಗೆ

ಮಾತಾಪಿತರಿಂದ ಏನಾದರೂ ದಾನವಾಗಿ ಸಿಗುವುದಿದ್ದರೆ ತಾವು ಅಸೂಯೆ ಪಡುವುದು ಅನುಚಿತವೆಂದು ಗಂಡು ಮಕ್ಕಳಿಗೆ ತೋಚುತ್ತಿರಲಿಲ್ಲ. ತಮಗಿಂತ ಹೆಚ್ಚು ತಮ್ಮ ಸಹೋದರಿಯರಿಗೆ ಸಿಗುತ್ತದೆಯೆಂದು ಅವರು ಭಾವಿಸುತ್ತಿದ್ದರು.

ಇದೇ ಪ್ರಕಾರ, ಪತಿಪತ್ನಿಯರ ಸಂಬಂಧ ಎಷ್ಟು ನಿಕಟವಾಗಿದ್ದರೂ ಗಂಡನ ಸೊತ್ತಿನಿಂದ ಹೆಂಡತಿಗೆ ಯಾವ ಪಾಲೂ ಸಿಗುತ್ತಿರಲಿಲ್ಲ. ಗಂಡನ ಸೊತ್ತಿನಲ್ಲಿ ಅವನ ದೂರದ ಸಂಬಂಧಿಕರೆಲ್ಲಾ ಪಾಲು ಕೇಳಬಹುದು. ಆದರೆ ಅವನ ಎಲ್ಲಾ ರಹಸ್ಯ ತಿಳಿದವಳೂ ಅಂತ್ಯ ದಿನದ ತನಕ ಅವನ ಸುಖ ದುಃಖಗಳಲ್ಲಿ ಪಾಲುಗೊಂಡವಳೂ ಅವನ ಆಸ್ತಿ ಪಾಸ್ತಿಯನ್ನು ವೃದ್ಧಿಗೊಳಿಸುವುದರಲ್ಲಿ ಗಣ್ಯವಾದ ಪಾತ್ರ ವಹಿಸಿದವಳೂ ಆದ ಪತ್ನಿಗೆ ಅವನ ಸೊತ್ತಿನ ಒಂದು ಪಾಲನ್ನು ಅನುಭೋಗಿಸಲು ಭಾಗ್ಯವಿಲ್ಲ. ಗಂಡನ ಸೊತ್ತನ್ನು ಅವಳು ಪರಿಪಾಲಿಸಿಕೊಂಡಿದ್ದಾಗಲೂ ಅದರಲ್ಲಿ ಯಾವುದರಲ್ಲೂ ಅವಳಿಗೆ ವಾಸ್ತವದಲ್ಲಿ ಹಕ್ಕಿರಲಿಲ್ಲ. ಆ ಸೊತ್ತಿನ ವರಮಾನದಿಂದ ಅವಳು ಖರ್ಚು ಮಾಡಬಹುದಿತ್ತಾದರೂ ಅದರ ಚಿಕ್ಕ ಭಾಗವನ್ನಾದರೂ ವರ್ಗಾಯಿಸಲು ಅವಳಿಗೆ ಅಧಿಕಾರವಿರಲಿಲ್ಲ. ಹಾಗೆ ದಾನ ಧರ್ಮದಲ್ಲಿ ಇಷ್ಟಾನುಸಾರ ವರ್ತಿಸಲು ಅವಳಿಗೆ ಸಾಧ್ಯವಿರುತ್ತಿರಲಿಲ್ಲ.

ಇದಲ್ಲದೆ, ಗಂಡ ಅವಳನ್ನು ಪೀಡಿಸಿದರೂ ಅವನಿಂದ ಬೇರ್ಪಟ್ಟು ಹೋಗಲು ಅವಳಿಗೆ ಸಾಧ್ಯವಿರುತ್ತಿರಲಿಲ್ಲ, ವಿವಾಹ ವಿಮೋಚನೆಗೆ ಒಪ್ಪಿಗೆ ಇದ್ದ ಸಮುದಾಯಗಳಲ್ಲಾದರೋ, ಅದಕ್ಕೆ ನಿರ್ಣಯಿಸಿದ ನಿಬಂಧನೆಗಳನ್ನು ನೆನೆಸುವಾಗ, ಸ್ವಾಭಿಮಾನವುಳ್ಳ ಯಾವ ಸ್ತ್ರೀಯೂ ಆ ರೀತಿಯ ವಿಚ್ಛೇದನಕ್ಕಿಂತ ಮರಣವನ್ನು ಇಚ್ಛಿಸುತ್ತಿದ್ದಳು. ಉದಾಹರಣೆಗಾಗಿ, ವಿವಾಹ ವಿಚ್ಛೇದನದ ಒಂದು ನಿಬಂಧನೆ, ಇಬ್ಬರಲ್ಲಿ ಯಾರಾದರೂ ವ್ಯಭಿಚರಿಸಿದುದಾಗಿ ರುಜುಪಡಿಸುವುದಾಗಿದೆ. ಹಾಗೇಯೇ ಗಂಡನ ಕ್ರೂರವಾದ ವರ್ತನೆಗಳು ಸಾಕ್ಷ್ಯೀಕರಿಸಲ್ಪಡಬೇಕು. ಇದಕ್ಕಿಂತಲೂ ಕಷ್ಟತರದ್ದು ಗಂಡನೊಂದಿಗೆ ಸಹಜೀವನ ನಡೆಸಲು ಸಾಧ್ಯವಿಲ್ಲದ ಸಂಧರ್ಭದಲ್ಲಿ, ಪೂರ್ಣವಾದ ವಿಚ್ಛೇದನದ ಬದಲು ಆಗಲಿ ಜೀವಿಸುವರೆ ಅನುಮತಿ ಮಾತ್ರವೇ ಲಭಿಸುತ್ತೆಂಬುದು. ಈ ಏಕಾಂತ ಜೀವಿತವೇ ಒಂದು ಕಠಿಣ ಶಿಕ್ಷೆಯಾಗಿದೆ. ಈ ರೀತಿಯಲ್ಲಿ ಅವಳು ಶೂನ್ಯವೂ ಉದ್ದೇಶ ರಹಿತವೂ ಆದ ಒಂದು ಜೀವನವನ್ನು ನಡೆಸಬೇಕಾಗುತ್ತಿತ್ತು.

ಗಂಡ ಇಚ್ಛಾನುಸಾರ ಪತ್ನಿಯನ್ನು ವಿವಾಹ ವಿಚ್ಛೇದನ ಮಾಡಬಹುದಾದರೂ ಪತ್ನಿ ಯಾವ ಪರಿಸ್ಥಿತಿಯಲ್ಲೂ ವಿಚ್ಛೇದನಕ್ಕಾಗಿ ಅಗತ್ಯಪಡುವುದು ಸಾಧ್ಯವಿರಲಿಲ್ಲ. ಗಂಡ ಅವಳನ್ನು ತ್ಯಜಿಸಿದರೆ, ಅವಳ ಪಾಲನೆ ಪೋಷಣೆಗೆ ಏನನ್ನೂ ಮಾಡದೆ ಅವನು ಊರು ಬಿಟ್ಟು ಹೋದರೆ, ರಾಜ್ಯಕ್ಕೆ ಅಥವಾ ಸಮುದಾಯಕ್ಕೆ ಉಪಕಾರವಾಗುವ ರೀತಿಯಲ್ಲಿ ಜೀವನವನ್ನರ್ಪಿಸಲು ಸಹ ಸ್ವಾತಂತ್ರ್ಯವಿಲ್ಲದೆ ಜೀವನಕಾಲವೆಲ್ಲಾ ಅವಳು ನಿರರ್ಥಕವಾಗಿ ಕಳೆಯಬೇಕಾಗಿತ್ತು. ವಿವಾಹ ಬಂಧ ಸಂತುಷ್ಟವಾದ ಒಂದು ಜೀವನವಾಗುವ ಬದಲಿಗೆ ಒಂದು ಸಂತಪ್ತ ಜೀವನವಾಗಿ ಅವಳಿಗೆ ಪರಿಣಮಿಸುತ್ತಿತ್ತು. ತನ್ನ ಮತ್ತು ತನ್ನ ಗಂಡನ ಹೊಣೆಗಳನ್ನು ಸಹ ನಿರ್ವಹಿಸುವುದರೊಂದಿಗೆ ಗಂಡನ ಬರವನ್ನೇ ನಿರೀಕ್ಷಿಸುತ್ತಾ ಅವಳು ದಿನಕಳೆಯಬೇಕಾಗಿತ್ತು. ಉಪಜೀವನ ಮಾರ್ಗವನ್ನು ಕಂಡು ಹಿಡಿಯುವ ಗಂಡನ ಕರ್ತವ್ಯ ಮತ್ತು ಮಕ್ಕಳ ಪಾಲನೆ ಪೋಷಣೆ ಮಾಡುವ ತನ್ನ ಸ್ವಂತ ಕರ್ತವ್ಯ ಎರಡನ್ನೂ ಅವಳೇ ನಿರ್ವಹಿಸಬೇಕಾಗಿತ್ತು. ಒಂದು ಕಡೆಯಲ್ಲಿ ಗಂಡ ಬಿಟ್ಟು ಹೋದ ಮನೋವ್ಯಥೆ; ಇನ್ನೊಂದು ಕಡೆಯಲ್ಲಿ ತನ್ನ ಮತ್ತು ಮಕ್ಕಳ ಜೀವನ ಸಾಗಿಸುವ ಮಹಾಭಾರ. ಸಂಕ್ಷಿಪ್ತವಾಗಿ, ರಕ್ಷಣೆಯಿಲ್ಲದ, ಬಡಪಾಯಿಯಾದ ಸ್ತ್ರೀ ಎಂಬ ಈ ಜೀವಿ ಇದನ್ನೆಲ್ಲಾ ಸಹಿಸಿಕೊಳ್ಳಬೇಕೆಂದಾಗಿತ್ತು ಅಂದಿನ ಸ್ಥಿತಿ. ಸ್ತ್ರೀಯನ್ನು ಥಳಿಸಲಾಗುತ್ತಿತ್ತು. ಅವಳನ್ನು ಗಂಡನ ಸೊತ್ತೆಂದು ಪರಿಗಣಿಸಲಾಗುತ್ತಿತ್ತು. ಗಂಡ ತೀರಿಹೋದರೆ ಅವಳನ್ನು ಬಲವಂತವಾಗಿ ಅವನ ಸಮೀಪದ ಸಂಬಂಧಿಕರಿಗೆ ಮದುವೆ ಮಾಡಿಕೊಡುತ್ತಿದ್ದರು; ಅಥವಾ ಹಣಕ್ಕಾಗಿ ಬೇರೆ ಯಾರಿಗಾದರೂ ಮಾರಾಟ ಮಾಡುತ್ತಿದ್ದರು. ಗಂಡನೇ ಹೆಂಡತಿಯನ್ನು ಮಾರಾಟ ಮಾಡಿದ ಸಂಭವವಿದೆ. ಪಾಂಡವರಂತಹ ಭಾರತೀಯ ರಾಜಕುಮಾರರು ತಮ್ಮ ಪತ್ನಿಯನ್ನು ಜೂಜಾಟದಲ್ಲಿ ಕಳಕೊಳ್ಳಬೇಕಾಯಿತು. ರಾಜ್ಯದ ನಿಯಮವನ್ನನುಸರಿಸಿ, ದ್ರೌಪದಿಯಂತಹ ಶ್ರೇಷ್ಠ ರಾಜಕುಮಾರಿಗಾಗಲಿ ಶಬ್ದವೆತ್ತಲು ಸಾಧ್ಯವಿರಲಿಲ್ಲ.

ಮಕ್ಕಳ ವಿದ್ಯಾಭ್ಯಾಸದ ವಿಷಯದಲ್ಲಾಗಲಿ ತಾಯಿಯ ಇಚ್ಛೆಯನ್ನು ವಿಚಾರಿಸಲಾಗುತ್ತಿರಲಿಲ್ಲ. ತನ್ನ ಮಕ್ಕಳ ಮೇಲೆ ಅವಳಿಗೆ ಯಾವ ಅಧಿಕಾರವೂ ಇರಲಿಲ್ಲ. ತಂದೆ-ತಾಯಿ ಪರಸ್ಪರ ಬೇರ್ಪಟ್ಟರೆ ಮಕ್ಕಳನ್ನು ತಂದೆಗೆ ಒಪ್ಪಿಸಲಾಗುತ್ತಿತ್ತು. ಗಂಡನ ಜೀವಿತಕಾಲದಲ್ಲಿಯೂ ಮರಣಾನಂತರವೂ ಸ್ತ್ರೀಗೆ ಗೃಹಕಾರ್ಯದಲ್ಲಿ ಯಾವ ಅಧಿಕಾರವೂ ಇರಲಿಲ್ಲ. ಗಂಡ ಇಚ್ಛಿಸಿದಾಗ ಯಾವ ಸಂದರ್ಭದಲ್ಲೂ ಅವಳನ್ನು ಮನೆಯಿಂದ ಹೊರಗೆ ಹಾಕಲು ಅವನಿಗೆ ಅಧಿಕಾರವಿತ್ತು. ಅಂತಹ ಸಂದರ್ಭದಲ್ಲಿ ಅವಳು ಅಲೆದು ಜೀವನ ಸಾಗಿಸಬೇಕಾಗಿತ್ತು.

## ಸ್ತ್ರೀ - ಇಸ್ಲಾಮಿನಲ್ಲಿ

ಪೈಗಂಬರರ ಅವಿರ್ಭಾವದ ನಂತರ ಈ ಎಲ್ಲಾ ಅನ್ಯಾಯಗಳು ಒಂದೇ ಹೊಡೆತಕ್ಕೆ ಎಂಬಂತೆ ನಿವಾರಿಸಲ್ಪಟ್ಟವು. ಸ್ತ್ರೀಯರ ಹಕ್ಕುಗಳನ್ನು ಸಂರಕ್ಷಿಸಲಿಕ್ಕೆ ದೇವರು ವಿಶಿಷ್ಟ ರೀತಿಯಲ್ಲಿ ತನಗೆ ನಿರ್ದೇಶವಿತ್ತಿರುವನೆಂದು ಅವರು ಘೋಷಿಸಿದರು. ಮಾನವೀಯತೆಯ ಆಧಾರದಲ್ಲಿ ಸ್ತ್ರೀ-ಪುರುಷರಲ್ಲಿ ವ್ಯಾತ್ಯಾಸವಿಲ್ಲವೆಂದೂ ಒಟ್ಟಿಗೆ ಜೀವನ ನಡೆಸುವಾಗ ಪುರುಷನಿಗೆ ಸ್ತ್ರೀಯ ಮೇಲೆ ಕೆಲವು ಹಕ್ಕಿರುವಂತೆ ಸ್ತ್ರೀಗೆ ಪುರುಷನ ಮೇಲೆ ಸಹ ಕೆಲವು ಹಕ್ಕುಗಳಿವೆಯೆಂದೂ ಅವರು ದೇವರ ಹೆಸರಿನಲ್ಲಿ ಪ್ರಖ್ಯಾಪನ ಮಾಡಿದರು. ಪುರುಷ ಸೊತ್ತಿನ ಹಕ್ಕುದಾರನಾಗುವ ಹಾಗೆಯೇ ಸ್ತ್ರೀಯೂ ಹಕ್ಕುದಾರಳಾಗಬಹುದು. ಪತ್ನಿ ಸ್ವ ಇಚ್ಛೆಯಿಂದ ತನ್ನ ಸೊತ್ತಿನಿಂದ ಒಂದು ಪಾಲನ್ನು ಗಂಡನಿಗೆ ಬಿಟ್ಟುಕೊಡದಿದ್ದರೆ ಅವಳ ಸೊತ್ತನ್ನು ಉಪಯೋಗಿಸಲು ಅವನಿಗೆ ಅಧಿಕಾರವಿಲ್ಲ. ಅವಳ ಸಂಪತ್ತನ್ನು ಬಲಾತ್ಕಾರದಿಂದ ಅಥವಾ ಸ್ವಾಭಾವಿಕವಾದ ಅವಳ ಲಜ್ಜಾ ಕಾರಣದಿಂದ ಅವಳು ಅಸಮ್ಮತಿಯನ್ನು ಸೂಚಿಸದಿದ್ದರೆ ಅದನ್ನೇ ಒಪ್ಪಿಗೆಯೆಂದು ಭಾವಿಸಿ ಅಪಹರಿಸುವುದು ತಪ್ಪು. ಗಂಡ ತನ್ನ ಇಚ್ಛೆಯಿಂದ ಏನನ್ನಾದರೂ ಪತ್ನಿಗೆ ಕೊಟ್ಟ ನಂತರ, ಅದು ಅವಳ ಸೊತ್ತಾಗುತ್ತದೆ. ಅದನ್ನು ಹಿಂದಕ್ಕೆ ಪಡೆಯಲು ಅವನಿಗೆ ಹಕ್ಕಿಲ್ಲ. ಪಾರಂಪರ್ಯ ಸೊತ್ತಿನಲ್ಲಿ ಅವಳಿಗೆ ತನ್ನ ಸಹೋದರರಂತೆಯೇ ಹಕ್ಕಿದೆ. ಕುಟುಂಬದ ಎಲ್ಲಾ ವಿಧ ಹೊಣೆ ಪುರುಷನ ಮೇಲೆ ಬೀಳುವುದಾದರೂ ಸ್ತ್ರೀಗೆ ತನ್ನ ಸ್ವಂತದ ಬಗ್ಗೆ ಮಾತ್ರ ಗಮನಿಸಿದರೆ ಸಾಕಾಗುವುದರಿಂದಾಗಿ,

ಮಾತಾಪಿತರ ಸೊತ್ತಿನಲ್ಲಿ ಪುರುಷನ ಪಾಲಿನ ಸರಿ ಅರ್ಧವನ್ನು ಸ್ತ್ರೀಗೆ ನಿಶ್ಚಯಿಸಲಾಗಿದೆ. ಇದೇ ರೀತಿಯಲ್ಲಿ, ಮೃತಹೊಂದಿದ ಪುತ್ರನ ಸೊತ್ತಿನಲ್ಲಿ ತಂದೆಯ ಹಾಗೆಯೇ ತಾಯಿಗೂ ಹಕ್ಕಿದೆ. ಪರಿಸ್ಥಿತಿ ಹಾಗೂ ಜವಾಬ್ದಾರಿಕೆಗಳನ್ನು ಪರಿಗಣಿಸಿ ಕೆಲವು ಸಂದರ್ಭಗಳಲ್ಲಿ ತಂದೆಗೆ ಸಿಗುವಂತಹ ಪಾಲು ಅಥವಾ ಅದಕ್ಕಿಂತ ಕಮ್ಮಿಯಾಗಿರುವ ಪಾಲು ತಾಯಿಗೆ ಸಿಗುತ್ತದೆ. ಗಂಡ ಮೃತ ಪಟ್ಟರೆ, ಮಕ್ಕಳಿದ್ದರೂ ಇಲ್ಲವಾದರೂ ಆತನ ಸೊತ್ತಿನಲ್ಲಿ ಹೆಂಡತಿಗೆ ಹಕ್ಕಿದೆ. ಅವಳು ಅನ್ಯರ ಆಶ್ರಿತಳಾಗಿ ದಿನಕಳೆಯಬೇಕಾದ ದುರವಸ್ಥೆಗೆ ತುತ್ತಾಗಬಾರದೆಂದು ಇದರ ಉದ್ದೇಶವಾಗಿದೆ.

ಮದುವೆ ಎಂಬುದು ಒಂದು ಪವಿತ್ರ ಸಂಬಂಧವಾಗಿದೆ. ಪುರುಷನೂ ಸ್ತ್ರೀಯೂ ಅನ್ಯೋನ್ಯ ಅತ್ಯಂತ ಬದ್ಧಸ್ನೇಹವುಳ್ಳವರಾಗಿದ್ದುಕೊಂಡು, ನಂತರ ಅದನ್ನು ವಿಚ್ಛೇದಿಸುವುದು ಬಹಳ ಖೇದಕರ ಸಂಗತಿಯಾಗಿದೆ. ಆದರೂ, ಈರ್ವರಿಗೂ ಪತಿ-ಪತ್ನಿ ಎಂಬ ಸ್ಥಿತಿಯಲ್ಲಿ ಒಟ್ಟಿಗೆ ಜೀವಿಸಲು ಪ್ರಯಾಸಕರವಾದ ರೀತಿಯಲ್ಲಿ ಅವರೆಡೆಯಲ್ಲಿ ಸ್ವಭಾವ ಭಿನ್ನತೆಯಿದೆಯೆಂದು ಗೋಚರಿಸುವಾಗ; ಧಾರ್ಮಿಕವಾಗಿ, ಶಾರೀರಿಕವಾಗಿ, ಸಾಂಪತ್ತಿಕವಾಗಿ, ಸಾಮಾಜಿಕವಾಗಿ, ಮಾನಸಿಕವಾಗಿ ಏನಾದರೂ ವಿಪರ್ಯಾಸ ತೋರುವಾಗ, ಬರೇ ನೆಂಟುತನ ಹೆಸರಿನಲ್ಲಿ ಅವರ ಜೀವನವನ್ನು ಹಾಳುಗೆಡಹಲಿಕ್ಕೂ ಜನ್ಮೋದ್ದೇಶವನ್ನು ಅಸಾಫಲ್ಯಗೊಳಿಸಲಿಕ್ಕೂ ಅವರನ್ನು ನಿರ್ಬಂಧಿಸಬಾರದು. ಅಂತಹ ವೈಪರೀತ್ಯಗಳುಂಟಾಗುವಾಗ, ತಮಗೆ ಒಟ್ಟಿಗೆ ಜೀವಿಸಲಿಕ್ಕೆ ಪ್ರಯಾಸಕರವೆಂದು ಸ್ತ್ರೀ ಮತ್ತು ಪುರುಷ ಈರ್ವರಿಗೂ ಮನದಟ್ಟಾದರೆ, ಪರಸ್ಪರ ಒಪ್ಪಿಕೊಂಡು ಅವರಿಗೆ ಆ ವಿವಾಹ ಬಂಧವನ್ನು ಮುರಿಯಲು ಸಾಧ್ಯವಿದೆ. ವಿಚ್ಛೇದನಕ್ಕೆ ಗಂಡ ಮಾತ್ರ ಅಗತ್ಯ ಪಡಿಸಿ ಹೆಂಡತಿ ಅದಕ್ಕೆ ಸಮ್ಮತಿಸದೆ ಇದ್ದು, ಅನ್ಯೋನ್ಯ ಜೀವನವನ್ನು ಅಳವಡಿಸಲು ಅಸಾಧ್ಯವಾಗುವಾಗ, ಅವರ ಕುರಿತು ಪರ್ಯಾಲೋಚನೆ ಮಾಡಿ ಅದಕ್ಕೆ ಒಂದು ಪರಿಹಾರವನ್ನು ಕಂಡುಹಿಡಿಯಲು ಎರಡು ಮಂದಿಯ ಒಂದು ಸಮಿತಿಯನ್ನು ರೂಪಿಸಬೇಕು. ಅದರಲ್ಲಿ ಒಬ್ಬ ಪ್ರತಿನಿಧಿ ಗಂಡನ ಕಡೆಯಿಂದಲೂ ಇನ್ನೊಬ್ಬ ಹೆಂಡತಿಯ ಕಡೆಯಿಂದಲೂ ಇರಬೇಕು. ಗಂಡ ಮತ್ತು ಹೆಂಡತಿ ಒಟ್ಟಿಗೆ ಜೀವಿಸಲಿಕ್ಕೆ ಇನ್ನೊಮ್ಮೆ ಪ್ರಯತ್ನಿಸಬೇಕೆಂದು ಸಮಿತಿ ತೀರ್ಮಾನಿಸುವುದಾದರೆ, ಸಮಿತಿಯ ಸಲಹೆಯಂತೆ, ಆ ದಂಪತಿ ತಮ್ಮ ಭಿನ್ನತೆಗಳನ್ನು ಸರಿಪಡಿಸಲು ಇನ್ನೊಮ್ಮೆ ಯತ್ನಿಸಬೇಕು. ಆದರೂ ಪತಿ-ಪತ್ನಿಯಂತೆ ಜೀವಿಸಲು ನಿರ್ವಾಹವಿಲ್ಲವೆಂದು ಕಂಡುಬರುವುದಾದರೆ. ಗಂಡ ಹೆಂಡತಿಯನ್ನು ವಿಚ್ಛೇದನ ಮಾಡಿಕೊಳ್ಳಬಹುದು. ಹಾಗೆ ಗಂಡ ಹೆಂಡತಿಯನ್ನು ಬಿಡುವನಾದರೆ, ಅವನು ಅವಳಿಗೆ ಇದರ ಮೊದಲು ನೀಡಿದ ಮಹರ್ (ವಿವಾಹ ಮೂಲ್ಯ) ಸಹಿತ ಏನನ್ನೂ ಹಿಂದೆ ಪಡೆಯಲು ಅವನಿಗೆ ಹಕ್ಕಿಲ್ಲ. ಗಂಡ ಇಚ್ಛಿಸದೆ, ಹೆಂಡತಿ ಮಾತ್ರ ವಿವಾಹ ವಿಚ್ಛೇದನಕ್ಕೆ ಇಚ್ಛಿಸುವವಳಾದರೆ, ಅವಳು ಖಾಝಿ (ನ್ಯಾಯಾಧೀಶ)ಗೆ ಅರ್ಜಿ ಸಲ್ಲಿಸಬೇಕು. ಅವಳ ಅಪೇಕ್ಷೆಯ ಹಿಂದೆ ಏನೂ ದುರುದ್ದೇಶದ ಪ್ರೇರಣೆಯಿಲ್ಲವೆಂದು ಖಾಝಿಗೆ ಮನವರಿಕೆಯಾದರೆ ಅವಳಿಗೆ ಆತನು ವಿವಾಹ ವಿಚ್ಛೇದನವನ್ನು ವಿಧಿಸಬೇಕು. ಅಂತಹ ಸಂದರ್ಭಗಳಲ್ಲಿ ಮಾತ್ರ ಅವಳಿಗೆ ನೀಡಿದ ಮಹರ್ ಮತ್ತು ಇತರ ಎಲ್ಲಾ ಸೊತ್ತುಗಳನ್ನು ಅವಳು ವಾಪಾಸು ಕೊಡಬೇಕಾಗಿದೆ. ದಾಂಪತ್ಯ ನಿಯಮಗಳನ್ನು ಗಂಡ ಪಾಲಿಸದಿದ್ದರೆ, ಅವನು ಅವಳೊಡನೆ ಮಾತುಕತೆ ನಿಲ್ಲಿಸಿದರೆ, ಬೇರೆಯಾಗಿ ಮಲಗಿಕೊಳ್ಳಲು ಅವನು ಅವಳನ್ನು ಅಗತ್ಯಪಡಿಸುವನಾದರೆ, ಅದಕ್ಕೊಂದು ಕಾಲ ಮಿತಿ ಇದೆ. ನಾಲ್ಕು ತಿಂಗಳ ಕಾಲ ಈ ಪರಿಸ್ಥಿತಿ ಮುಂದುವರಿಯುವುದಾದರೆ, ತನ್ನ ಸ್ವಭಾವವನ್ನು ಪರಿವರ್ತಿಸಲು ಅವನನ್ನು ಒತ್ತಾಯಿಸಬೇಕು. ಅಥವಾ ವಿವಾಹ ವಿಚ್ಛೇದನ ಮಾಡಲಿಕ್ಕೆ ಅವನನ್ನು ನಿರ್ಬಂಧಿಸಬೇಕು. ಅವನು ಅವಳಿಗೆ ಖರ್ಚು ಕೊಡುವುದಿಲ್ಲವಾದರೆ, ಅವಳನ್ನು ಸಂರಕ್ಷಿಸಲಿಕ್ಕೆ ಮನಸ್ಸು ಕೊಡುವುದಿಲ್ಲವಾದರೆ, ಅವರ ವಿವಾಹ ಸಂಬಂಧ ರದ್ದುಗೊಂಡಿತೆಂದು ಪರಿಗಣಿಸಬೇಕು. (ಮುಸ್ಲಿಂ ನ್ಯಾಯ ಶಾಸ್ತ್ರಜ್ಞರು ಇದಕ್ಕೆ ಮೂರು ವರ್ಷಗಳ ಕಾಲಾವಧಿ ನಿರ್ಣಯಿಸಿದ್ದಾರೆ). ಆಗ ಆ ಸ್ತ್ರೀ ಅವನನ್ನು ಬಿಟ್ಟು ಬೇರೆ ವಿವಾಹ ಮಾಡಿಕೊಳ್ಳಬಹುದಾಗಿದೆ.

ಪತ್ನಿ ಮತ್ತು ಮಕ್ಕಳನ್ನು ಸಂರಕ್ಷಿಸುವ ಹೊಣೆ ಯಾವಾಗಲೂ ಗಂಡನಿಗಿದೆ. ಪತ್ನಿಗೆ ಯೋಗ್ಯ ಶಿಸ್ತುಕ್ರಮ ಕಲಿಸುವ ಅಧಿಕಾರ ಗಂಡನಿಗಿದೆ. ಶಿಸ್ತುಕ್ರಮ ಕೈಗೊಂಡು ಅವಳನ್ನು ಶಿಕ್ಷಿಸಲು ಬಯಸುವನಾದರೆ, ಅವಳ ಅಪರಾಧವನ್ನು ಸಾಕ್ಷ್ಯಗಳ ಸಹಿತ ಸಮರ್ಥಿಸಬೇಕಾಗಿದೆ. ಆದರೆ ಶರೀರಕ್ಕೆ ಊನ ಉಂಟಾಗುವ ರೀತಿಯಲ್ಲಿ ಅವಳನ್ನು ಶಿಕ್ಷಿಸಬಾರದು. ಗಂಡನಿಗೆ ಹೆಂಡತಿಯ ಮೇಲೆ ಮಾಲಿಕತ್ವವಿಲ್ಲ. ಅವಳನ್ನು ಮಾರಾಟಮಾಡುವುದಾಗಲಿ, ಕೇವಲ ಮನೆ ಕೆಲಸಗಾರಳಂತೆ ನೋಡಿಕೊಳ್ಳುವುದಾಗಲಿ ಕೂಡದು. ಗೃಹಕಾರ್ಯಗಳಲ್ಲಿ ಅವಳು ಅವನ ಪಾಲುದಾರಳಾಗಿದ್ದಾಳೆ. ತನ್ನ ರೀತಿಯಲ್ಲೇ ಅವನು ಅವಳನ್ನು ಭಾವಿಸಬೇಕು. ತನಗಿಂತ ಕೀಳು ಮಟ್ಟದಲ್ಲಿ ಅವಳನ್ನು ಕಾಣುವುದು ಸರಿಯಲ್ಲ. ಗಂಡ ತೀರಿಹೋದರೆ ಅವನ ಸಂಬಂಧಿಕರಿಗೆ ಅವಳ ಮೇಲೆ ಯಾವ ಅಧಿಕಾರವೂ ಇಲ್ಲ. ಅವಳು ಸಂಪೂರ್ಣ ಸ್ವತಂತ್ರಳು. ತಕ್ಕ ಸಂದರ್ಭವೊದಗಿ ಬಂದಾಗ, ಬೇರೆ ವಿವಾಹ ಮಾಡಿಕೊಳ್ಳಲು ಅವಳಿಗೆ ಸ್ವಾತಂತ್ರ್ಯವಿದೆ. ಹಾಗೆ ಮಾಡುವುದರಿಂದ ಅವಳನ್ನು ತಡೆಯಲು ಯಾರಿಗೂ ಅಧಿಕಾರವಿಲ್ಲ. ವಿಧವೆಯನ್ನು ಪ್ರತ್ಯೇಕ ಸ್ಥಳದಲ್ಲಿ ವಾಸಿಸಲಿಕ್ಕೆ ನಿರ್ಬಂಧಿಸಬಾರದು. ವಿಧವೆ ನಾಲ್ಕು ತಿಂಗಳು ಹತ್ತು ದಿನಗಳ ಕಾಲ ಮಾತ್ರ ತನ್ನ ಗಂಡನ ಮನೆಯಲ್ಲಿ ವಾಸಿಸುವಳು. ಅವಳ ಮತ್ತು ಅವಳ ಗಂಡನ ಸಂಬಂಧಿಕರ ಹಕ್ಕುಗಳಿಗೆ ಸಂಬಂಧಿಸಿದ ಎಲ್ಲಾ ಸಂಗತಿಗಳು ಈ ಅವಧಿಯೊಳಗೆ ಬಹಿರಂಗವಾಗಬೇಕು. ಗಂಡ ಮೃತಿ ಹೊಂದಿದ ನಂತರ ಒಂದು ವರ್ಷದ ವರೆಗೆ ಇತರ ಹಕ್ಕುಗಳ ಜೊತೆಗೆ ಗಂಡನ ಮನೆಯನ್ನು ಕೂಡ ಉಪಯೋಗಿಸಲು ಅವಳಿಗೆ ಹಕ್ಕು ಇದೆ. ಗಂಡನ ಆಸ್ತಿಯಿಂದ ತನಗೆ ಲಭಿಸುವ ಪಾಲಿನಲ್ಲಿ ಬೇರೊಂದು ವಾಸಸ್ಥಳದ ಸೌಕರ್ಯವನ್ನು ಮಾಡಿಕೊಳ್ಳುವರೆ ಸಾಕಷ್ಟು ಸಮಯವನ್ನು ನೀಡುವುದು ಇದರ ಉದ್ದೇಶವಾಗಿದೆ. ಹೆಂಡತಿಯೊಂದಿಗೆ ಸಾಮರಸ್ಯದಿಂದ ಒಡನಾಟಮಾಡಲು ಗಂಡನಿಗೆ ಸಾಧ್ಯವಾಗುವುದಿಲ್ಲವಾದರೆ ಅವನು ಮನೆಯಿಂದ ಹೊರಗೆ ಹೋಗಿ ವಾಸಿಸಬೇಕು ಹೊರತು ಮನೆಯಿಂದ ಹೊರಗೆ ಹೋಗಲಿಕ್ಕೆ ಹೆಂಡತಿಯನ್ನು ಅಗತ್ಯಪಡಿಸಬಾರದು.

ಮಕ್ಕಳ ಪರಿಪಾಲನೆಯಲ್ಲಿ ಸ್ತ್ರೀಗೆ ಅವಳ ಪಾತ್ರವಿದೆ. ಆ ಬಗ್ಗೆ ಅವಳೊಡನೆ ಸಮಾಲೋಚನೆ ನಡೆಸಬೇಕಾಗಿದೆ. ಮಕ್ಕಳ ಸಂಗತಿಯಲ್ಲಿ ಅವಳ ಅಭೀಷ್ಟಗಳನ್ನೂ ಆಸಕ್ತಿಗಳನ್ನೂ ಅವಗಣಿಸಬಾರದು. ದಾದಿಯನ್ನು ನೇಮಿಸುವುದು, ಮಕ್ಕಳ ಪಾಲನೆ ಪೋಷಣೆ ಮಾಡುವುದು ಮುಂತಾದ ಕಾರ್ಯಗಳಲ್ಲಿ ಅವಳ ಸಲಹೆಯನ್ನು ಅನುಸರಿಸಬೇಕಾಗಿದೆ. ಪತಿ ಪತ್ನಿಯರಿಗೆ ಒಟ್ಟಿಗೆ ಜೀವಿಸಲು ಅಸಾಧ್ಯವಾಗಿ, ಅಗಲಿಕೊಳ್ಳಲು ತೀರ್ಮಾನಿಸುವುದಾದರೆ,

ಚಿಕ್ಕ ಮಕ್ಕಳನ್ನು ತಾಯಿಯ ಅಧೀನಕ್ಕೆ ಒಪ್ಪಿಸಬೇಕಾಗಿದೆ. ಪ್ರಾಯಕ್ಕೆ ಬಂದರೆ ವಿದ್ಯಾಭ್ಯಾಸವನ್ನು ಪಡೆಯಲಿಕ್ಕಾಗಿ ಅವರು ತಂದೆಯ ಬಳಿಗೆ ಬರಬಹುದು. ತಾಯಿಯೊಂದಿಗೆ ಇರುವಾಗಲೂ ಮಕ್ಕಳ ಖರ್ಚಿಗೆ ಕೊಡಲು ತಂದೆ ಹೊಣೆಗಾರನಾಗಿದ್ದಾನೆ. ಮಕ್ಕಳನ್ನು ಸಾಕಲಿಕ್ಕಾಗಿ ತಾಯಿ ಮಾಡಿದ ದೈಹಿಕ ಶ್ರಮಕ್ಕೂ ವ್ಯಯಿಸಿದ ಸಮಯಕ್ಕೂ ತಂದೆ ಪ್ರತಿಫಲ ನೀಡಬೇಕು. ಸಂಕ್ಷಿಪ್ತವಾಗಿ, ಸ್ತ್ರೀಗೆ ಸ್ವತಂತ್ರವಾದ ಒಂದು ಸ್ಥಾನವಿರಬೇಕಾಗಿದೆ. ಆಧ್ಯಾತ್ಮಿಕವಾದ ಎಲ್ಲಾ ಅನುಗ್ರಹಗಳ ದಾರಿ ಅವಳಿಗೆ ತೆರೆದಿರಿಸಲ್ಪಡಬೇಕಾಗಿದೆ. ಮರಣಾನಂತರ ಜೀವಿತದಲ್ಲಿ ಅತ್ಯಂತ ಉತ್ಕೃಷ್ಟ ಪದವಿಗಳು ಅವಳಿಗೆ ಲಭಿಸಬೇಕಾಗಿದೆ. ಐಹಿಕ ಜೀವನದಲ್ಲಿ ಮತ್ತು ಪೌರಾಡಳಿತದಲ್ಲಿ ಅವಳಿಗೆ ತನ್ನ ಪಾತ್ರ ವಹಿಸಬಹುದಾಗಿದೆ. ಈ ಸಂಗತಿಗಳಲ್ಲೆಲ್ಲಾ ಪುರಷನಿಗಿರುವ ಸ್ಥಾನ ಸ್ತ್ರೀಗೆ ಸಹ ಕೊಡಬೇಕಾಗಿದೆ.

## ಸ್ತ್ರೀ - ಇಸ್ಲಾಮಿನ ನಂತರ

ಮುಹಮ್ಮದ್ ಪೈಗಂಬರರು ಸ್ತ್ರೀಯರಿಗೆ ಸಂಬಂಧಿಸಿ ಘೋಷಿಸಿದ ತತ್ವಗಳೂ ನಿಯಮಗಳೂ ಈ ಮೇಲೆ ವಿವರಿಸಿದುದಾಗಿವೆ. ಆದರೆ ಪೈಗಂಬರರು ಇದನ್ನು ಜ್ಯಾರಿಗೊಳಿಸಿದ ಕಾಲದಲ್ಲಿ ಲೋಕದ ಬೌದ್ಧಿಕ ಹಾಗೂ ಸಾಂಸ್ಕೃತಿಕ ನೆಲೆ ಈ ಸಾಮಾಜಿಕ ಸುಧಾರಣೆಯನ್ನು ಅಂಗೀಕರಿಸುವ ಮಟ್ಟದಲ್ಲಿರಲಿಲ್ಲ. ಆದುದರಿಂದ ವಿರೋಧಗಳನ್ನು ಎದುರಿಸಬೇಕಾಗಿ ಬಂತು. ಈ ನಿರ್ದೇಶ-ಉಪದೇಶಗಳ ಮೂಲಕ ಸಹಸ್ರ ವರ್ಷಗಳ ಕಾಲ ಎಲ್ಲಾ ರಾಜ್ಯಗಳಲ್ಲೂ ಸ್ತ್ರೀ ಅನುಭವಿಸಬೇಕಾದ ದುರವಸ್ಥೆಯಿಂದ ಮತ್ತು ಧರ್ಮ ಅವಳ ಕುತ್ತಿಗೆಯ ಮೇಲಿರಿಸಿದ ಗುಲಾಮತನದ ನೊಗದಿಂದ ಅವಳನ್ನು ಅವರು ಮುಕ್ತಗೊಳಿಸಿದರು. ಒಬ್ಬನೇ ಒಬ್ಬ ವ್ಯಕ್ತಿ ಒಂದೇ ಹೊಡೆತಕ್ಕೆ ಈ ದಾಸತ್ವದ ಸಂಕೋಲೆಯನ್ನು ತುಂಡರಿಸಿದರು. ತಾಯಂದಿರನ್ನು ಸ್ವತಂತ್ರಗೊಳಿಸಿ ಗುಲಾಮತನದ ಮನೋಭಾವದಿಂದ ಸಂತಾನಗಳನ್ನು ಪಾರುಮಾಡಿ ಅವರಲ್ಲಿ ಉತ್ಕೃಷ್ಟ ಮನೋಭಾವನೆಗಳೂ ವಿರೋಚಿತ ಉತ್ಸಾಹವೂ ಅಂಕುರಿಸಲು ಅರ್ಹರನ್ನಾಗಿ ಮಾಡಿದರು.

ಆದರೂ ಲೋಕ ಈ ಅಧ್ಯಾಪನಗಳನ್ನು ಮನ್ನಿಸಲಿಲ್ಲ. ಯಥಾರ್ಥದಲ್ಲಿ, ವರವನ್ನು ಉಗ್ರಶಾಸನವೆಂದು ಮುದ್ರೆಯೊತ್ತಲಾಯಿತು. ವಿವಾಹ ವಿಚ್ಛೇದನ ಮತ್ತು ಅಗಲಿಕೆ ಕಲಹಕ್ಕೆ ಕಾರಣವಾಗುವುದೆಂದೂ ಪಾರಂಪರ್ಯ ಹಕ್ಕು ಕುಟುಂಬವನ್ನು ನಾಶಗೊಳಿಸುವುದೆಂದೂ ಸ್ತ್ರೀ ಸ್ವಾತಂತ್ರ್ಯ ಗೃಹಜೀವನವನ್ನು ಹಾನಿಗೊಳಿಸುವುದೆಂದೂ ಭಾವಿಸಲಾಯಿತು. ಆ ಮಹಾ ಪುರುಷ ಮನುಷ್ಯವಂಶದ ಒಳಿತಿಗಾಗಿ ಜ್ಯಾರಿಗೊಳಿಸಲು ಇಚ್ಛಿಸಿದ ಈ ತತ್ವಗಳನ್ನು ಲೋಕ ಹದಿಮೂರು ಶತಮಾನ ಕಾಲ ಅಂಧತೆಯಿಂದ ಅಣಕಿಸಿತು. ಅವರ ಉಪದೇಶಗಳು ಮನುಷ್ಯ ಪ್ರಕೃತಿಗೆ ವಿರೋಧವೆಂದು ಪರಿಗಣಿಸಿ ಅವುಗಳನ್ನು ಠೀಕಿಸಲಾಯಿತು.

ಅಂತೂ, ಕೊನೆಗೆ, ಪೈಗಂಬರರ ಮೂಲಕ ಘೋಷಿಸಲ್ಪಟ್ಟ ದಿವ್ಯ ವಚನಗಳ ಮಹತ್ವ ಸ್ವಯಂ ಪ್ರಕಟವಾಗುವ ಆ ಕಾಲ ಸಹ ಬಂದು ಮುಟ್ಟಿತು. ಪರಿಷ್ಕಾರ ಹಾಗೂ ನಾಗರಿಕತೆಯ ಸಂವಾಹಕರಾಗಿ ಸ್ವಯಂ ಅಭಿಮಾನಗೊಳ್ಳುತ್ತಿದ್ದ ಅದೇ ಜನರು ಪೈಗಂಬರರ ಸುಧಾರಣೆಯ ತತ್ವಗಳನ್ನು ಅನುಸರಿಸಲಿಕ್ಕೂ ಆಚರಿಸಲಿಕ್ಕೂ ಪ್ರೇರಿತರಾದರು. ಪ್ರತಿಯೊಂದು ಜನಾಂಗದವರು ತಮ್ಮ ನಿಯಮ ಶಾಸ್ತ್ರಗಳನ್ನು ಪೈಗಂಬರರ ನಿರ್ದೇಶನಗಳಿಗೆ ಅನುಯೋಜ್ಯವಾದ ರೀತಿಯಲ್ಲಿ ಬಲಾಯಿಸಿಕೊಂಡರು.

ವ್ಯಭಿಚಾರ, ದುಷ್ಟ ವರ್ತನೆ, ಥಳಿಸುವುದು ಎಂಬಿತ್ಯಾದಿ ದುರ್ಗುಣಗಳು ಪತಿ-ಪತ್ನಿಯರ ಪೈಕಿ ಯಾರಿಗಾದರೂ ಇದ್ದರೆ ಮಾತ್ರ ಇಂಗ್ಲೆಂಡಿನಲ್ಲಿ ನಿಯಮ ಪ್ರಕಾರ ವಿವಾಹ ವಿಚ್ಛೇದನಕ್ಕೆ ಅನುಮತಿ ಇತ್ತು. 1923ರಲ್ಲಿ ಈ ಕಾನೂನು ಬದಲಾಯಿತು. ವಿವಾಹ ವಿಚ್ಛೇದನಕ್ಕೆ ತಕ್ಕುದಾದ ಕಾರಣವಾಗಿ ವ್ಯಭಿಚಾರ ಮಾತ್ರವಿದ್ದರೂ ಸಾಕಾಯಿತು.*

ಏಳು ವರ್ಷಗಳ ಕಾಲ ಮಾನಸಿಕ ರೋಗಿಯಾಗಿರುವ ಒಬ್ಬಳೊಡನೆ ವಿವಾಹ ಸಂಬಂಧ ರದ್ದಾಗುವುದೆಂದು 1912ರಲ್ಲಿ ನ್ಯೂಝಿಲೇಂಡ್ ನಿಯಮ ಮಾಡಿತು. ಪತಿ ಅಥವಾ ಪತ್ನಿ ದಾಂಪತ್ಯ ಧರ್ಮವನ್ನು ಪಾಲಿಸದಿದ್ದರೆ ವಿವಾಹ ವಿಚ್ಛೇದನಕ್ಕೆ ಅಥವಾ ಅಗಲಿಕೆಗೆ ಒಪ್ಪಿಗೆಯೀಯಬಹುದೆಂದು ಸಹ 1925ರಲ್ಲಿ ಅಲ್ಲಿ ನಿಯಮವಾಯಿತು. ಅಲ್ಲಿ ಮೂರು ವರ್ಷಗಳ ಕಾಲ ಪತಿ-ಪತ್ನಿಯರು ಪರಸ್ಪರ ಗಮನಿಸುವುದಿಲ್ಲವಾದರೆ ವಿವಾಹ ವಿಮೋಚನೆ ಸಾಧ್ಯವಿದೆ. ಇದು ಮುಸ್ಲಿಂ ನಿಯಮ ಶಾಸ್ತ್ರಜ್ಞರ ವಿಧಿಗಳನ್ನು ಪೂರ್ಣವಾಗಿ ಅನುಸರಿಸು ವಂತಹದಾಗಿದ್ದರೂ ಈ ಅನುಕರಣೆ 1300 ವರ್ಷಗಳ ಕಾಲ ಇಸ್ಲಾಮನ್ನು ವಿರೋಧಿಸಿದ ನಂತರವಾಗಿದೆ.

ಆಸ್ಟ್ರೇಲಿಯದ ಕ್ವೀನ್ಸ್‌ಲೇಂಡಿನಲ್ಲಿ, ಮಾನಸಿಕ ರೋಗಕ್ಕೆ 5 ವರ್ಷಗಳ ಕಾಲ ಪೀಡಿತವಾಗಿದ್ದರೆ, ವಿವಾಹ ವಿಚ್ಛೇದನಕ್ಕೆ ನ್ಯಾಯವಾದ ಕಾರಣವಾಗುತ್ತದೆ.

ವ್ಯಭಿಚಾರ, ನಾಲ್ಕು ವರ್ಷಗಳ ವರೆಗೆ ಸಂಬಂಧವಿಲ್ಲದಿರುವುದು, ಮದ್ಯಪಾನ, 3 ವರ್ಷಗಳ ವರೆಗೆ ಅನಾಸ್ಥೆ, ಸೆರೆಮನೆ ಶಿಕ್ಷೆಗೆ ಗುರಿಯಾಗುವುದು, ಬಡಿಯುವುದು, ಚಿತ್ತಭ್ರಮೆ ಮೊದಲಾದ ಪ್ರತಿಯೊಂದು ವಿವಾಹ ವಿಚ್ಛೇದನಕ್ಕೆ ಸಕಾರಣವಾಗುತ್ತದೆಂದು 1919ರಲ್ಲಿ ತಾಸ್ಮಾನಿಯಾದಲ್ಲಿ ನಿಯಮ ಜ್ಯಾರಿಗೆ ಬಂತು.

ಮೂರು ವರ್ಷಗಳ ಕಾಲ ಗಂಡ ಹೆಂಡತಿಯನ್ನು ಸಾಕಿ ಸಲಹುವುದಿಲ್ಲವಾದರೆ, ವ್ಯಭಿಚರಿಸುವನಾದರೆ, ಹೆಂಡತಿಗೆ ಖರ್ಚಿಗೆ ಕೊಡುವುದಿಲ್ಲವಾದರೆ, ಹೆಂಡತಿಯೊಡನೆ ದುಷ್ಟವಾಗಿ ವರ್ತಿಸುವನಾದರೆ ವಿಚ್ಛೇದನ ಮಾಡಿಕೊಳ್ಳಬಹುದೆಂದು 1923ರಲ್ಲಿ ವಿಕ್ಟೋರಿಯಾದಲ್ಲಿ ನಿಯಮವಾಯಿತು. ಜೈಲುವಾಸ, ಪ್ರಹಾರ, ಪರಪುರುಷನೊಡನೆ ಪತ್ನಿಯ ಸಂಗ, ಹುಚ್ಚು, ದುರ್ವರ್ತನೆ, ನಿತ್ಯಕಲಹ ಇವು ಸಹ ವಿವಾಹ ವಿಚ್ಛೇದನಕ್ಕೆ ಅಥವಾ ಅಗಲಿಕೆಗೆ ತಕ್ಕುದಾದ ಕಾರಣವೆಂದು ಪರಿಗಣಿಸಲಾಯಿತು.

ಪಶ್ಚಿಮ ಆಸ್ಟ್ರೇಲಿಯಾದಲ್ಲಿ, ಮೇಲೆ ವಿವರಿಸಲಾದ ನಿಯಮಗಳಲ್ಲದೆ, ಗರ್ಭಿಣಿಯಾದ ಓರ್ವ ಸ್ತ್ರೀಯ ವಿವಾಹವನ್ನು ಅಸಿಂಧುವೆಂದು ಪರಿಗಣಿಸಲಾಗುತ್ತದೆ. (ಇಸ್ಲಾಂ ಸಹ ಇದೇ ವೀಕ್ಷಣವನ್ನು ಹೊಂದಿದೆ.)

ಕ್ಯೂಬಾದಲ್ಲಿ 1918 ರಲ್ಲಿ ಜ್ಯಾರಿಗೆ ಬಂದ ನಿಯಮ ಪ್ರಕಾರ, ವ್ಯಭಿಚಾರಕ್ಕೆ ನಿರ್ಬಂಧಿಸುವುದು, ಹೊಡೆಯುವುದು, ಅಸಭ್ಯವಾಗಿ ಮಾತನಾಡುವುದು, ಜೈಲು ಶಿಕ್ಷೆಗೆ ಗುರಿಯಾಗುವುದು, ಮದ್ಯಪಾನ, ಜೂಜಾಟ,

---

* ಪುನಃ ಸ್ಥಾಪಿಸಲು ಸಾಧ್ಯವಾಗದಂತಹ ದಾಂಪತ್ಯ ಮಾತ್ರವೇ ವಿವಾಹ ವಿಚ್ಛೇದನಕ್ಕೆ ಏಕ ಕಾರಣವಾಗಿ ಅಂಗೀಕರಿಸಿ ಒಂದು ನಿಯಮವನ್ನು 1969 ಜೂನ್ 14ರಂದು ಕಾಮನ್ಸ್ ಸಭೆ ಪಾಸು ಮಾಡಿತು.
-ಸಂ.

ಋಣಾನುಬಂಧವನ್ನು ನಿರ್ವಹಿಸದಿರುವುದು, ಖರ್ಚಿಗೆ ಕೊಡದಿರುವುದು, ಸಾಂಕ್ರಾಮಿಕ ರೋಗ, ಮೊದಲಾದ ಕಾರಣಗಳನ್ನು ತೋರಿಸಿ ಅಥವಾ ಉಭಯ ಸಮ್ಮತದಿಂದಲೂ ವಿವಾಹ ವಿಚ್ಛೇದನ ಮಾಡಿಕೊಳ್ಳಬಹುದು.

ಸ್ತ್ರೀ ಆಸ್ತಿಯ ಮೇಲೆ ಹಕ್ಕನ್ನು ಹೊಂದಬಹುದೆಂದು 1919ರಲ್ಲಿ ಇಟಲಿ* ಕಾನೂನು ಮಾಡಿತು. ಅವಳ ಇಷ್ಟ ಪ್ರಕಾರ ತನ್ನ ಸೊತ್ತಿನಿಂದ ದಾನ ಮಾಡಕೊಳ್ಳಬಹುದು, ಅಥವಾ ಸೊತ್ತನ್ನು ಮಾರಾಟ ಮಾಡಿಕೊಳ್ಳ ಬಹುದು. (ಅಷ್ಟರವರೆಗೆ ಸ್ತ್ರೀ ಅವಳ ಆಸ್ತಿಗೆ ಒಡೆಯಳೆಂದು ಯುರೋಪಿನಲ್ಲಿ ಪರಿಗಣಿಸಲ್ಪಟ್ಟಿರಲಿಲ್ಲ.)

ಮೆಕ್ಸಿಕೋದಲ್ಲಿ ಸಹ ವಿವಾಹ ವಿಚ್ಛೇದನಕ್ಕೆ ಮೇಲಿನ ಕಾರಣಗಳೇ ಅಂಗೀಕರಿಸಲ್ಪಟ್ಟವು. ಇದರ ಹೊರತು ಉಭಯ ಸಮ್ಮತಿಯಿಂದಲೂ ವಿಚ್ಛೇದನ ಮಾಡಿಕೊಳ್ಳಬಹುದು. 1917ರಲ್ಲಿ ಈ ನಿಯಮ ಅಲ್ಲಿ ಜ್ಯಾರಿಗೆ ಬಂತು.

ಪೋರ್ಚುಗಲ್ 1915ರಲ್ಲಿ, ನೋರ್ವೆ 1909ರಲ್ಲಿ, ಸ್ವೀಡನ್ 1920ರಲ್ಲಿ, ಸ್ವಿಟ್ಜರ್ಲೇಂಡ್ 1912ರಲ್ಲಿ ವಿವಾಹ ವಿಚ್ಛೇದನ ಮತ್ತು ಅಗಲಿಕೆ ನ್ಯಾಯಬದ್ಧವೆಂಬ ನಿಯಮವನ್ನು ಅಂಗೀಕರಿಸಿದವು. ಸ್ವೀಡನಿನ ಕಾನೂನು ಪ್ರಕಾರ ತನ್ನ ಪ್ರತಿಯೊಂದು ಮಗುವಿಗೆ ಕನಿಷ್ಟ ಪಕ್ಷ 18 ವರ್ಷ ಪ್ರಾಯದ ವರೆಗಾದರೂ ಪಾಲನೆ ಪೋಷಣೆಗೆ ಎಲ್ಲಾ ಸೌಕರ್ಯಗಳನ್ನೂ ತಂದೆ ಒದಗಿಸಿಕೊಡಬೇಕು.

ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ತನ್ನ ಮಕ್ಕಳ ಮೇಲಿನ ತಂದೆಯ ಹಕ್ಕನ್ನು ಕಾನೂನು ಬೆಂಬಲಿಸುವುದಾದರೂ ಪ್ರಯೋಗದಲ್ಲಿ, ಅಲ್ಲಿಯ ನ್ಯಾಯಾಧೀಶರು ತಾಯಂದಿರ ಮನೋಮಾರ್ದವಗಳನ್ನೂ ವಿಷಮ ಪರಿಸ್ಥಿತಿಯನ್ನೂ ಪರಿಗಣಿಸಿ, ತಾಯಿಯೊಂದಿಗೆ ವಾಸಿಸುವ ಮಕ್ಕಳಿಗೂ ಖರ್ಚಿಗೆ ಕೊಡಲು ತಂದೆಯನ್ನು ನಿರ್ಬಂಧಿಸುತ್ತಾರೆ. ಅವರ ನಿಯಮ ಕಟ್ಟಳೆಗಳಲ್ಲಿ ಹಲವು ನ್ಯೂನತೆಗಳಿವೆಯೆಂಬುದು ದಿಟ. ಆದರೂ ಪುರುಷನ ಹಕ್ಕುಗಳು ಹೆಚ್ಚು ಸುರಕ್ಷಿತವಾಗಿದ್ದರೂ ಸ್ತ್ರೀಗೆ ಸಹ ಆಸ್ತಿಯ ಮೇಲೆ ಅವಳ ಹಕ್ಕನ್ನು ಚಲಾಯಿಸಲು ಸಮ್ಮತಿಸಲಾಗುತ್ತದೆ. ಅದೇ ಸಮಯದಲ್ಲಿ, ಗಂಡ ನಿತ್ಯ ರೋಗಿಯೆಂದಾದರೆ, ಹೆಂಡತಿ ಅವನನ್ನು ಸಲಹಬೇಕೆಂಬ ನಿಯಮ ಸಹ ಅಲ್ಲಿ ಹಲವೆಡೆಗಳಲ್ಲಿ ರೂಢಿಯಲ್ಲಿದೆ.

ಸ್ತ್ರೀಗೆ ಇಂದು ಓಟಿನ ಹಕ್ಕಿದೆ. ದೇಶಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ ಸ್ತ್ರೀಯರು ತಮ್ಮ ಅಭಿಪ್ರಾಯವನ್ನು ಪ್ರಕಟಿಸುವ ಅವಕಾಶ ಇಂದು ಇದೆ. ಆದರೆ ಇವೆಲ್ಲಾ ಉಂಟಾದುದು ಮುಹಮ್ಮದ್ ಪೈಗಂಬರರು ತನ್ನ ಆಧ್ಯಾಪನೆಗಳನ್ನು ಜ್ಯಾರಿಗೆ ತಂದು 1300 ವರ್ಷಗಳು ಕಳೆದ ನಂತರ ಮಾತ್ರವಾಗಿದೆ. ಇನ್ನೂ ಹಲವು ಸಂಗತಿಗಳು ರಂಗ ಪ್ರವೇಶ ಮಾಡಿಲಿಕ್ಕಿವೆ. ಹಲವು ರಾಜ್ಯಗಳಲ್ಲಿ ಇನ್ನೂ ಸ್ತ್ರೀಗೆ ಮಾತಾಪಿತರ ಮತ್ತು ಗಂಡನ ಆಸ್ತಿಪಾಸ್ತಿಗಳ ಮೇಲೆ ಉತ್ತರಾಧಿಕಾರದ ಹಕ್ಕು ನೀಡಲ್ಪಟ್ಟಿಲ್ಲ.*

ಹಲವು ಸಂಗತಿಗಳ ಬಗ್ಗೆ ಇಸ್ಲಾಂ ಲೋಕಕ್ಕೆ ಮಾರ್ಗದರ್ಶನವಿತ್ತಿದೆ. ಅವುಗಳನ್ನು ಲೋಕವು ಮನ್ನಿಸದಿದ್ದರೂ, ಮುಹಮ್ಮದ್ ಪೈಗಂಬರರು ಇತರ ಸಂಗತಿಗಳ ಕುರಿತು ನೀಡಿದ ನಿರ್ದೇಶನಗಳು ಸ್ವೀಕೃತವಾದಂತೆಯೇ ಈ ಸಂಗತಿಗಳಿಗೆ ಸಂಬಂಧಿಸಿದ ನಿರ್ದೇಶನಗಳನ್ನು ಸಹ ಜಗತ್ತು ಅಂಗೀಕರಿಸುವ ಕಾಲ ವಿದೂರವಲ್ಲ. ಸ್ತ್ರೀ ಸ್ವಾತಂತ್ರ್ಯಕ್ಕೆ ಬೇಕಾಗಿ ಪೈಗಂಬರರು ಆರಂಭಿಸಿದ ಹೋರಾಟ ಅದರ ಪೂರ್ಣ ಫಲವನ್ನು ನೀಡುವ ಸಮಯ ಸಹ ವಿದೂರವಲ್ಲ.

* ಲೈಂಗಿಕ ಅಪರಾಧಕ್ಕೆ ಶಿಕ್ಷಿಸಲ್ಪಡುವುದು, 12 ವರ್ಷಕಾಲ ಜೈಲುವಾಸದಲ್ಲಿರುವುದು, ನಿಯಮಾನುಸಾರ 5 ವರ್ಷ ಕಾಲ ಅಗಲಿ ಜೀವಿಸುವುದು, 5 ವರ್ಷಕಾಲ ಹುಚ್ಚಾಸ್ಪತ್ರೆಯಲ್ಲಿ ರೋಗಿಯಾಗಿರುವುದು, ದಾಂಪತ್ಯ ಸಂಬಂಧ ಯಥಾರ್ಥದಲ್ಲಿ ಸ್ಥಾಪಿಸದಿರುವುದು, ಮೊದಲಾದ ಕಾರಣಗಳಿಂದ ವಿವಾಹ ವಿಚ್ಛೇದನಕ್ಕೆ ನಿಯಮದ ಒಪ್ಪಿಗೆ ನೀಡಬಹುದೆಂಬ ಒಂದು ಕಾನೂನು ವೆಟಿಕನ್‌ನ ಬಿಷಪರುಗಳ ಶಕ್ತಿಯುತವಾದ ವಿರೋಧವನ್ನು ಅವಗಣಿಸಿ 1969ರಲ್ಲಿ ಇಟೆಲಿಯಲ್ಲಿ ಜ್ಯಾರಿಗೆ ಬಂತು. -ಸಂ.

* ಕ್ರೈಸ್ತ ಧರ್ಮೀಯರ ಸ್ತ್ರೀಯರಿಗೆ ಕುಟುಂಬದ ಸೊತ್ತಿನಲ್ಲಿ ಪಾಲು ಸಿಗುವ ನಿಯಮವನ್ನು ಜ್ಯಾರಿಗೊಳಿಸುವರೆ 1975ರಲ್ಲಿ ಕೇರಳ ಪ್ರಾಂತ್ಯದ ಮಂತ್ರಿ ಮಂಡಲ ಅಂಗೀಕರಿಸಿತು. -ಸಂ

*" Love for all*

*hatred for none "*

"ಎಲ್ಲರೊಡನೆಯೂ ಪ್ರೀತಿ,

ಯಾರೊಡನೆಯೂ ದ್ವೇಷವಿಲ್ಲ"

# ಈದ್ ಆಚರಣೆ

ಮುಹಮ್ಮದ್ ಯೂಸುಫ್

ಏನಾದರೊಂದು ಪ್ರತ್ಯೇಕ ಕಾರಣದ ಆಧಾರದಿಂದ ವರ್ಷದಲ್ಲಿ ಒಂದೋ ಅದಕ್ಕಿಂತ ಹೆಚ್ಚೋ ವಿಶೇಷ ದಿನಗಳನ್ನು ಎಲ್ಲಾ ಮತಸ್ಥರೂ ಸಮುದಾಯದವರೂ ಆಚರಿಸುತ್ತಾರೆ. ವರ್ಷದಲ್ಲಿ ಒಂದು ದಿನವನ್ನಾದರೂ ವಿಶೇಷ ದಿನವಾಗಿ ಆಚರಿಸುವ ಸ್ವಭಾವವು ಮನುಷ್ಯ ಸಹಜವಾಗಿದ್ದು ಏಕ ಪ್ರಕಾರವಾದ ಜೀವಿತಕ್ರಮದಲ್ಲಿ ಕೆಲವೊಮ್ಮೆ ವ್ಯತ್ಯಾಸವನ್ನುಂಟುಮಾಡಲು ಕೆಲವು ವ್ಯವಸ್ಥೆಗಳನ್ನು ಅವರು ಅಂಗೀಕರಿಸಿರುತ್ತಾರೆ.

ಈ ನೈಸರ್ಗಿಕ ಸ್ವಭಾವಕ್ಕನುಗುಣವಾದ ವಿಶೇಷ ದಿನಾಚರಣೆಯನ್ನು ಇಸ್ಲಾಂ ಅದರ ಅನುಯಾಯಿಗಳಿಗೂ ನಿರ್ದೇಶಿಸಿರುತ್ತದೆ. ಇಸ್ಲಾಮಿನ ಎಲ್ಲಾ ಉಪದೇಶಗಳು ಪ್ರಕೃತಿಗೆ ಅನುಯೋಜ್ಯವಾಗಿರುತ್ತವೆ. ಈದ್ ಆಚರಣೆ ಕುರಿತಿರುವ ಅದರ ಉಪದೇಶಗಳಿಂದಲೂ ಈ ವಾಸ್ತವಾಂಶವನ್ನು ತಿಳಿಯಬಹುದು. ಇಸ್ಲಾಂ ಅದರ ಅನುಯಾಯಿಗಳಿಗೆ ಆಚರಿಸಲು ನಿರ್ದೇಶಿಸಿದ ಹಬ್ಬಗಳು ಮುಹಮ್ಮದ್ ಪೈಗಂಬರ್ (ಸ) ರವರ ಜೀವನವನ್ನೋ ಮರಣವನ್ನೋ ಅವರಿಗೆ ಲಭಿಸಿದ ವಿಜಯವನ್ನೋ ಅವಲಂಬಿಸಿಕೊಂಡಿರದೆ ಮನುಷ್ಯನ ಸ್ವಾಭಾವಿಕ ಗುಣಗಳನ್ನು ಆಧರಿಸಿಕೊಂಡಿವೆ.

ಇಸ್ಲಾಂ ಧರ್ಮದಲ್ಲಿ ಆಚರಿಸಲು ನಿರ್ದೇಶಿಸಲಾದ ಹಬ್ಬಗಳು ಎರಡು. ಒಂದು "ಈದುಲ್ ಫಿತ್‌ರ್" ಮತ್ತೊಂದು "ಈದುಲ್ ಅಝ್‌ಹಾ". ಈ ಎರಡು ಹಬ್ಬಗಳೂ ಇಸ್ಲಾಮಿನ ಎರಡು ಮೌಲಿಕ ಕರ್ಮಾನುಷ್ಠಾನಗಳನ್ನು ಅನುಬಂಧಿಸಿಕೊಂಡಿವೆ. ಒಂದನೆಯದು, ಅಲ್ಲಾಹನ ಪ್ರೀತಿಯನ್ನು ಪಡೆಯಬೇಕೆಂಬ ವಾಂಛೆಯಿಂದ ರಮಝಾನ್ ಮಾಸದಲ್ಲಿಡೀ ವ್ರತವನ್ನನುಷ್ಠಿಸಿದ ಬಳಿಕ ಆಚರಿಸಲ್ಪಡುವುದಾಗಿದೆ. ಎರಡನೆಯದು, ಅಲ್ಲಾಹನ ಸ್ನೇಹವನ್ನು ಸಂಪಾದಿಸಲು ಸ್ವದೇಶವನ್ನೂ ಸ್ವಂತ ಸುಖವನ್ನೂ ತ್ಯಜಿಸುವುದು ಮಾತ್ರವಲ್ಲ, ಆತ್ಮ ಪರಿತ್ಯಾಗಕ್ಕೂ ಸನ್ನದ್ಧನಿರಬೇಕೆಂದು ಸೂಚಿಸುವ, ಹಾಗೆಯೇ ನಿಜವಾಗಿಯೂ ಸರ್ವ ಪರಿತ್ಯಾಗವನ್ನು ಮಾಡಿದ ಶ್ರೇಷ್ಠಾತ್ಮರ ಮಾದರಿಯನ್ನು ಅನುಕರಿಸುವ "ಹಜ್ಜ್" ಪುಣ್ಯ ಕರ್ಮಾನುಷ್ಠಾನದ ನಂತರ ಆಚರಿಸಲ್ಪಡುತ್ತದೆ.

ಹೀಗೆ ಇಸ್ಲಾಂ ನಿರ್ದೇಶಿಸಿರುವ ಹಬ್ಬಗಳೆರಡೂ ಕ್ಲಿಷ್ಟಕರವೂ ತ್ಯಾಗಪರವೂ ಆದ ಎರಡು ಪ್ರಧಾನ ಕರ್ಮಾನುಷ್ಠಾನಗಳ ಬಳಿಕ ಬರುವವುಗಳಾಗಿವೆ. ವ್ರತಾನುಷ್ಠಾನ ಸಂದರ್ಭದಲ್ಲಿ ಮುಸ್ಲಿಮನು ಹಗಲೆಲ್ಲಾ ಆಹಾರ ಪಾನೀಯಗಳನ್ನು ತ್ಯಜಿಸಿ ರಾತ್ರಿಯನ್ನು ಪ್ರಾರ್ಥನೆಯಲ್ಲೂ ದೇವಸ್ಮರಣೆಯಲ್ಲೂ ಕಳೆಯುತ್ತಾನೆ. ಹೀಗೆ ಅವನು ಒಂದು ತಿಂಗಳ ಕಾಲ ಪವಿತ್ರವಾದ ಜೀವನವನ್ನು ಕೈಗೊಂಡು ಹಸಿವು ಮತ್ತು ಕಷ್ಟಕ್ಲೇಶಗಳ ರುಚಿಯನ್ನು ಅನುಭವಿಸಿದ ಕಾರಣದಿಂದ ಬಡಜನರ ಮೇಲೆ ಅನುಕಂಪವನ್ನು ತೋರಿಸಲೂ ಅವರಿಗೆ ಸಹಾಯ ಸವಲತ್ತುಗಳನ್ನು ಮಾಡಿ ಕೊಡಲೂ ಅಭ್ಯಾಸಿಸಿದ ನಂತರ ಮರುದಿನ ಒಂದು ಹಬ್ಬವನ್ನಾಚರಿಸಲು ಇಸ್ಲಾಂ ಅವನಿಗೆ ನಿರ್ದೇಶಿಸುತ್ತದೆ. ಇದರಿಂದಾಗಿ, ಈ ಹಬ್ಬವನ್ನು ಆಚರಿಸುವ ಉದ್ದೇಶ ಒಂದು ತಿಂಗಳ ಕಾಲ ಇಂತಹ ಪುಣ್ಯಕರ್ಮಗಳನ್ನು ಅನುಷ್ಠಿಸಲು ಲಭಿಸಿದ ಸ್ಮಾರಕಕ್ಕೋಸ್ಕರವಾಗಿದೆಯೆಂದು ತಿಳಿಯಬೇಕಾಗಿದೆ. ಹಾಗೆ ಹಬ್ಬ ಅಥವಾ ಸಂತೋಷದ ದಿವಸವು ತೀವ್ರಯತ್ನ ಹಾಗೂ ಕಷ್ಟಕ್ಲೇಶಗಳನ್ನು ಅನುಭವಿಸಿದ ನಂತರ ಮಾತ್ರವೇ ಲಭ್ಯವಾಗುವುದೆಂದು ಪ್ರತಿಯೊರ್ವ ಮುಸ್ಲಿಂ ತನ್ನ ವರ್ತನೆಯ ಮೂಲಕ ತೋರಿಸಬೇಕಾಗಿದೆಯೆಂದು ಇಸ್ಲಾಂ ಈ ಏರ್ಪಾಡಿನ ಮುಖಾಂತರ ಬೋಧಿಸುತ್ತದೆ.

ಹಜ್ಜ್, ಪರಮಾತ್ಮನ ಹೆಸರಿನಲ್ಲಿ ಆತ್ಮ ಪರಿತ್ಯಾಗಕ್ಕೆ ಸಹ ಸಿದ್ಧನಿರಬೇಕೆಂಬ ಪಾಠವನ್ನು ಒಳಗೊಂಡಿರುವ ತ್ಯಾಗ ಕರ್ಮವಾಗಿದೆ. ದೇವಮಾರ್ಗದಲ್ಲಿ ಆತ್ಮಾರ್ಪಣೆ ಮಾಡುವುದು ಒಂದು ದೊಡ್ಡ ಪುಣ್ಯಕರ್ಮವೆಂದೂ ತಾನು ಅದಕ್ಕೂ ಸನ್ನದ್ಧನೆಂದೂ ತನ್ನ ನಡತೆಯ ಮೂಲಕ ಮುಸ್ಲಿಮನು ತೋರಿಸುತ್ತಾನೆ.

ಹಬ್ಬ ದಿನದಂದು ಬಾಹ್ಯರೂಪದಲ್ಲೂ ಸಂತೋಷವನ್ನು ಪ್ರಕಟಿಸಲು ಇಸ್ಲಾಂ ಹೇಳುವುದಾದರೂ ಯಥಾರ್ಥವಾದ ಹಬ್ಬವು ದೇವಪ್ರೀತಿಯನ್ನು ಸಂಪಾದಿಸುವುದರಲ್ಲಿ ನೆಲೆಗೊಂಡಿರುವುದೆಂದೂ ಅದನ್ನು ಗಳಿಸುವ ಮಾರ್ಗವು ಪರಮಾತ್ಮನ ನಿಯಮ ನಿರ್ದೇಶನಗಳನ್ನನುಸರಿಸಿ ಅವನನ್ನು ಭಜಿಸುವುದಾಗಿದೆಯೆಂದೂ ಈದ್-ಆಚರಣೆಯ ಕುರಿತು ಇಸ್ಲಾಂ ನೀಡಿರುವ ನಿರ್ದೇಶನಗಳಿಂದ ಸ್ಪಷ್ಟವಾಗಿ ತಿಳಿಯುತ್ತದೆ.

ಈದ್ ಆಚರಣೆಯ ಸಂದರ್ಭಗಳಲ್ಲಿ ಇತರ ದಿವಸಗಳಿಗಿಂತ ಹೆಚ್ಚಾದ ಪ್ರಾರ್ಥನೆಯೂ ದೇವಾರಾಧನೆಯೂ ದೇವಧ್ಯಾನವೂ ಬೇಕೆಂದು ಇಸ್ಲಾಂ ಕಲಿಸುತ್ತದೆ. ಅದಲ್ಲದೆ ಈದುಲ್ ಫಿತ್‌ರ್‌ನಲ್ಲಿ ಬಡವರಿಗೆ ಸಹಾಯಧನವಾಗಿ "ಸದಖತುಲ್ ಫಿತ್‌ರ್" ಎಂದು ಕರೆಯಲ್ಪಡುವ ಒಂದು ನಿಶ್ಚಿತ ಮೊತ್ತವನ್ನು ಕೊಡಬೇಕಾಗಿದೆಯೆಂದೂ ಈದುಲ್ ಅಝ್‌ಹಾದಂದು ಆತ್ಮಪರಿತ್ಯಾಗದ ಸನ್ನದ್ಧತೆಯ ಸಂಕೇತವಾಗಿ ಮೃಗ ಬಲಿಕೊಡಬೇಕೆಂದೂ ಇಸ್ಲಾಂ ವಿಧಿಸಿರುತ್ತದೆ. ಇದರಿಂದಾಗಿ ಇಸ್ಲಾಮಿಕ ಹಬ್ಬಗಳು ಹಲವು ಪುಣ್ಯಕರ್ಮಗಳನ್ನು ಮಾಡಲು ಪ್ರೇರೇಪಿಸುವುದೆಂದು ವ್ಯಕ್ತವಾಗುತ್ತದೆ. ಸಂಕ್ಷಿಪ್ತವಾಗಿ, ಆತ್ಮೋನ್ನತಿಗಾಗಿ ಹಲವು ರೀತಿಯ ತ್ಯಾಗಗಳೂ ಕಷ್ಟಾನುಭವಗಳೂ ಅತ್ಯಾವಶ್ಯಕವೆಂದೂ ಹಾಗೆ ತೀವ್ರಯತ್ನ ಹಾಗೂ ತ್ಯಾಗಗಳನ್ನು ಮಾಡದೆ ಪರಮಾನಂದವನ್ನು ಪಡೆಯಲು ಸಾಧ್ಯವಿಲ್ಲವೆಂದೂ ಈ ಎರಡೂ ಹಬ್ಬಗಳು ಬೋಧಿಸುತ್ತವೆ. ಅದೇ ಪ್ರಕಾರ ಪರಮಾತ್ಮನನ್ನು ಹೆಚ್ಚು ಹೆಚ್ಚಾಗಿ ಭಜಿಸುವುದರಲ್ಲಿಯೂ ಸಹಸೃಷ್ಟಿಗಳೊಡನೆ ಅನುಕಂಪವನ್ನು

ತೋರಿಸುವುದರಲ್ಲಿಯೂ ತನ್ನ ಈದ್ ನೆಲೆಗೊಂಡಿರುವುದೆಂದು ಒಬ್ಬ ಯಥಾರ್ಥ ಭಕ್ತನು ತಿಳಿದಿರಬೇಕೆಂದು ನೆನಪು ಮಾಡಿಕೊಡುತ್ತವೆ.

ನಮ್ಮ ಐಹಿಕ ಜೀವಿತವು ಪಾರತ್ರಿಕ ಜೀವಿತವನ್ನು ರೂಪುಗೊಳಿಸುವ ಒಂದು ಉಪಕರಣವಾಗಿದೆ. ಇಹದಲ್ಲಿ ನಾವು ವರ್ತಿಸುವುದರ ಪ್ರತಿಫಲವನ್ನು ಪರಲೋಕದಲ್ಲಿ ಅನುಭವಿಸುತ್ತೇವೆ. ಇಲ್ಲಿಯ ಹಬ್ಬವು ಪರಲೋಕದಲ್ಲಿ ಅನಂತಕಾಲ ಅನುಭವಿಸಬೇಕಾದ ಯಥಾರ್ಥ ಉಲ್ಲಾಸ ಜೀವಿತದ ಅಣುಮಾತ್ರದ ಒಂದು ಮಾದರಿಯಾಗಿದೆ. ತ್ಯಾಗಪರವಾದ ಎರಡು ಮಹತ್ಕಾರ್ಯಗಳ ನಂತರ ಇಲ್ಲಿ ಹಬ್ಬವನ್ನಾಚರಿಸಲು ಇಸ್ಲಾಂ ನಿರ್ದೇಶಿಸುತ್ತಾ ಪರಲೋಕದಲ್ಲಿ ಅನುಭವಿಸಬೇಕಾದ ಹಬ್ಬ ದೊಡ್ಡ ದೊಡ್ಡ ತ್ಯಾಗ ಮತ್ತು ಕಷ್ಟಾನುಭವಗಳ ನಂತರ ಮಾತ್ರವೇ ಲಭ್ಯವಾಗುವುದೆಂದು ಬೋಧಿಸುತ್ತದೆ. ರಮಝಾನ್ ಮಾಸದಲ್ಲಿ ವ್ರತವನ್ನಾಚರಿಸದೆಯೂ ಸದಖತುಲ್ ಫಿತ್‌ರ್ ಕೊಡದೆಯೂ ಉಪವಾಸಕ್ಕೂ ಹಬ್ಬಕ್ಕೂ ಇರುವ ಸಂಬಂಧವೇನೆಂದು ತಿಳಿಯದೆಯೂ ಹಜ್ಜ್ ಕರ್ಮದ ಉದ್ದೇಶವೇನೆಂದು ಅರಿಯದೆಯೂ ಹೊಸ ಉಡುಪನ್ನು ಧರಿಸಿ, ಮೃಷ್ಟಾನ್ನ ಭೋಜನವನ್ನು ಉಂಡು ಈದ್ ಆಚರಿಸುವುದು ಅಸಮಂಜಸವೂ ಅರ್ಥಶೂನ್ಯವೂ ಆಗಿದೆ.

ಐಹಿಕದಲ್ಲಿ ದೇಹಕ್ಕೂ ಆತ್ಮಕ್ಕೂ ಗಾಢವಾದ ಸಂಬಂಧವಿರುವುದರಿಂದಾಗಿ ಒಂದರ ವರ್ತನೆ ಮತ್ತೊಂದರ ಮೇಲೆ ಪರಿಣಾಮವನ್ನುಂಟು ಮಾಡುತ್ತದೆ. ಆದುದರಿಂದ ಇಸ್ಲಾಂ ಆಧ್ಯಾತ್ಮಿಕ ಹಾಗೂ ಪಾರತ್ರಿಕ ಶ್ರೇಯಸ್ಸಿಗಾಗಿ ಬಾಹ್ಯವೂ ಆಂತರಿಕವೂ ಆದ ಕೆಲವು ಕರ್ಮಾನುಷ್ಠಾನಗಳನ್ನು ನಿರ್ದೇಶಿಸುತ್ತದೆ. ಈ ನಿಯಮವನ್ನನುಸರಿಸಿ ಈದ್ ದಿನದಂದು ಆಧ್ಯಾತ್ಮಿಕವಾಗಿ ನಾವು ಆಚರಿಸುವ ಸಂತೋಷಕ್ಕೆ ಶರೀರ ಸಹ ಭಾಗಿಯಾಗಿರುವುದರಿಂದ ಆ ಸಂದರ್ಭದಲ್ಲಿ ಒಳ್ಳೆಯ ಆಹಾರವನ್ನು ತಿನ್ನಲೂ ಒಳ್ಳೆಯ ಉಡುಪುಗಳನ್ನು ಧರಿಸಲೂ ಇಸ್ಲಾಂ ಉಪದೇಶಿಸುತ್ತದೆ. ಆದರೆ ಈದ್‌ನ ಯಥಾರ್ಥತ್ವ ಈ ಬಾಹ್ಯಾಡಂಬರಗಳಲ್ಲಲ್ಲ, ಬದಲಾಗಿ ಆಂತರಿಕ ಕರ್ಮಗಳಲ್ಲಿ ನೆಲೆಗೊಂಡಿದೆಯೆಂದು ಈದ್ ಆಚರಣೆಗೆ ಸಂಬಂಧಿಸಿದ ಇಸ್ಲಾಮಿಕ ನಿರ್ದೇಶನಗಳಿಂದ ತಿಳಿದು ಬರುತ್ತದೆ. ಆದರೆ ಈ ಕಾಲದ ಮುಸ್ಲಿಮರಲ್ಲಿ ಹೆಚ್ಚಿನವರು ಅಂತರ್ಯವನ್ನು ಗ್ರಹಿಸದೆ ಕೇವಲ ಬಾಹ್ಯ ಕರ್ಮವೆಂಬಂತೆ ಈದನ್ನು ಆಚರಿಸುತ್ತಾರೆ. ಈ ಆಚರಣೆಯಲ್ಲಿ ಒಳಗೊಂಡಿರುವ ಆಧ್ಯಾತ್ಮಿಕ ತಾತ್ಪರ್ಯವನ್ನು ಗ್ರಹಿಸಿರುತ್ತಿದ್ದರೆ ಎಂದಿಗೂ ಅವರು ಈ ರೀತಿ ವರ್ತಿಸುತ್ತಿರಲಿಲ್ಲ.

ಮಹತ್ತಾದ ಪುಣ್ಯಕರ್ಮಗಳ ನಂತರ ಈದ್ ಆಚರಿಸಲಿಕ್ಕೂ ಆ ಸಂದರ್ಭದಲ್ಲೇ ಬೇರೆ ಕೆಲವು ಪುಣ್ಯ ಕರ್ಮಗಳನ್ನು ಅನುಷ್ಠಿಸಲಿಕ್ಕೂ ಇಸ್ಲಾಂ ನಿರ್ದೇಶಿಸುತ್ತಾ ಯಥಾರ್ಥ ಈದ್ ಏನೆಂದೂ ಅದು ಲಭ್ಯವಾಗಬೇಕಾದರೆ ಏನುಮಾಡಬೇಕೆಂದೂ ಅದು ಮನದಟ್ಟು ಮಾಡಿಕೊಟ್ಟಿರುತ್ತದೆ.

ಇಸ್ಲಾಂ ನಿರ್ದೇಶಿಸುವ ಈದ್ ಪಾರತ್ರಿಕ ಸುಖಕ್ಕೆ ದೃಷ್ಟಾಂತವಾಗಿರುವಂತೆಯೇ ಅದು ಸಾಮೂಹಿಕ ಜೀವಿತವನ್ನು ಸುಖಕರವನ್ನಾಗಿ ಮಾರ್ಪಡಿಸಲು ಪರ್ಯಾಪ್ತವಾದ ನಿರ್ದೇಶನಗಳಿಂದ ಕೂಡಿಕೊಂಡಿದೆ. ಇಸ್ಲಾಮಿನ ಒಂದು ಈದ್ ದಾನಧರ್ಮಗಳಿಂದ ಬಡವರಿಗೆ ಸಹಾಯಮಾಡಬೇಕೆಂದು ಕಲಿಸುವುದಾದರೆ ಇನ್ನೊಂದು ತ್ಯಾಗಪೂರ್ಣವಾದ ಜೀವಿತವೇ ಮೋಕ್ಷ ಪ್ರಾಪ್ತಿಗೆ ಸಾಧಕವಾಗುವುದೆಂಬ ತತ್ವವನ್ನು ಪ್ರಬೋಧಿಸುತ್ತದೆ. ಈದ್ ದಿನದಂದು ಜನರು ಒಂದು ಸ್ಥಳದಲ್ಲಿ ಒಟ್ಟುಗೂಡಿ ದೇವಾರಾಧನೆಯನ್ನು ಮಾಡಬೇಕೆಂದು ವಿಧಿಸುತ್ತಾ ಐಕ್ಯ, ಸಮತೆ ಮೊದಲಾದ ಗುಣಗಳು ಸಮುದಾಯ ಕ್ಷೇಮಾಭಿವೃದ್ಧಿಗೆ ಅತ್ಯಾವಕಾಶವೆಂದು ಇಸ್ಲಾಂ ಕಲಿಸುತ್ತದೆ. ಹೀಗೆ ಇಸ್ಲಾಮಿಕ ಹಬ್ಬ ಆಚರಣೆಯಲ್ಲಿ ಆಂತರಿಕವೂ ಬಾಹ್ಯವೂ ಆದ ಹಲವು ತತ್ವಗಳು ಒಳಗೊಂಡಿವೆ. *


**Minaret**

Quarterly Journal

*Ahmadiyya English Organ*

Annual Subscription : Rs. 40/-

Write to The Manager,
Minaret Quarterly
Royal Agency, Kannur - 670001 (Kerala)

**BADR**

*weekly*

*Ahmadiyya Urdu Organ*

Anual Subscription : Rs. 150/-

Write to The Manager, Badr Weekly,
Qadian - 143516 (Punjab)

# ವ್ರತಾನುಷ್ಠಾನ ಮತ್ತು ಹಬ್ಬ

**ರಮಝಾನ್ ವ್ರತಾನುಷ್ಠಾನ ಹಾಗೂ ಹಬ್ಬದ ಕುರಿತು ದಿನಾಂಕ 17-1-99ರಂದು ರಾತ್ರಿ 8.00 ಘಂಟೆಗೆ ಆಕಾಶವಾಣಿ ಮಡಿಕೇರಿ ನಿಲಯದಿಂದ ಬಿತ್ತರಗೊಂಡ ಬಿ. ಎಸ್. ರಫೀಕ್ ಅಹ್ಮದ್, ಕೊಯನಾಡು ಅವರ ಭಾಷಣ**

ವಿಶ್ವದ ಸರ್ವ ಮುಸ್ಲಿಮರು ಅಂಗೀಕರಿಸಿ ಆಚರಿಸುವ ಹಬ್ಬಗಳು ಎರಡು ಮಾತ್ರ. ಒಂದನೆಯದು - ರಮಝಾನ್ ತಿಂಗಳು ಕೊನೆಗೊಂಡ ನಂತರ ಶವ್ವಾಲ್ ತಿಂಗಳ ಒಂದನೆಯ ದಿನ ಆಚರಿಸಲಾಗುವ 'ಈದುಲ್ ಫಿತ್‌ರ್' ಅಥವಾ ರಮಝಾನ್ ಹಬ್ಬ. ಇನ್ನೊಂದು - ದುಲ್‌ಹಜ್ಜ್ ತಿಂಗಳ ಹತ್ತನೆಯ ದಿನ ಆಚರಿಸಲಾಗುವ 'ಈದುಲ್ ಅಝ್‌ಹಾ' ಅಥವಾ ಬಕ್ರೀದ್ ಹಬ್ಬ.

ಉಪವಾಸ ಮಾಸವಾಗಿರುವ ರಮಝಾನ್ ತಿಂಗಳು ಹಿಜರಿ ಚಾಂದ್ರಮಾನ ಶಕದ ಒಂಭತ್ತನೆಯ ತಿಂಗಳಾಗಿದೆ. ಚಾಂದ್ರಮಾನ ವರ್ಷವು ಸೌರಮಾನ ವರ್ಷಕ್ಕಿಂತ ಅಂದಾಜು ಹನ್ನೊಂದು ದಿನಗಳಷ್ಟು ಕಿರಿದಾಗಿರುವ ಕಾರಣ ರಮಝಾನ್ ತಿಂಗಳು ಎಲ್ಲಾ ಋತುಗಳಲ್ಲೂ ಬರುತ್ತಾ ಇರುತ್ತದೆ.

ಇಸ್ಲಾಂ ಧರ್ಮವು ಮುಸ್ಲಿಮರಿಗೆ ಆಜ್ಞಾಪಿಸಿರುವ ಐದು ಆರಾಧನಾ ಕರ್ಮಗಳಲ್ಲಿ ಉಪವಾಸ ವ್ರತ ಮೂರನೆಯದಾಗಿದೆ. ಆಕಾಶದಲ್ಲಿ ಚಂದ್ರದರ್ಶನವಾಗುತ್ತಲೇ ಪ್ರಾರಂಭಗೊಳ್ಳುವ ಉಪವಾಸ ಮಾಸ 'ರಮಝಾನ್' ಎನ್ನುವ ಪದದ ಅರ್ಥ ಸೂರ್ಯತಾಪ ಎಂದಾಗಿದೆ. ರಮಝಾನ್ ಎಂದರೆ ಎರಡು ತಾಪಗಳು ಎಂದಾಗುತ್ತದೆ. ಹಸಿವು, ಬಾಯಾರಿಕೆಯಿಂದಾಗಿ ಶರೀರದಲ್ಲಿ ಉಂಟಾಗುವ ತಾಪ ಒಂದು ಕಡೆಯಾದರೆ, ಇನ್ನೊಂದು ಕಡೆ ತೀವ್ರ ತರದ ಆರಾಧನೆಗಳಿಂದ ಕೂಡಿದ ತಪಸ್ಸಿನಲ್ಲಿ ಪಾಪವನ್ನು ಸುಟ್ಟು ದೇವರಲ್ಲಿ ಮತ್ತು ಅವನ ಸೃಷ್ಟಿಗಳೊಂದಿಗೆ ಉಂಟಾಗುವ ಸ್ನೇಹತಾಪ ಎನ್ನುವ ಅರ್ಥಗಳನ್ನು ರಮಝಾನ್ ಪದ ಸೂಚಿಸುತ್ತದೆ. ವ್ರತದೀಕ್ಷೆ ತೊಟ್ಟ ವ್ಯಕ್ತಿ ಒಂದು ತಿಂಗಳ ಕಾಲ ಹಸಿವನ್ನು ಸ್ವಯಂ ವರಿಸಿಕೊಂಡು ಶರೀರವನ್ನು ಕುಲುಮೆಯನ್ನಾಗಿಸುತ್ತಾನೆ. ಇಂತಹ ಸುಟ್ಟ ಅವಸ್ಥೆಯಲ್ಲಿ ಸೂಕ್ಷ್ಮ ಶರೀರದ ಆಧ್ಯಾತ್ಮಿಕ ಶಕ್ತಿಗಳನ್ನು ಅರಳಿಸುವ ರಸವಿದ್ಯೆ ವ್ರತಾನುಷ್ಠಾನದೊಂದಿಗೆ ನೆರವೇರುತ್ತದೆ.

ಉಪವಾಸ ವ್ರತವನ್ನು ವಿಶ್ವದ ಬೇರೆ ಬೇರೆ ಧರ್ಮದವರು ಆಚರಿಸುತ್ತಿರುವರಾದರೂ ಮುಸ್ಲಿಮರು ಆಚರಿಸುವ ರಮಝಾನ್ ತಿಂಗಳ ಉಪವಾಸ ವೈಶಿಷ್ಟ್ಯಪೂರ್ಣವಾಗಿದೆ. ಇಸ್ಲಾಂ ಧರ್ಮವು ಕೆಲವು ಸ್ಥಳ, ದಿನ, ತಿಂಗಳು, ವಸ್ತುಗಳನ್ನು ಪಾವನವೆಂದು ಪರಿಗಣಿಸಿದೆ. ದೈವಿಕ ದೃಷ್ಟಾಂತಗಳು ಪ್ರಕಾಶಿಸಲ್ಪಟ್ಟ ಸ್ಥಳ, ಕಾಲ, ವ್ಯಕ್ತಿಗಳು ಇತ್ಯಾದಿ ಆದರಣೀಯಗಳಾಗಿವೆ. ಈ ನಿಟ್ಟಿನಲ್ಲಿ ರಮಝಾನ್ ತಿಂಗಳಿಗಿರುವ ಮಹತ್ವವೇನೆಂದರೆ ಅದು ಮಾನವ ರಾಶಿಗೆ ಅನುಗ್ರಹೀತವಾದ ಸಂಪೂರ್ಣ ತತ್ತ್ವಸಂಹಿತೆಗಳನ್ನು ಒಳಗೊಂಡ ಪವಿತ್ರ ಖುರ್‌ಆನ್‌ನ ಅವತೀರ್ಣಕ್ಕೆ ಆರಂಭ ನೀಡಿದ ತಿಂಗಳು ಎಂದಾಗಿದೆ. ಈ ತಿಂಗಳಿನಲ್ಲಿ ಖುರ್‌ಆನ್‌ನ ಆರಂಭ ಮಾತ್ರವಲ್ಲ ಅದು ಸಂಪೂರ್ಣ ರೂಪದಲ್ಲಿ ಅವತೀರ್ಣಗೊಂಡಿತು ಎಂಬ ಹೆಗ್ಗಳಿಕೆಯನ್ನು ಕೂಡ ರಮಝಾನ್ ತಿಂಗಳು ಪಡೆದಿದೆ. ಈ ತಿಂಗಳ ಚಾರಿತ್ರಿಕ ಹಿನ್ನಲೆಯನ್ನು ವಿವರಿಸುತ್ತಾ ಪವಿತ್ರ ಗ್ರಂಥವಾದ ಖುರ್‌ಆನ್ ಹೀಗೆ ಹೇಳುತ್ತದೆ:

"ಮಾನವ ಕುಲಕ್ಕೆ ಸನ್ಮಾರ್ಗದಾಯಕವೂ ಮಾರ್ಗದರ್ಶಕವೂ ಹಾಗೂ ಸತ್ಯ - ಅಸತ್ಯ ವಿವೇಚನೆಯ ಸ್ಪಷ್ಟವಾದ ನಿದರ್ಶನಗಳನ್ನೂ ಒಳಗೊಂಡಿರುವ ಖುರ್‌ಆನ್ ಅವತೀರ್ಣವಾದ ಮಾಸವಾಗಿದೆ ರಮಝಾನ್. ಆದ್ದರಿಂದ ನಿಮ್ಮ ಪೈಕಿ ಯಾರೇ ಆಗಲಿ ಈ ತಿಂಗಳಿನಲ್ಲಿ ಉಪಸ್ಥಿತರಿದ್ದರೆ ಅವರು ಉಪವಾಸ ವ್ರತ ಆಚರಿಸಲಿ. ನಿಮ್ಮಲ್ಲಿ ಯಾರಾದರೂ ರೋಗಿಯಾಗಿದ್ದರೆ ಅಥವಾ ಪ್ರಯಾಣಿಕರಾಗಿದ್ದರೆ ಅವರು ಇತರ ದಿನಗಳಲ್ಲಿ ಉಪವಾಸ ದಿನಗಳ ಸಂಖ್ಯೆಯನ್ನು ಪೂರ್ತಿಗೊಳಿಸಬೇಕು." (2 : 186)

ಆರೋಗ್ಯವುಳ್ಳ ಪ್ರತಿಯೊಬ್ಬ ಮುಸ್ಲಿಂ ಪುರುಷ ಮತ್ತು ಸ್ತ್ರೀ ಉಪವಾಸ ವ್ರತವನ್ನು ಆಚರಿಸುವುದು ಕಡ್ಡಾಯವಾಗಿದೆ. ಪ್ರತಿ ದಿನ ಉಪವಾಸ ಆರಂಭವಾಗುವುದು ಸೂರ್ಯೋದಯಕ್ಕೆ ಅಂದಾಜು ಒಂದೂಕಾಲು ಘಂಟೆ ಮೊದಲು ಅಂದರೆ ನಸುಕಿನ ಸಮಯದಲ್ಲಾಗಿದೆ. ಈ ನಿಗದಿತ ಸಮಯಕ್ಕಿಂತ ಮುಂಚಿತವಾಗಿ ಆಹಾರ ಸೇವಿಸುವ ಕ್ರಮವಿದ್ದು ಇದನ್ನು 'ಸಹರೀ ಭೋಜನ' ಎನ್ನುತ್ತಾರೆ. ಸೂರ್ಯಾಸ್ತಮಾನದ ತನಕ ಆಹಾರ ಪಾನೀಯಗಳು ಮತ್ತು ಪತಿ-ಪತ್ನಿಯರ ಲೈಂಗಿಕ ಸಂಪರ್ಕ ನಿಷಿದ್ಧವಾಗಿವೆ. ಸೂರ್ಯಾಸ್ತಮಾನದ ನಂತರ ಉಪವಾಸ ವರ್ಜಿಸುವುದನ್ನು 'ಇಫ್ತಾರ್' ಎನ್ನುತ್ತಾರೆ. ಗರ್ಭಿಣಿಯರು, ಹಾಲೂಡಿಸುವ ತಾಯಂದಿರು ಹಾಗೂ ಮುಟ್ಟಾಗಿರುವ ಮಹಿಳೆಯರು ಉಪವಾಸ ವ್ರತ ಆಚರಿಸುವುದರಿಂದ ವಿನಾಯಿತಿ ಪಡೆದಿದ್ದಾರೆ.

ಉಪವಾಸ ವ್ರತವು ಶಾರೀರಿಕ, ನೈತಿಕ ಹಾಗೂ ಆಧ್ಯಾತ್ಮಿಕ ಶಿಸ್ತನ್ನು ಮನುಷ್ಯರಲ್ಲಿ ಜಾರಿಗೊಳಿಸಿ ಅವರನ್ನು ದುರಾಚಾರಗಳಿಂದ ರಕ್ಷಿಸಿ ಸಾತ್ವಿಕರನ್ನಾಗಿ ಮಾಡುವ ಉದ್ದೇಶವನ್ನು ಹೊಂದಿದೆ. "ನಿಮ್ಮ ಪೂರ್ವಿಕರಿಗೆ ಉಪವಾಸ ವ್ರತವನ್ನು ಕಡ್ಡಾಯಗೊಳಿಸಿರುವಂತೆ ನಿಮಗೂ ಕಡ್ಡಾಯಗೊಳಿಸಲಾಗಿದೆ. ನೀವು ಕೆಟ್ಟ ನಡವಳಿಕೆಗಳಿಂದ ಮುಕ್ತರಾಗಿ ಜೀವಿಸುವಂತಾಗಲು" ಎಂದು ಖುರ್‌ಆನ್ ಹೇಳುತ್ತದೆ. (2: 184) ಮುಸ್ಲಿಮರಿಗಿಂತ ಹಿಂದಿನ ಮತಾವಲಂಬಿಗಳೂ ಉಪವಾಸ ವ್ರತ ಆಚರಿಸುತ್ತಿದ್ದರು ಎಂಬ ವಿಷಯ ಈ ವಚನದಿಂದ ವೇದ್ಯವಾಗುತ್ತದೆ. ಎಲ್ಲಾ ಧರ್ಮಗಳ ಪರಮ ಗುರಿ ಆತ್ಮಶುದ್ಧೀಕರಣದ ಮೂಲಕ ದೇವರ ಸಾಕ್ಷಾತ್ಕಾರವಾಗಿದೆ. ಉಪವಾಸ ಅದಕ್ಕಿರುವ ಉತ್ತಮ ಮಾರ್ಗವಾಗಿದೆ. ಭರ್ತೃಹರಿಯ ನೀತಿಶತಕದ ಒಂದು ಶ್ಲೋಕ ಹೀಗಿದೆ :

"ಯೇಷಾಂ ನ ವಿದ್ಯಾ ನ ತಪೋ

ನ ದಾನಂ - ಜ್ಞಾನಂ ನ ಶೀಲಂ

ನ ಗುಣೋ ನ ಧರ್ಮಃ ತೇ

ಮರ್ತ್ಯ ಲೋಕೋಭುವಿ ಭಾರಭೂತಾಃ

ಮನುಷ್ಯ ರೂಪೇಣ ಮೃಗಾಶ್ಚರಂತಿ"

ಅಂದರೆ, "ಯಾರಿಗೆ ವಿದ್ಯೆ, ತಪಸ್ಸು, ದಾನ, ಜ್ಞಾನ, ಶೀಲ, ಗುಣ, ಧರ್ಮ ಇತ್ಯಾದಿಗಳಿಲ್ಲವೋ ಅವರು ಈ ಭೂಮಿಗೆ ಹೊರೆಯಾಗುತ್ತಾರೆ. ಅವರು ಮನುಷ್ಯ ರೂಪವನ್ನು ಹೊಂದಿದ ಮೃಗಗಳಾಗಿ ಸಂಚರಿಸುತ್ತಾರೆ". ಆದ್ದರಿಂದ ಮೃಗಗಳಿಗಿಂತ ವ್ಯತಿರಿಕ್ತವಾದ ಮನುಷ್ಯನನ್ನು ಯಥಾರ್ಥ ಮನುಷ್ಯನನ್ನಾಗಿ ಮಾಡುವ ಸಕಲ ಗುಣಗಳ ಸಂಗಮವಾಗಿದೆ ಉಪವಾಸ ವ್ರತ. ಇಸ್ಲಾಂ ಧರ್ಮದಲ್ಲಿ ಆಚರಿಸಲ್ಪಡುವ ವ್ರತದಲ್ಲಿ ಭರ್ತೃಹರಿಯ ತತ್ತ್ವ ಒಂದುಗೂಡುವುದನ್ನು ಕಾಣಬಹುದು. ವ್ಯತ್ಯಾಸಗಳೇನೇ ಇರಲಿ, ಪ್ರತಿಯೊಂದು ಧರ್ಮದವರೂ ತಮ್ಮದೇ ಆದ ರೀತಿಯಲ್ಲಿ ಉಪವಾಸ ವ್ರತವನ್ನು ಆಚರಿಸುತ್ತಾರೆ. ಕಡಿವಾಣವಿಲ್ಲದ ಕುದುರೆಯ ಹಾಗೆ ಮನುಷ್ಯನ ಮನಸ್ಸು ದುರಾಲೋಚನೆ ಹಾಗೂ ನೀಚ ಕೆಲಸಗಳ ಹಿಂದೆ ಓಡುತ್ತದೆ. ಇದರಿಂದ ಮುಕ್ತರಾಗಲು ಆತ್ಮನಿಯಂತ್ರಣವೆನ್ನುವುದು ಆವಶ್ಯಕವಾಗಿದೆ. ಆತ್ಮನಿಯಂತ್ರಣವನ್ನು ಸಾಧಿಸುವುದು ಗಾಳಿಯನ್ನು ಬಲೆಯಲ್ಲಿ ತಡೆದು ನಿಲ್ಲಿಸುವುದಕ್ಕಿಂತಲೂ ಕಷ್ಟಕರವಾದ ಕೆಲಸ ಎಂದು ಭಗವದ್ಗೀತೆ ಹೇಳುತ್ತದೆ. ಆತ್ಮನಿಯಂತ್ರಣವನ್ನು ಸಾಧಿಸದೆ ದೇವರ ಸಾನ್ನಿಧ್ಯ, ಮೋಕ್ಷ ಗಳಿಸಲು ಸಾಧ್ಯವಾಗಲಾರದು. ಅದ್ದರಿಂದ ತ್ಯಾಗಪೂರ್ಣವಾದ, ಸಮರ್ಪಣ ಜೀವನದಿಂದ ಕೂಡಿದ ಉಪವಾಸದ ಮೂಲಕ ಆತ್ಮನಿಯಂತ್ರಣವನ್ನು ಸಾಧಿಸಬಹುದಾಗಿದೆ.

ಉಪವಾಸ ವ್ರತವನ್ನು ಆಚರಿಸುವವರು ಕಟ್ಟುನಿಟ್ಟಾದ ನಿಯಮಗಳನ್ನು ಪಾಲಿಸಬೇಕೆಂದು ಇಸ್ಲಾಂ ಧರ್ಮವು ಆಜ್ಞಾಪಿಸಿದೆ. ಸುಳ್ಳನ್ನು ಎಂದೂ ಹೇಳಬಾರದೆಂದೂ ಸುಳ್ಳು ಮತ್ತು ಕೆಟ್ಟ ನಡವಳಿಕೆಗಳನ್ನು ತ್ಯಜಿಸದೆ ಕೇವಲ ಹಸಿವು ಮತ್ತು ಬಾಯಾರಿಕೆಯಿಂದ ಮಾಡಿದ ಉಪವಾಸವನ್ನು ದೇವರು ಅಂಗೀಕರಿಸುವುದಿಲ್ಲ ಎಂದೂ ಹಝ್ರತ್ ಮುಹಮ್ಮದ್ ಪೈಗಂಬರ್ (ಸ.ಅ.) ರು ಹೇಳಿರುವರು. (ಬುಖಾರಿ, ಮುಸ್ಲಿಂ). ಸಮಾಜದಲ್ಲಿನ ಕೆಡುಕುಗಳಾದ ಅನ್ಯರ ಹಕ್ಕುಗಳ ಅಪಹಾರ, ಅನ್ಯಾಯ, ಮೋಸ, ವಂಚನೆ, ವಚನಭ್ರಷ್ಟತೆ ಇತ್ಯಾದಿಗಳಲ್ಲದೆ ಸಕಲ ಸೃಷ್ಟಿಗಳಿಗೂ ಸುಳ್ಳಿನ ಮೂಲಕವೇ ಹಾನಿ ಉಂಟಾಗುತ್ತದೆ. ಆದ್ದರಿಂದ ಸುಳ್ಳನ್ನು ಸಂಪೂರ್ಣವಾಗಿ ತ್ಯಜಿಸಲು ನಿರ್ದೇಶಿಸಲಾಗಿದೆ. ಹಾಗೆಯೇ ವ್ರತದೀಕ್ಷೆ ತೊಟ್ಟವನು ಜಗಳ ಮಾಡುವುದಾಗಲೀ, ಪರದೂಷಣೆ, ಅಸೂಯೆ, ಅಹಂಕಾರ, ದ್ವೇಷ, ಅಶ್ಲೀಲದ ಮಾತುಗಳನ್ನು ಆಡುವುದಾಗಲೀ ಮಾಡಬಾರದು. ಅನಗತ್ಯವಾದ ಯಾವುದೇ ಜಗಳಕ್ಕೆ ಈಡಾದರೆ, "ನಾನು ಉಪವಾಸಿ" ಎಂದಷ್ಟೇ ಹೇಳಿ ಪರಿಶುದ್ಧತೆಯ ಪರಮಾವಧಿಯನ್ನು ಪ್ರದರ್ಶಿಸಬೇಕೆಂದು ಉಪದೇಶಿಸಲಾಗಿದೆ.

ಇಸ್ಲಾಮಿನ ಆರಾಧನಾ ಕರ್ಮಗಳಲ್ಲಿ ಎರಡನೆಯದಾಗಿರುವ ಕಡ್ಡಾಯವಾದ ಐದು ಹೊತ್ತಿನ ನಮಾಝ್‌ನ ಜೊತೆಗೆ 'ತರಾವೀಹ್' ಎಂಬ ವಿಶಿಷ್ಟ ನಮಾಝ್ ಹಾಗೂ 'ತಹಜ್ಜುದ್' ಎಂಬ ರಾತ್ರಿಯ ಅಂತಿಮ ಯಾಮಗಳಲ್ಲಿ ಮಾಡುವ ನಮಾಝನ್ನು ಕೂಡ ನಿರ್ವಹಿಸಬೇಕೆಂದು ಅಪೇಕ್ಷಿಸಲಾಗಿದೆ. ಈ ತಿಂಗಳಿನಲ್ಲಿ ಖುರ್‌ಆನ್ ಪಾರಾಯಣಕ್ಕೆ ಹೆಚ್ಚಿನ ಮಹತ್ವ ನೀಡಬೇಕಾಗಿದೆ.

ರಮಝಾನ್ ತಿಂಗಳ ಕೊನೆಯ ಹತ್ತು ದಿನಗಳ ಅವಧಿಯಲ್ಲಿ ಸದಾಕಾಲ ಮಸೀದಿಯಲ್ಲಿ ವಾಸಿಸಿ ನಮಾಝ್, ದೇವನಾಮಸ್ಮರಣೆ ಹಾಗೂ ಪವಿತ್ರ ಖುರ್‌ಆನ್ ಪಾರಾಯಣ ಮಾಡುವ ಸಂಪ್ರದಾಯವಿದೆ. ಇದನ್ನು 'ಇಲ್‌ತಿಕಾಫ್' ಎನ್ನುತ್ತಾರೆ. ಲೌಕಿಕ ಮತ್ತು ಶಾರೀರಿಕ ವಿಚಾರಗಳಿಂದ ಸಂಪೂರ್ಣವಾಗಿ ದೂರವಿದ್ದು ಆಧ್ಯಾತ್ಮಿಕ ವಿಚಾರಗಳಲ್ಲಿ ಮಾತ್ರವೇ ಧ್ಯಾನಮಗ್ನರಾಗುವುದು ಇದರ ಉದ್ದೇಶವಾಗಿದೆ. ಆದರೆ ಇದು ಎಲ್ಲರಿಗೂ ಕಡ್ಡಾಯವಾಗಿರದೆ ಐಚ್ಛಿಕ ಮಾತ್ರವಾಗಿದೆ.

ರಮಝಾನ್ ತಿಂಗಳು ದಾನಧರ್ಮಗಳಿಗೆ ವಿಶೇಷ ಪ್ರಾಮುಖ್ಯತೆ ನೀಡಿರುವ ಪುಣ್ಯ ಮಾಸವಾಗಿದೆ. ದಾನಧರ್ಮ ಅಥವಾ 'ಝಕಾತ್' ಎನ್ನುವುದು ಸರ್ವಕಾಲಕ್ಕೂ ನಿರ್ಬಂಧವಾಗಿರುವ ಇಸ್ಲಾಮಿನ ನಾಲ್ಕನೆಯ ಆರಾಧನಾ ಕರ್ಮವಾಗಿದೆ. ಎಂದರೆ, ರಮಝಾನ್ ತಿಂಗಳಿನಲ್ಲಿ ಅದರ ಪ್ರಾಮುಖ್ಯತೆ ಇನ್ನಷ್ಟು ಹೆಚ್ಚಾಗುತ್ತದೆ. ಈ ತಿಂಗಳಿನಲ್ಲಿ ಮುಹಮ್ಮದ್ ಪೈಗಂಬರ್ (ಸ. ಅ.)ರ ಕೈ "ದಾನಧರ್ಮ ನೀಡುವುದರಲ್ಲಿ ಬಿರುಸಾಗಿ ಬೀಸುವ ಬಿರುಗಾಳಿಯ ಹಾಗೆ ಚಲಿಸುತ್ತಿತ್ತು" ಎಂದು ಚರಿತ್ರೆಯಲ್ಲಿ ವರದಿಯಾಗಿದೆ. "ದಾನಧರ್ಮವೆನ್ನುವುದು ಶ್ರೀಮಂತರ ಔದಾರ್ಯವಲ್ಲ, ಅದು ನಿರ್ಗತಿಕರ ಅವಕಾಶ" ಎನ್ನುವ ಇಸ್ಲಾಂ ಧರ್ಮವು ಉಪವಾಸ ಮಾಡುವವನು ತಾನು ಅನುಭವಿಸುವ ಹಸಿವೆಯ ಮೂಲಕ ಇತರರ ಹಸಿವನ್ನು ಮನವರಿಕೆ ಮಾಡಿಕೊಂಡು ಅವರಿಗೆ ಸಹಾಯ ಮಾಡಬೇಕೆಂದು ಆಜ್ಞಾಪಿಸಿದೆ. ಈ ತಿಂಗಳಿನಲ್ಲಿ ಮಾಲೀಕ ತನ್ನ ಕೆಲಸಗಾರನ ಕೆಲಸವನ್ನು ಹಗುರಗೊಳಿಸಬೇಕೆಂದೂ ವಿಧಿಸಿದೆ.

ರಮಝಾನ್ ತಿಂಗಳು ಆಧ್ಯಾತ್ಮಿಕ ಲೋಕದ ವಸಂತವೂ ಪರ್ವಕಾಲವೂ ಆಗಿದೆ. ಈ ತಿಂಗಳಿನಲ್ಲಿ ಮಾಡುವ ಕಡ್ಡಾಯವಾದ ಆರಾಧನಾ ಕರ್ಮಗಳಿಗೆ ಇತರ ತಿಂಗಳುಗಳಿಗಿಂತ ಎಪ್ಪತ್ತು ಪಟ್ಟು ಅಧಿಕ ಪ್ರತಿಫಲ ದೊರೆಯುತ್ತದೆ ಎಂದು ಹೇಳಲಾಗಿದೆ.

ಉಪವಾಸ ವ್ರತದ ನಿಯಮಗಳನ್ನು ಈಡೇರಿಸುವ ಜನರ ಸಮೂಹ ಭೂಲೋಕದಲ್ಲಿ ಸ್ವರ್ಗದ ಅನುಭೂತಿ ಹೊಂದುವ ಸಮೂಹವಾಗುತ್ತದೆ. ಇದೇ ಅರ್ಥದಲ್ಲಿ ಮುಹಮ್ಮದ್ ಪೈಗಂಬರ್ (ಸ. ಅ.)ರು "ರಮಝಾನ್ ತಿಂಗಳಿನಲ್ಲಿ ಸ್ವರ್ಗದ ಬಾಗಿಲು ತೆರೆಯಲ್ಪಡುತ್ತದೆ, ನರಕದ ಬಾಗಿಲು ಮುಚ್ಚಲ್ಪಡುತ್ತದೆ, ಪಿಶಾಚಿ ಸಂಕೋಲೆಯಲ್ಲಿ ಬಂಧಿಸಲ್ಪಡುತ್ತದೆ" ಎಂದು ಹೇಳಿರುವರು (ಬುಖಾರಿ). ಉಪವಾಸಿಯು ಆಹಾರ ಪಾನೀಯಗಳನ್ನೂ ಶರೀರೇಚ್ಛೆಗಳನ್ನೂ ತ್ಯಜಿಸುವುದರೊಂದಿಗೆ ಪೈಶಾಚಿಕವಾದ ಎಲ್ಲಾ ದುರ್ಮಾರ್ಗಗಳನ್ನೂ ಸಂಪೂರ್ಣವಾಗಿ ಮುಚ್ಚುತ್ತಾನೆ. ಇನ್ನೊಂದೆಡೆ, ಸನ್ಮಾರ್ಗವನ್ನು ತೆರೆಯುತ್ತಾನೆ. ಪಿಶಾಚಿ ಎಂದರೆ ಯಾವುದೇ ಬಾಹ್ಯವಾದ ಸೃಷ್ಟಿಯ ಅಥವಾ ವ್ಯಕ್ತಿಯ ಹೆಸರಲ್ಲ. ಪ್ರತಿಯೊಬ್ಬ ಮನುಷ್ಯನ ಅಂತರಂಗದಲ್ಲಿ ನೆಲೆಸಿರುವ ಪೈಶಾಚಿಕ ವರ್ತನೆಗಳಿಗೆ ಪಿಶಾಚಿ ಎಂದು ಹೇಳುವುದಾಗಿದೆ. ಆದ್ದರಿಂದ ನೀಚ ಕೆಲಸಗಳಿಗೆ ಪ್ರೇರಣೆ ನೀಡುವ ಶಕ್ತಿಯನ್ನು ನಿಯಂತ್ರಿಸಿ ಅದನ್ನು ಉತ್ತಮ ಕೆಲಸಗಳಿಗೆ ಉಪಯೋಗಿಸುವುದು ಎಂದಾಗಿದೆ ಪಿಶಾಚಿ ಬಂಧಿಸಲ್ಪಡುತ್ತದೆ ಎನ್ನುವುದರ ಅಂತರಾರ್ಥ.

ರಮಝಾನ್ ತಿಂಗಳ ಉಪವಾಸ ಕಾಲವನ್ನು ಮೂರು ಭಾಗಗಳನ್ನಾಗಿ ವಿಂಗಡಿಸಲಾಗಿದೆ. ಮೊದಲ ಹತ್ತು ದಿನಗಳು 'ಕಾರುಣ್ಯದ ದಿನಗಳು', ನಡುವಿನ ಹತ್ತು ದಿನಗಳು 'ಪಾಪ ವಿಮೋಚನೆಯ ದಿನಗಳು' ಹಾಗೂ ಕೊನೆಯ ಹತ್ತು ದಿನಗಳು 'ಮೋಕ್ಷದ ದಿನಗಳು' ಆಗಿವೆ. 'ಲೈಲತುಲ್ ಖ ದ್‌ರ್' ಎನ್ನುವ ಅತಿಮಹತ್ವಾದ ಅನುಗ್ರಹದ ರಾತ್ರಿ ಕೊನೆಯ ಹತ್ತು ರಾತ್ರಿಗಳಲ್ಲಿ ಒಂದಾಗಿದೆ. ಈ ಶ್ರೇಷ್ಠವಾದ ರಾತ್ರಿಯಲ್ಲಿ ಯಾರ ಪ್ರಾರ್ಥನೆ ದೇವರಿಗೆ ಸ್ವೀಕಾರವಾಗುತ್ತದೋ ಅವರಿಗೆ ಸಾವಿರ ತಿಂಗಳ ಆರಾಧನೆಗಳಿಗಿಂತಲೂ ಹೆಚ್ಚಿನ ಪ್ರತಿಫಲ ದೊರೆಯುತ್ತದೆಂದು ಹೇಳಲಾಗಿದೆ.

ಉಪವಾಸ ವ್ರತ ಮಾಡುವವನು ಅನೇಕ ರೋಗಗಳಿಂದ ಮುಕ್ತಿಯನ್ನು ಪಡೆಯುತ್ತಾನೆ. ಅವನ ಶರೀರ ಹಗುರವಾಗಿ ಲವಲವಿಕೆ ಹೊಂದುತ್ತದೆ. ದೇಹದಲ್ಲಿ ಶೇಖರಿಸಲ್ಪಟ್ಟ ಕೊಬ್ಬು ಕರಗುತ್ತದೆ. ಜಠರಕ್ಕೆ ವಿಶ್ರಾಂತಿ ದೊರೆತು ಅದು ಶಕ್ತಿಶಾಲಿಯಾಗುತ್ತದೆ. ರಕ್ತನಾಳಗಳು ಚುರುಕುಗೊಂಡು ಮೆದುಳಿಗೆ ನವಚೈತನ್ಯ ಉಂಟಾಗುತ್ತದೆ. ಇದೇ ಕಾರಣದಿಂದ ಮುಹಮ್ಮದ್ ರಸೂಲ್ (ಸ. ಅ) ರು "ನೀವು ಉಪವಾಸ ಮಾಡಿ ಆರೋಗ್ಯ ಗಳಿಸಿರಿ"ಎಂದಿರುವರು. ಆಧುನಿಕ ವೈದ್ಯಕೀಯ ವಿಜ್ಞಾನಿಗಳು ಕೂಡ ವ್ರತವು ಮನೋದೈಹಿಕವಾದ ಆರೋಗ್ಯದಲ್ಲಿ ಪ್ರಮುಖ ಪಾತ್ರ ವಹಿಸುವುದನ್ನು ಸಾದರಪಡಿಸುತ್ತಿದ್ದಾರೆ. ಆಯುರ್ವೇದ, ಯುನಾನಿ, ಹೋಮಿಯೋಪಥಿ ಮುಂತಾದ ವೈದ್ಯಕೀಯ ಪದ್ಧತಿಗಳಲ್ಲೂ ವ್ರತಕ್ಕೆ ಬಹಳ ಮಹತ್ವವಿದೆ. ತನ್ನ 52ನೇ ವರ್ಷ ಪ್ರಾಯದಲ್ಲಿ 40 ದಿನಗಳ ಕಾಲ ನಿರಂತರ ಉಪವಾಸ ಆಚರಿಸಿದ ಅಮೇರಿಕದ ಡಾ||ಬ್ರಂಡರ್ ಎಂಬವರು ಉಪವಾಸದ ಅವಧಿಯಲ್ಲಿ ತನ್ನ ಆರೋಗ್ಯಸ್ಥಿತಿ ಉತ್ತಮಗೊಂಡಿತಲ್ಲದೆ ದೇಹದ ಪ್ರತಿರೋಧ ಶಕ್ತಿ ಹೆಚ್ಚಿತೆಂದು ಹೇಳಿದ್ದಾರೆ. (ಅಲ್-ಇಹ್‌ಸಾನ್, 31-12-98). ಉಪವಾಸದಿಂದ ದೇಹದ ರೋಗಾಣುಗಳನ್ನು ತಡೆಯುವ ಶಕ್ತಿ ವೃದ್ಧಿಯಾಗುವುದೆಂದು ಸಂಶೋಧನೆಯಿಂದ ದೃಢಪಟ್ಟಿದೆ.

ಎಲ್ಲಾ ರೀತಿಯ ಸಾಮಾಜಿಕ ಕೆಡುಕುಗಳನ್ನು ಹೋಗಲಾಡಿಸಿ ಉತ್ತಮ ನಾಗರಿಕರಾಗಲು ರಮಝಾನ್ ತಿಂಗಳ ಉಪವಾಸಕಾಲ ಉತ್ತಮ ತರಬೇತಿ ನೀಡುತ್ತದೆ. ಇದರಿಂದ ಮನುಷ್ಯನು ತನ್ನ ಸಹಸೃಷ್ಟಿಗಳ ಅವಕಾಶಗಳನ್ನು ಸರಿಯಾದ ರೀತಿಯಲ್ಲಿ ಅರಿತು ಅವರೊಂದಿಗೆ ನೀತಿ, ಪರೋಪಕಾರ, ಅನುಕಂಪ ಮೊದಲಾದ ಗುಣಗಳನ್ನು ತೋರಿಸಲು ಮುಂದಾಗುತ್ತಾನೆ. ತನಗೆ ದೈವದತ್ತವಾದ ಜ್ಞಾನ, ಐಶ್ವರ್ಯ ಇನ್ನಿತರ ಅನುಗ್ರಹಗಳ ಬಾಗಿಲನ್ನು ಅನ್ಯರಿಗೂ ತೆರೆಯುತ್ತಾನೆ. ಸಮಾಜವು ಸತ್ಯದ ಮೇಲೆ ನೆಲೆಗೊಂಡು ಶಾಂತಿ -ಸಮಾಧಾನಗಳ ನಿವಾಸವಾಗುವುದು. ಈ ರೀತಿ ಉಪವಾಸ ವ್ರತವು ಮನುಷ್ಯ ಜೀವನವನ್ನು ಪಾಪರಹಿತವೂ ಪವಿತ್ರವೂ ಮಾಡುವಂಥ ಪ್ರಾಯೋಗಿಕ ತರಬೇತಿಯಾಗಿದೆ.

ರಮಝಾನ್ ತಿಂಗಳು ಮುಕ್ತಾಯವಾಗಿ ಶವ್ವಾಲ್ ತಿಂಗಳ ಒಂದನೇ ದಿನದಂದು 'ಈದುಲ್ ಫಿತ್‌ರ್' ಹಬ್ಬವನ್ನು ಆಚರಿಸಲಾಗುತ್ತದೆ. ಒಂದು ತಿಂಗಳ ಕಾಲದ ತೀವ್ರ ತಪಸ್ಸಿನ ವಿಜಯಕರ ಪರಿಸಮಾಪ್ತಿಯ ಆತ್ಮಾನಂದದ ಸಂಕೇತವಾಗಿದೆ ಈ ಹಬ್ಬದ ಆಚರಣೆ. ಆ ದಿನ ಬೆಳಿಗ್ಗೆ ಎಲ್ಲಾ ಮುಸ್ಲಿಮರು ಸಮೂಹ ಪ್ರಾರ್ಥನೆಗಾಗಿ ಈದ್‌ಗಾಹ್ ಮತ್ತು ಮಸೀದಿಗಳಲ್ಲಿ ಜಮಾಯಿಸುತ್ತಾರೆ. ಈದ್ ನಮಾಝ್‌ಗಿಂತ ಮೊದಲು 'ಫಿತ್‌ರ್ ಝಕಾತ್' ಎಂಬ ದಾನವನ್ನು ಪ್ರತಿಯೊಬ್ಬರೂ ಕಡ್ಡಾಯವಾಗಿ ನೀಡಬೇಕಾಗಿದೆ. ನವಜಾತ ಶಿಶುವಿನ ಪರವಾಗಿ ಕೂಡ ಈ ದಾನ ನೀಡಬೇಕಾಗಿದೆ. ಇದರ ಪ್ರಮಾಣ 2.5ಕಿಲೋಗ್ರಾಂ ಧಾನ್ಯವೋ ಅಥವಾ ಅದಕ್ಕಿಂತ ಹೆಚ್ಚೋ ಆಗಿದೆ. ತುಂಬಾ ಬಡವರಾದರೆ ಇದರ ಅರ್ಧಾಂಶ ಕೊಟ್ಟರೆ ಸಾಕಾಗುತ್ತದೆ. ಹಬ್ಬದ ದಿನದಂದು ಯಾರೇ ಆಗಲಿ ಅಥವಾ ಯಾವುದೇ ಧರ್ಮದವರಾಗಲಿ ಹಸಿವೆಯಿಂದ ಇರಬಾರದು ಎಂಬುದು ಈ ದಾನದ ಉದ್ದೇಶವಾಗಿದೆ. ಇದಲ್ಲದೆ, ಶ್ರೀಮಂತರು ವಸ್ತ್ರದಾನ ಮಾಡುವ ಸಂಪ್ರದಾಯವಿದೆ. ಆದ್ದರಿಂದ 'ದಾನ ನೀಡಿ ಉಪವಾಸ ಕೊನೆಗೊಳಿಸುವ ಪುಣ್ಯದಿನ' ಎಂದಾಗಿದೆ ಈದುಲ್ ಫಿತ್‌ರ್ ಎಂಬ ಪದ ಪ್ರಯೋಗ.

ಈದ್ ನಮಾಝ್ ಮಾಡಿದ ನಂತರ ಇಮಾಮರು 'ಈದ್ ಖುತ್‌ಬ' ಅಂದರೆ ಪ್ರವಚನ ನೀಡುತ್ತಾರೆ. ವರ್ಷದ ಮೂವತ್ತು ದಿನಗಳಲ್ಲಿ ಪಡೆದ ಆಧ್ಯಾತ್ಮಿಕ ಹಾಗೂ ನೈತಿಕ ತರಬೇತಿಯನ್ನು ಮುಂದಿನ ದಿನಗಳಲ್ಲಿಯೂ ಸದುಪಯೋಗಪಡಿಸಲು ಉಪದೇಶ ಮಾಡುತ್ತಾರೆ. ಇಮಾಮರು ನೀಡುವ ಖುತ್‌ಬ ಪ್ರವಚನವನ್ನು ಪ್ರತಿಯೊಬ್ಬರೂ ಆಲಿಸಬೇಕೆಂದು ಅಪೇಕ್ಷಿಸಲಾಗಿದೆ.

ಹೊಸ ಉಡುಪು ಧರಿಸುವುದು, ಸುಗಂಧ ದ್ರವ್ಯ ಲೇಪನ ಮತ್ತು ಪರಸ್ಪರ ಅಭಿನಂದನೆ ಈ ಹಬ್ಬದ ವೈಶಿಷ್ಟ್ಯಗಳಾಗಿವೆ. ಈ ದಿನ ಸಂಬಂಧಿಕರ ಹಾಗೂ ಗೆಳೆಯರ ಮನೆಗಳಿಗೆ ಭೇಟಿ ನೀಡುವುದು, ರೋಗಿಗಳನ್ನು ಸಂದರ್ಶಿಸುವುದು, ಅನಾಥ ಮಕ್ಕಳಿಗೆ, ವಿಧವೆಯರಿಗೆ ಸಹಾಯ ಮಾಡುವುದು, ಎಲ್ಲಾ ಮನೆಗಳಿಂದಲೂ ಸಂತೋಷದ 'ತಕ್‌ಬೀರ್' ಅಂದರೆ ದೇವಕೀರ್ತನೆಯ ಧ್ವನಿಗಳನ್ನು ಕೇಳಿಸುವಂತೆ ಮಾಡುವುದು ಇವೆಲ್ಲವೂ ಈ ಹಬ್ಬದ ಮಾದರಿಯಾಗಿದೆ.

ಈದ್ ಎಂದರೆ ಮತ್ತೆ ಮತ್ತೆ ಬರುವಂತಹುದು ಎಂದರ್ಥವಾಗಿದೆ. ಪ್ರತಿವರ್ಷವೂ ಈ ಹಬ್ಬಗಳು ಪುನರಾವರ್ತಿಸಲ್ಪಡುವುದರಿಂದ 'ಈದ್' ಎಂಬ ಹೆಸರು ಪಡೆದಿವೆ. ಇಸ್ಲಾಂ ಧರ್ಮವು ಆಜ್ಞಾಪಿಸಿರುವ ಈದ್ ಆಚರಣೆ ಮುಖ್ಯವಾಗಿ ಎರಡು ವಿಷಯಗಳನ್ನು ಒಳಗೊಂಡಿದೆ. ಒಂದನೆಯದು, ಸೃಷ್ಟಿಕರ್ತನ ಆರಾಧನೆ - ಪ್ರತಿ ಈದ್ ನಮಾಝ್ ಮಾಡುವ ಮೂಲಕ ಆಚರಿಸಲಾಗುತ್ತದೆ. ಸೃಷ್ಟಿಕರ್ತನು ದಯಪಾಲಿಸಿದ ಮಾರ್ಗದರ್ಶನ ಮತ್ತು ಅವನು ನೀಡಿದ ಅನುಗ್ರಹಗಳಿಗಾಗಿ ಕೃತಜ್ಞತೆ ಅರ್ಪಿಸುವುದು ಪ್ರಾರ್ಥನೆಯ ಮುಖ್ಯ ಉದ್ದೇಶವಾಗಿದೆ. ಈದ್‌ನಲ್ಲಿ ಒಳಗೊಂಡಿರುವ ಎರಡನೆಯ ವಿಷಯ - ಸಹಜೀವಿಗಳ ಬಗ್ಗೆ ಸಹಾನುಭೂತಿ ತೋರಿಸುವುದಾಗಿದೆ. ಬಡವರ ಆವಶ್ಯಕತೆಗಳನ್ನು ಈಡೇರಿಸಿಕೊಂಡು ದಾನ ಮಾಡುವ ಆಜ್ಞೆ ಇದೆ. ಎಲ್ಲಾ ಧರ್ಮಗಳ ಮೂಲತತ್ವಗಳು ಇವುಗಳೇ ಆಗಿವೆ. ಆದ್ದರಿಂದ ಸೃಷ್ಟಿಕರ್ತನ ಆರಾಧನೆ ಮತ್ತು ಸಹಜೀವಿಗಳ ಸೇವೆ - ಇವೆರಡೂ ಒಳಗೊಂಡಿರದ ಯಾವ ಧರ್ಮವೂ ವಿಶ್ವದಲ್ಲಿ ಜನಮನ್ನಣೆ ಗಳಿಸಲಾರದು.

(ಈ ಭಾಷಣ ಬರೆಯಲು ಸಹಕರಿಸಿದ ಜನಾಬ್ ಎಂ. ಉಬೈದುಲ್ಲಾ ಸಾಹೇಬ್ ಹಾಗೂ ಜನಾಬ್ ಮೌಲವಿ ಸಿ. ಪಿ. ಮೊೖದಿನ್ ಕುಟ್ಟಿ ಸಾಹೇಬ್ ಇವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು)

ಬಿ. ಎಸ್. ರಫೀಕ್ ಅಹ್ಮದ್
ಕೊಯನಾಡು

# ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ -14

# ಮಕ್ಕದವರಿಂದ ಆಕ್ರಮಣಕ್ಕೆ ತಯಾರಿ

ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್
ಕನ್ನಡಕ್ಕೆ : M.P.I.

ಹಿಂದೆ ವಿವರಿಸಿದಂತೆ ಎರಡು ಮೂರು ತಿಂಗಳು ಕಳೆದಾಗ ಮಕ್ಕದವರ ಗಾಬರಿ ಸ್ವಲ್ಪ ಮಟ್ಟಿಗೆ ತಣ್ಣಗಾಗುತ್ತಾ ಬಂದಿತ್ತು. ಆಗ ಅವರು ಮದೀನದ ಮುಸ್ಲಿಮರ ಮೇಲೆ ಆಕ್ರಮಣ ನಡೆಸಲು ಸಂಚು ಹೂಡುತ್ತಿದ್ದರು. ಒಮ್ಮೆ ಮದೀನದಿಂದ ಔಸ್ ಗೋತ್ರದ ನೇತಾರ ಸಅದ್ ಬಿನ್ ಮುಆದ್ ಎಂಬವರು ಕಅ್‌ಬ ಪ್ರದಕ್ಷಿಣೆಗಾಗಿ ಮಕ್ಕಕ್ಕೆ ಹೋದ ವೇಳೆಯಲ್ಲಿ ಇದಕ್ಕೆ ಒಂದು ಸಂದರ್ಭ ಅವರಿಗೆ ಲಭಿಸಿತು. ಸಅದ್ ಬಿನ್ ಮುಆದ್ ಕಅ್‌ಬ ಪವಿತ್ರ ಗೃಹದ 'ತವಾಫ್' (ಪ್ರದಕ್ಷಿಣೆ) ಮಾಡುತ್ತಿರುವುದನ್ನು ಅಬೂಜಹಲ್ ಕಾಣಲೆಡೆಯಾಯಿತು. ಆತನು ಬಹಳ ಸಿಟ್ಟುಗೊಂಡು ಈ ರೀತಿ ಹೇಳಿದ: "ಏನು, ನೀವು ಆ ಮುರ್ತದ್ದ್‌ನಿಗೆ*(ಮುಹಮ್ಮದ್ ಪೈಗಂಬರ್-ಸ-ರವರಿಗೆ) ಆಶ್ರಯ ನೀಡಿದ ಬಳಿಕವೂ ನಿರ್ಭೀತಿಯಿಂದ ಇಲ್ಲಿ ಬಂದು ಕಅ್‌ಬದ ಪ್ರದಕ್ಷಿಣೆ ಮಾಡುವುದೇ? ಅವನಿಗೆ ರಕ್ಷಣೆ ನೀಡಲಿಕ್ಕೂ ಸಹಾಯ ಮಾಡಲಿಕ್ಕೂ ನಿಮಗೆ ಸಾಮರ್ಥ್ಯವಿದೆಯೆಂದು ಮದೀನದವರಾದ ನೀವು ತಿಳಿದಿದ್ದೀರಾ? ದೇವರಾಣೆಗೂ, ಅಬೂ ಸುಫಿಯಾನ್ ನಿನ್ನೊಂದಿಗೆ ಇಲ್ಲದಿರುತ್ತಿದ್ದರೆ ನೀನು ಹಿಂದಿರುಗಿ ನಿನ್ನ ಮನೆಯವರ ಬಳಿ ಹೋಗುತ್ತಿರಲಿಲ್ಲ."

ಸಅದ್ ಬಿನ್ ಮುಆದ್ ಅದೇ ಧಾಟಿಯಲ್ಲಿ ಉತ್ತರಿಸಿದರು - "ಅಲ್ಲಾಹನಾಣೆ, ನೀವೇನಾದರೂ ನಮ್ಮನ್ನು ಕಅ್‌ಬದೊಳಗೆ ಪ್ರವೇಶಿಸುವುದರಿಂದ ತಡೆದಲ್ಲಿ, ನಿಮಗೆ ಶಾಮ್‌ಗೆ ಹೋಗುವ ದಾರಿ ಸುಗಮವಾಗಿರದು ಎಂಬುದನ್ನು ಚೆನ್ನಾಗಿ ನೆನಪಿಟ್ಟುಕೊಳ್ಳಿರಿ."

ಹೆಚ್ಚು ಕಡಿಮೆ ಇದೇ ವೇಳೆ ಮಕ್ಕದ ಓರ್ವ ದೊಡ್ಡ ನೇತಾರ ವಲೀದ್ ಬಿನ್ ಮುಗೀರ ಕಾಯಿಲೆಯಿಂದ ಹಾಸಿಗೆ ಹಿಡಿದ. ತನ್ನ ಮರಣ ಆಸನ್ನವಾಗಿದೆಯೆಂದು ಆತನಿಗೆ ಮನವರಿಕೆಯಾಗುತ್ತಿತ್ತು. ಒಂದು ದಿನ ಸ್ಥಿತಿ ಚಿಂತಾಜನಕವಾಗಿ ಆತನ ಸುತ್ತಲೂ ಮಕ್ಕದ ದೊಡ್ಡ ದೊಡ್ಡ ಮುಖಂಡರು ಬಂದು ಕುಳಿತಿದ್ದರು. ಆತ ಹತಾಶನಾಗಿ ಬಿಕ್ಕಿ ಬಿಕ್ಕಿ ಅಳುತ್ತಿದ್ದ. ಮಕ್ಕದ ನೇತಾರರು ಆಶ್ಚರ್ಯಗೊಂಡು "ತಾವು ಅಳುತ್ತಿರುವುದೇಕೆ?" ಎಂದು ಕೇಳಿದರು. ವಲೀದ್ ಹೇಳಿದ - "ನಾನು ಮರಣ ಭಯದಿಂದ ಅಳುತ್ತಿರುವುದೆಂದು ನೀವು ಭಾವಿಸಿದಿರಾ? ದೇವರಾಣೆಗೂ ನಾನು ಮರಣಕ್ಕೆ ಭಯಪಟ್ಟು ಅಳುತ್ತಿರುವುದಲ್ಲ. ನನ್ನ ಭಯ ಮುಹಮ್ಮದನ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಧರ್ಮಕ್ಕೆ ಜನ ಮನ್ನಣೆ ಲಭಿಸಿ ಅವನು ಜಯಗಳಿಸುವನೇ ಎಂಬುದು. ಮಕ್ಕದ ಮೇಲೆ ಸಹ ಅವನು ವಿಜಯ ಸಾಧಿಸುವನೇ? ಎಂಬುದೇ ನನ್ನ ದುಃಖದ ಕಾರಣವಾಗಿದೆ." ಆಗ ಬಳಿಯಲ್ಲಿದ್ದ ಅಬೂಸುಫಿಯಾನ್ "ಆ ಬಗ್ಗೆ ತಾವು ವ್ಯಾಕುಲ ಪಡಬೇಕಾದ ಅಗತ್ಯವಿಲ್ಲ. ನಾವು ಬದುಕಿರುವ ಕಾಲದ ವರೆಗೂ ಆ ರೀತಿ ಸಂಭವಿಸಲು ಸಾಧ್ಯವಿಲ್ಲ. ಆ ಬಗ್ಗೆ ನಾವು ಭರವಸೆ ನೀಡುತ್ತೇವೆ" ಎಂದು ಹೇಳಿ ಆತನನ್ನು ಸಾಂತ್ವನಗೊಳಿಸಿದರು.

ಇವೆಲ್ಲವುಗಳಿಂದಲೂ ಮಕ್ಕದವರು ತಮ್ಮ ದುಷ್ಟತನವನ್ನು ಕೈಬಿಟ್ಟಿರಲಿಲ್ಲವೆಂದೂ ದೌರ್ಜನ್ಯಕ್ಕೆ ಒಂದು ತಾತ್ಕಾಲಿಕ ವಿರಾಮ ಮಾತ್ರವೇ ಹಾಕಲಾಗಿತ್ತೆಂದೂ ತಿಳಿದು ಬರುತ್ತದೆ. ಜನರನ್ನು ಪ್ರವಾದಿಗೆ ವಿರುದ್ಧವಾಗಿ ಎತ್ತಿ ಕಟ್ಟುವ ತಯಾರಿ ನಡೆಯುತ್ತಲೇ ಇತ್ತು. ಮರಣ ಶಯ್ಯೆಯಲ್ಲಿರುವ ನೇತಾರರು, ಪ್ರವಾದಿಯ ವಿರುದ್ಧ ಹೋರಾಡುವಂತೆ ಇತರರಿಂದ ಪ್ರಮಾಣ ಮಾಡಿಸುತ್ತಿದ್ದರು. ಮದೀನದವರನ್ನು ಸಹ ಪೈಗಂಬರರ ವಿರುದ್ಧ ದಂಗೆಯೇಳುವಂತೆ ಬಲವಂತಪಡಿಸಲಾಗುತ್ತಿತ್ತು. ಅವರು ನಿರಾಕರಿಸಿದಾಗ ಅವರಿಗೆ ಎಚ್ಚರಿಕೆ ನೀಡಲಾಗುತ್ತಿತ್ತು. ಮಕ್ಕದಿಂದ ಸುಸಜ್ಜಿತವಾದ ಸೇನೆಯನ್ನು ಕಳುಹಿಸಿ ಅವರ ಮೇಲೆ ಆಕ್ರಮಣ ನಡೆಸಲಾಗುವುದೆಂದೂ ಅವರ ಗಂಡಸರನೆಲ್ಲ ಕೊಂದು ಹಾಕಿ ಅವರ ಮಹಿಳೆಯರನ್ನು ದಾಸ್ಯಕ್ಕೆ ಹಾಕಲಾಗುವುದೆಂದೂ ಹೇಳಿ ಅವರನ್ನು ಹೆದರಿಸಲಾಗುತ್ತಿತ್ತು.

ಇಂತಹ ಸಂದರ್ಭದಲ್ಲಿ ಪೈಗಂಬರ್ (ಸ) ಏನೂ ಕಾರ್ಯ ಪ್ರವೃತ್ತನಾಗದೆ ಸುಮ್ಮನಿರುವುದು ಸಾಧ್ಯವಿರಲಿಲ್ಲ. ಮದೀನದ ಮೇಲೆ ನಡೆಯ ಬಹುದಾಗಿದ್ದ ಸಂಭಾವ್ಯ ಆಕ್ರಮಣದ ಬಗ್ಗೆ ಎಚ್ಚರದಿಂದಿದ್ದು ಅದರ ರಕ್ಷಣೆಗೆ ಬೇಕಾದ ಏರ್ಪಾಡುಗಳನ್ನು ಮಾಡಬೇಕಾದುದು ಅವರ ಕರ್ತವ್ಯವಾಗಿತ್ತು. ಹಾಗೆ, ಹಝ್ರತ್ ಪೈಗಂಬರರು ತನ್ನ ಅನುಚರರ ಸಣ್ಣ ಸಣ್ಣ ತಂಡಗಳನ್ನು ಮಕ್ಕದ ಅಕ್ಕಪಕ್ಕದ ಪ್ರದೇಶಗಳಿಗೆ ಕಳುಹಿಸಿ ಮಕ್ಕದವರ ಯೋಜನೆಗಳ ಬಗ್ಗೆ ಮಾಹಿತಿ ಪಡೆಯುತ್ತಿದ್ದರು. ಯುದ್ಧದ ಸುಳಿವೇನಾದರೂ ಇದೆಯೇ ಎಂಬ ಬಗ್ಗೆ ವಿವರ ಸಂಗ್ರಹಿಸಿ ವರದಿ ಮಾಡುವುದು ಈ ತಂಡಗಳ ಕೆಲಸವಾಗಿತ್ತು. ಕೆಲವು ವೇಳೆ ಈ ತಂಡದವರಿಗೂ ಮಕ್ಕದ ಕೆಲವು ಗೋತ್ರದವರಿಗೂ ತಮ್ಮೊಳಗೆ ಸಣ್ಣ ಪುಟ್ಟ ಘರ್ಷಣೆಗಳು ಸಹ ಉಂಟಾಗುತ್ತಿದ್ದವು. ಇದರ ಕುರಿತು ಐರೋಪ್ಯ ಬರಹಗಾರರಲ್ಲಿ ಕೆಲವರು ಇದು ಪೈಗಂಬರರ ಅತಿರೇಕದ ವರ್ತನೆಯೆಂದು ಬರೆದಿರುವರು. ಏನು! ಹದಿಮೂರು ವರ್ಷಗಳ ಕಾಲ ಪೈಗಂಬರ್ (ಸ) ಮತ್ತು ಅವರ ಸಂಗಡಿಗರನ್ನು ಮಕ್ಕದಲ್ಲಿ ಅತ್ಯಂತ ಹೇಯವಾದ ಹಿಂಸಾಚಾರಕ್ಕೆ ಗುರಿಪಡಿಸಿ, ನಂತರ ಅವರು ಮಕ್ಕದಿಂದ ನಿರ್ಗಮಿಸಿ ಮದೀನದಲ್ಲಿ ಆಶ್ರಯ ಪಡೆದ ಬಳಿಕವೂ ಅಲ್ಲಿಯೂ

* ಮುರ್ತದ್ದ್ = ಧರ್ಮಭ್ರಷ್ಟ

ಅವರನ್ನು ಬದುಕಲು ಬಿಡದೆ, ಮದೀನದ ಜನರನ್ನೇ ಅವರ ವಿರುದ್ಧ ಹೋರಾಡುವಂತೆ ಪಿತೂರಿ ನಡೆಸುತ್ತಾ ಹಾಗೂ ಮದೀನದ ಮೇಲೆ ಸೇನಾ ಕಾರ್ಯಚರಣೆ ನಡೆಸುವಂತಹ ಧಮಕಿಗಳನ್ನು ನೀಡುತ್ತಿರುವಾಗಲೂ ಪೈಗಂಬರರು ಆ ಬಗ್ಗೆ ಎಚ್ಚರ ವಹಿಸಬಾರದೆಂದೂ ಸ್ವಂತ ಆತ್ಮರಕ್ಷಣೆಗೆ ಬೇಕಾದ ತಯಾರಿಗಳನ್ನು ನಡೆಸಬಾರದೆಂದೂ ಈ ಐರೋಪ್ಯ ಬರಹಗಾರರು ಹೇಳುತ್ತಿರುವರೇ ? ಮಕ್ಕದವರು ಅಕಸ್ಮಾತ್ತಾಗಿ ಮದೀನದ ಮೇಲೆರಗಿ ಯುದ್ಧ ಸಾರುವ ಸೂಚನೆಗಳೇನಾದರೂ ಇವೆಯೇ ಎಂದು ತಿಳಿಯಲಿಕ್ಕಾಗಿ ಪೈಗಂಬರರು ಗುಪ್ತಚರರನ್ನು ನಿಯೋಗಿಸಿದ್ದರೆ ಅದು ಅತಿರೇಕದ ಕೆಲಸವಾದೀತೇ ? ಮದೀನದ ಮುಸಲ್ಮಾನರಿಗೂ ಮಕ್ಕದವರಿಗೂ ಮಧ್ಯೆ ಸಮರ ಸನ್ನಾಹವೇರ್ಪಡಲು ಅವರು ಮಕ್ಕದಲ್ಲಿ ಅನುಭವಿಸಿದ ಹದಿಮೂರು ವರ್ಷಗಳ ಪೀಡನೆಗಳು ಪರ್ಯಾಪ್ತವಾದ ಕಾರಣವಲ್ಲವೆಂದು ಪ್ರಪಂಚದ ಯಾವ ಕಾನೂನು ತಾನೇ ಹೇಳಬಲ್ಲದು ? ಇಂದು ಪಾಶ್ಚಾತ್ಯ ದೇಶಗಳು ತಮ್ಮನ್ನು ತಾವೇ ಬಹಳ ಸುಸಂಸ್ಕೃತರೆಂದೂ ಸಭ್ಯರೆಂದೂ ಹೇಳಿಕೊಳ್ಳುತ್ತಿವೆ. ಆದರೂ ಸಣ್ಣ ಪುಟ್ಟ ಕಾರಣಗಳಿಗಾಗಿ ಅವರು ಆಯುಧ ಪ್ರಯೊಗ ನಡೆಸುವುದನ್ನೂ ಬಲವಂತವಾಗಿ ದಿಗ್ಬಂಧನಗಳನ್ನು ಹೇರುವುದನ್ನೂ ನಾವು ಕಾಣುತ್ತಿದ್ದೇವೆ. ಪೈಗಂಬರರ ಮತ್ತು ಅವರ ಸಂಗಡಿಗರ ಮೇಲೆ ಮಕ್ಕದಲ್ಲಿ ನಡೆದ ದೌರ್ಜನ್ಯಗಳ ಒಂದಂಶದಷ್ಟಾದರೂ ದೌರ್ಜನ್ಯ ಯಾವುದೇ ಪಂಗಡದ ಮೇಲೆ ನಡೆದಿದ್ದಲ್ಲಿ ಅವರಿಗೆ ಆತ್ಮರಕ್ಷಣೆ ಮಾಡಿಕೊಳ್ಳುವ ಹಕ್ಕಿಲ್ಲವೆಂದು ವಿವೇಕವಿರುವ ಯಾರಾದರೂ ಹೇಳುವರೇ ?

ಒಂದು ರಾಜ್ಯದ ಜನರು ಒಟ್ಟಾಗಿ ಒಂದು ಪ್ರತ್ಯೇಕ ಪಂಗಡದ ಮೇಲೆ ದಬ್ಬಾಳಿಕೆ ನಡೆಸಿ ಅವರನ್ನು ಊರು ಬಿಟ್ಟು ಹೋಗುವಂತೆ ಮಾಡಿದರೂ ನಂತರ ಅವರು ಆಶ್ರಯ ಪಡೆದ ನಾಡಿನಲ್ಲಿ ಸಹ ಅವರನ್ನು ನೆಮ್ಮದಿಯಿಂದಿರಲು ಬಿಡದಿದ್ದಲ್ಲಿ ಅವರಿಗೆ ಸ್ವಂತ ರಕ್ಷಣೆಗಾಗಿ ಹೋರಾಡುವ ಹಕ್ಕಿಲ್ಲವೇ? ಮದೀನದಲ್ಲಿ ಮುಸ್ಲಿಮರಿಗೆ ಸ್ವಂತ ಆಡಳಿತಾಧಿಕಾರ ಕೈ ಸೇರಿದ ಬಳಿಕ ಅವರು ಮಕ್ಕದವರ ಮೇಲೆ ಯುದ್ಧ ಸಾರಲು ನಿಜವಾಗಿಯೂ ಅವರಿಗೆ ಬೇರೆ ಯಾವುದೇ ಕಾರಣದ ಆವಶ್ಯಕತೆಯಿರಲಿಲ್ಲ. ಮಕ್ಕದಲ್ಲಿ ಅವರು ಅನುಭವಿಸಿದ ಪೀಡನೆಗಳೇ ಪರ್ಯಾಪ್ತವಾದ ಕಾರಣವಾಗಿತ್ತು. ಆದರೂ ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ಮಕ್ಕದವರ ಮೇಲೆ ಯುದ್ಧ ಘೋಷಣೆ ಮಾಡಿರಲಿಲ್ಲ. ಅವರು ಎಲ್ಲವನ್ನೂ ಸಹಿಸಿಕೊಂಡು ತಾಳ್ಮೆಯಿಂದಿದ್ದರು. ಕೇವಲ ತಮ್ಮ ಆತ್ಮ ರಕ್ಷಣೆಯ ವ್ಯವಸ್ಥೆಗಳನ್ನು ಮಾತ್ರ ಮಾಡುತ್ತಿದ್ದರು. ಆದರೆ ಮಕ್ಕದವರು ಮದೀನದ ಮುಸಲ್ಮಾನರಿಗೆ ಉಪದ್ರ ನೀಡುವುದನ್ನು ನಿಲ್ಲಿಸಲಿಲ್ಲ. ಅವರು ಮದೀನದ ಜನರನ್ನೇ ಮುಸಲ್ಮಾನರೆದುರಾಗಿ ವರ್ತಿಸುವಂತೆ ಪ್ರೇರೇಪಿಸುತ್ತಿದ್ದರು. ಮುಸಲ್ಮಾನರನ್ನು ಕಅ್‌ಬ ಪವಿತ್ರ ಗೃಹದ ಪ್ರದಕ್ಷಿಣೆ (ಹಜ್ ಮತ್ತು ಉಮ್ರಾ) ಮಾಡುವುದರಿಂದ ತಡೆದರು. ಮಕ್ಕದ ವ್ಯಾಪಾರಿ ತಂಡಗಳು ಶಾಮ್‌ಗೆ ಹೋಗುವ ತಮ್ಮ ವಾಡಿಕೆಯ ದಾರಿಯನ್ನು ಬಿಟ್ಟು ಮದೀನದ ಸುತ್ತಮುತ್ತಲಿನ ಪ್ರದೇಶಕ್ಕೆ ತಾಗಿಕೊಂಡು ಯಾತ್ರೆ ಮಾಡಲು ತೊಡಗಿದವು ಹಾಗೂ ಅಲ್ಲಿರುವ ಜನರನ್ನು ಮುಸಲ್ಮಾನರಿಗೆದುರಾಗಿ ತಿರುಗಿ ಬೀಳುವಂತೆ ಪ್ರೇರೇಪಿಸುತ್ತಿದ್ದರು. ಹಾಗೆ, ಮದೀನದಲ್ಲಿ ಸಹ ಅವರಿಗೆ ಶಾಂತಿಯಿಂದ ಜೀವನ ಸಾಗಿಸಲು ಸಾಧ್ಯವಾಗದ ಅವಸ್ಥೆ ಉಂಟಾಯಿತು. ಈ ಪರಿಸ್ಥಿತಿಯಲ್ಲಿ, ಹದಿನಾಲ್ಕು ವರ್ಷಗಳಿಂದಲೂ ಮಕ್ಕದವರು ನಿರಂತರವಾಗಿ ಒಡ್ಡುತ್ತಿದ್ದ ಯುದ್ಧದ ಈ ಸವಾಲನ್ನು ಸ್ವೀಕರಿಸಬೇಕಾದುದು ಮುಸಲ್ಮಾನರ ಮೇಲೆ ಅನಿವಾರ್ಯ ಕರ್ತವ್ಯವಾಯಿತು. ಮುಸಲ್ಮಾನರು ಆ ಸವಾಲನ್ನು ಸ್ವೀಕರಿಸಲು ತಯಾರಾದುದನ್ನು ಪ್ರಶ್ನಿಸುವ ನೈತಿಕ ಅಧಿಕಾರ ಪ್ರಪಂಚದ ಯಾವನೇ ವ್ಯಕ್ತಿಗೂ ಇರುವುದಿಲ್ಲ.

## ಮದೀನದಲ್ಲಿ ಇಸ್ಲಾಮೀ ಆಡಳಿತ ವ್ಯವಸ್ಥೆ

ಮದೀನದ ಮೇಲೆ ಹೊರಗಿನಿಂದ ಬರಬಹುದಾದ ಸಂಭಾವ್ಯ ಆಕ್ರಮಣದ ಕುರಿತು ನಿಗಾ ಇಟ್ಟುಕೊಂಡು ಅದಕ್ಕೆ ಬೇಕಾದ ಪ್ರತಿರೋಧ ಸಿದ್ಧತೆಗಳನ್ನು ಮಾಡುತ್ತಿದ್ದಂತೆಯೇ ಇನ್ನೊಂದು ಕಡೆ ಪ್ರವಾದಿ ಮುಹಮ್ಮದ್ (ಸ)ರು ಮದೀನದ ಒಳಗೆ ತನ್ನ ಅನುಯಾಯಿಗಳ ನೈತಿಕ, ಧಾರ್ಮಿಕ ಮತ್ತು ಆಧ್ಯಾತ್ಮಿಕ ಶಿಕ್ಷಣದ ಕುರಿತು ಸಾಕಷ್ಟು ಗಮನ ಹರಿಸುತ್ತಿದ್ದರು. ಮದೀನದ ಹೆಚ್ಚಿನಂಶ ಜನರು ಅಷ್ಟರಲ್ಲೇ ಇಸ್ಲಾಂ ಧರ್ಮ ಸ್ವೀಕರಿಸಿದ್ದರು. ಅವರು ಇಸ್ಲಾಂ ಧರ್ಮದ ತತ್ವ ಸಂಹಿತೆಗಳಲ್ಲಿ ಸಂಪೂರ್ಣ ನಂಬಿಕೆ ಹೊಂದಿ ನಿಜಾರ್ಥದಲ್ಲೇ ಮುಸ್ಲಿಮರಾಗಿದ್ದರು. ಆದರೆ, ತೋರಿಕೆಗಾಗಿ ಮಾತ್ರ ಇಸ್ಲಾಂ ಧರ್ಮ ಸ್ವೀಕರಿಸಿದ ಕೆಲವು 'ಮುನಾಫಿಕ್' (ಕಪಟ ವಿಶ್ವಾಸಿ)ಗಳು ಸಹ ಇಲ್ಲದಿರಲಿಲ್ಲ. ಅಂತೂ ಪೈಗಂಬರರು (ಸ) ಅಲ್ಲಿ ಇಸ್ಲಾಮೀ ಶಾಸನ ಕ್ರಮಗಳನ್ನು ಜಾರಿಗೊಳಿಸತೊಡಗಿದರು. ಮೊದಲಾದರೆ ಅರಬರು ಪರಸ್ಪರ ಕಚ್ಚಾಡಿ ತೋಳ್ಬಲದ ಪ್ರಯೋಗದಿಂದ ತಮ್ಮ ವ್ಯಾಜ್ಯಗಳನ್ನು ಅವರವರೇ ತೀರ್ಮಾನಿಸಿಕೊಳ್ಳುತ್ತಿದ್ದರು. ಈಗ ಪೈಗಂಬರರು ಅಲ್ಲಿ ನ್ಯಾಯಾಂಗ ವ್ಯವಸ್ಥೆಯನ್ನು ಜಾರಿಗೊಳಿಸಿದರು.

ಜನರ ಮಧ್ಯೆ ಉಂಟಾಗುತ್ತಿದ್ದ ವಿವಾದಗಳನ್ನೂ ವ್ಯಾಜ್ಯಗಳನ್ನೂ ನ್ಯಾಯ ವಿಚಾರಣೆಯ ಮೂಲಕ ತೀರ್ಮಾನಿಸುವ ನ್ಯಾಯಾಧೀಶರು (ಖಾಝಿ)ಗಳನ್ನು ನಿಯಮಿಸಲಾಯಿತು. ನ್ಯಾಯಾಧೀಶರು ಜನರ ಅಹವಾಲುಗಳನ್ನು ಆಲಿಸಿ ಅವರೊಳಗಿನ ಭಿನ್ನಾಭಿಪ್ರಾಯಗಳ ಕುರಿತು ಸರಿಯಾದ ವಿಚಾರಣೆ ನಡೆಸಿದ ಬಳಿಕ ನೀಡುವ ತೀರ್ಮಾನಗಳ ಹೊರತು ಜನರಿಗೆ ತಾವೇ ಸ್ವಯಂ ಮನಬಂದಂತೆ ತೀರ್ಮಾನ ಕೈಗೊಳ್ಳಲು ಈಗ ಸಾಧ್ಯವಿರಲಿಲ್ಲ. ಮದೀನದ ಜನರಿಗೆ ಜ್ಞಾನಾರ್ಜನೆಯ ಬಗ್ಗೆ ಏನೇನೂ ಅಭಿರುಚಿಯಿರಲಿಲ್ಲ. ಈಗ ಅದಕ್ಕೆ ಬೇಕಾದ ವ್ಯವಸ್ಥೆಯನ್ನು ಪ್ರವಾದಿಯವರು ಏರ್ಪಡಿಸಿದರು. ವಿದ್ಯಾವಂತರು ಅನಕ್ಷರಸ್ಥರಿಗೆ ಓದು ಬರಹ ಕಲಿಸಿಕೊಡುವ ವ್ಯವಸ್ಥೆ ಮಾಡಿದರು. ಅನ್ಯಾಯ, ಅನೀತಿ. ಅಕ್ರಮಗಳನ್ನು ಕೊನೆಗೊಳಿಸಲಾಯಿತು. ಸ್ತ್ರೀಯರ ಹಕ್ಕುಗಳನ್ನು ಕಾಪಾಡುವ ವ್ಯವಸ್ಥೆ ಮಾಡಲಾಯಿತು. ಶರೀಅತ್ ನಿಯಮಗಳ ಪ್ರಕಾರ ಶ್ರೀಮಂತರ ಮೇಲೆ ಕರೆ

*(34ನೇ ಪುಟಕ್ಕೆ)*

# ಇಸ್ರಾಅ್ - ಮಿಅ್‌ರಾಜ್

**(ಪೈಗಂಬರರ ನಿಶಾ ಪ್ರಯಾಣ - ಗಗನಾರೋಹಣ)**

**ಮೌಲವಿ ಮುಹಮ್ಮದ್ ಅಬುಲ್ ವಫಾ**

ಧರ್ಮದ ತತ್ವಗಳಲ್ಲಿ ಹಲವನ್ನು ಅದರ ಅನುಯಾಯಿಗಳೇ ತಪ್ಪಾಗಿ ತಿಳಿದುಕೊಂಡು ಹಾಗೆಯೇ ಅದನ್ನು ಪ್ರಚಾರ ಮಾಡುತ್ತಾರೆ. ತತ್ಫಲವಾಗಿ ಇಂದು ಅನೇಕ ಬುದ್ಧಿಜೀವಿಗಳು ಧರ್ಮದೊಡನೆ ವಿರಕ್ತಿ ಪ್ರಕಟಿಸುತ್ತಾರೆ. ಪರೀಕ್ಷಣಾತ್ಮಕವಾದ ಹಲವು ವಿಚಾರಗಳು ಧರ್ಮವಿಶ್ವಾಸಗಳಲ್ಲಿ ಒಳಗೊಂಡಿರುತ್ತವೆಂಬುದು ಸತ್ಯವೇ ಆಗಿದೆ. ಆದರೆ ದೈವಿಕ ವಿಚಾರಗಳನ್ನು ಮನವರಿಕೆ ಮಾಡಿಕೊಳ್ಳಲಿಕ್ಕೆ ಬುದ್ಧಿಯನ್ನು ಉಪಯೋಗಿಸಬೇಕೆಂದು ಖುರ್‌ಆನ್ ನಮಗೆ ಕಲಿಸಿಕೊಡುತ್ತದೆ. ಈ ಉಪದೇಶವನ್ನು ಸ್ವೀಕರಿಸದಿರುವ ಫಲವಾಗಿ ಧರ್ಮದ ಅಧ್ಯಾಪನಗಳ ಬಗ್ಗೆ ಹಲವು ತಪ್ಪು ಭಾವನೆಗಳು ಹರಡಿಕೊಂಡಿವೆ. ಇಸ್ಲಾಮಿನ ವಿರೋಧಿಗಳು ಅದರಿಂದ ತುಂಬಾ ಪ್ರಯೋಜನ ಪಡೆಯುತ್ತಾರೆ. ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ 'ಇಸ್ರಾಅ್' ಮತ್ತು 'ಮಿಅ್‌ರಾಜ್' (ನಿಶಾ ಪ್ರಯಾಣ ಮತ್ತು ಗಗನಾರೋಹಣ) ಕುರಿತು ತಪ್ಪಾದ ಭಾವನೆಗಳು ಆ ಪೈಕಿ ಸೇರುತ್ತವೆ. ಆ ಆಧ್ಯಾತ್ಮಿಕ ಘಟನೆಯ ಯಥಾರ್ಥತ್ವವನ್ನು ಇಂದು ಹಲವರು ಮನವರಿಕೆ ಮಾಡಿಕೊಂಡಿಲ್ಲವೆಂದು ಹೇಳಬೇಕಾಗಿದೆ.

ಹಝ್ರತ್ ಮುಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವ ಸಲ್ಲಮ್) ಒಂದು ರಾತ್ರಿಯಲ್ಲಿ ಜಿಬ್ರೀಲ್ (ಅಲೈಹಿಸ್ಸಲಾಮ್) ಎಂಬ ಮಲಕ್ (ದೇವದೂತ)ನೊಂದಿಗೆ ಮಕ್ಕದಿಂದ ಹೊರಟು ಬೈತುಲ್ ಮುಖದ್ದಸ್ ತನಕ ಯಾತ್ರೆ ಮಾಡಿ ಅಲ್ಲಿಂದ ಆಕಾಶಗಳನ್ನು ಒಂದೊಂದಾಗಿ ಏರಿಹೋಗಿ, ಏಳನೇ ಆಕಾಶಕ್ಕೂ ಆಚೆ 'ಬೈತುಲ್ ಮಅ್‌ಮೂರ್' ಮತ್ತು 'ಸಿದ್‌ರತುಲ್ ಮುನ್‌ತಹಾ'ವನ್ನೂ ದಾಟಿ ಅಲ್ಲಾಹನೊಂದಿಗೆ ಅತಿಮಹತ್ತರವಾದ ಸಂಭಾಷಣೆಗಳನ್ನು ನಡೆಸಿ ಅದೇ ರಾತ್ರಿಯಲ್ಲೇ ಹಿಂತಿರುಗಿ ಬಂದರು - ಇದು ಇಸ್ರಾಅ್, ಮಿಅ್‌ರಾಜ್ ಘಟನೆಗಳ ಸಂಕ್ಷೇಪ. ಪೈಗಂಬರರ ಈ ನಿಶಾ ಪ್ರಯಾಣ ಮತ್ತು ಗಗನಾರೋಹಣ ಘಟನೆ ನಡೆದದ್ದು ಭೌತಿಕ ಶರೀರದೊಂದಿಗೆ ಆಗಿತ್ತೋ? ಅಥವಾ ಅದು ಆ ಮಹಾಪುರುಷರಿಗೆ ಉಂಟಾದ ಒಂದು ಆಧ್ಯಾತ್ಮಿಕ ದರ್ಶನವಾಗಿತ್ತೋ? ಎಂಬುದು ಇಲ್ಲೊಂದು ದೊಡ್ಡ ಪ್ರಶ್ನೆ. ಈ ವಿಷಯದಲ್ಲಿ ಮುಂಚೆ ಸಹ ಭಿನ್ನಾಭಿಪ್ರಾಯವಿತ್ತು. ಆದರೆ, ಪರಸ್ಪರ ಭಿನ್ನವಾಗಿರುವ ಎರಡು ಅಭಿಪ್ರಾಯಗಳಲ್ಲಿ ಎರಡು ಸಹ ಒಂದೇ ಸಂದರ್ಭದಲ್ಲಿ ಸರಿಯಾಗುವುದು ಅಸಾಧ್ಯವಷ್ಟೆ. ಖಂಡಿತವಾಗಿಯೂ ಒಂದು ಮಾತ್ರವೇ ಸರಿಯಾಗುತ್ತದೆ. ಅದು ಯಾವುದೆಂದು ಪುರಾವೆಗಳ ಆಧಾರದಲ್ಲಿ ಪರಿಶೀಲಿಸೋಣ.

'ಮಿಅ್‌ರಾಜ್'(ಗಗನಾರೋಹಣ) ಮತ್ತು 'ಇಸ್ರಾಅ್'(ನಿಶಾ ಪ್ರಯಾಣ) ಒಂದೇ ಅಥವಾ ಬೇರೆ ಬೇರೆ ಘಟನೆಗಳೇ? ಬೇರೆ ಬೇರೆಯಾದರೆ ಅವು ಎರಡು ಸಹ ಒಟ್ಟಿಗೆ ಘಟಿಸಿದವೇ ಅಥವಾ ವಿವಿಧ ಸಂದರ್ಭಗಳಲ್ಲೇ? ಎರಡು ಸಹ ಒಂದೊಂದು ಸಲ ಮಾತ್ರ ಘಟಿಸಿದವೇ ಅಥವಾ ಹಲವು ಸಲ ? - ಎಂಬ ಪ್ರಶ್ನೆಗಳಲ್ಲಿ ಸಹ ಭಿನ್ನಾಭಿಪ್ರಾಯಗಳಿವೆ. ಅಂತಹ ವಿವಾದ ವಿಷಯಗಳ ಬಗ್ಗೆ ಈಗ ಚರ್ಚಿಸುವುದಿಲ್ಲ. 'ಮಿಅ್‌ರಾಜ್' ಮತ್ತು 'ಇಸ್ರಾಅ್ 'ಒಂದಾಗಲಿ ಅಥವಾ ಎರಡು ಬೇರೆ ಬೇರೆ ಘಟನೆಗಳಾಗಲಿ, ಹೇಗಿದ್ದರೂ ಅವು ಭೌತಿಕ ಘಟನೆಗಳಲ್ಲ; ಅವು ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರಿಗೆ ಅಲ್ಲಾಹನು ತೋರಿಸಿಕೊಟ್ಟ ಅರ್ಥಗರ್ಭಿತವಾದ ಆಧ್ಯಾತ್ಮಿಕ ದರ್ಶನಗಳಾಗಿದ್ದವೆಂಬ ನಿಜಸ್ಥಿತಿಯನ್ನು ರುಜುಗೊಳಿಸುವುದು ನನ್ನ ಈ ಲೇಖನದ ಉದ್ದೇಶ. ಅದಕ್ಕೆ ಪುರಾವೆಗಳನ್ನು ನೀಡಬಹುದಾಗಿದೆ:

1. ಪವಿತ್ರ ಖುರ್‌ಆನ್‌ನಿನಲ್ಲಿ ಮೇಲೆ ಹೇಳಿದ ನಿಶಾ ಪ್ರಯಾಣದ ಬಗ್ಗೆ ಪ್ರಸ್ತಾಪಿಸಲಾದ 'ಸೂರತುಲ್ ಬನೀ ಇಸ್ರಾಈಲ್' ನಲ್ಲೇ ಅದರ ಕುರಿತು ಅಲ್ಲಾಹನು ಹೇಳುತ್ತಾನೆ :

وَمَا جَعَلْنَا الرُّؤْيَا الَّتِي أَرَيْنَاكَ إِلَّا فِتْنَةً لِلنَّاسِ

**"ನಾವು ನಿನಗೆ ತೋರಿಸಿಕೊಟ್ಟ ಆ ದರ್ಶನವನ್ನು ಜನರಿಗೊಂದು ಪರೀಕ್ಷೆಯಾಗಿ ಹೊರತು ನಾವು ಮಾಡಿಲ್ಲ" (17 : 61).**

ಅಂದರೆ, ಹಝ್ರತ್ ಪೈಗಂಬರರಿಗೆ ಉಂಟಾದ 'ಇಸ್ರಾಅ್'(ನಿಶಾ ಪ್ರಯಾಣ) ಒಂದು ಆಧ್ಯಾತ್ಮಿಕ ದರ್ಶನವಾಗಿತ್ತೆಂದೂ ಹಲವು ದೈವಿಕ ದೃಷ್ಟಾಂತಗಳಂತೆ ಆ ದರ್ಶನ ಸಹ ಒಂದು ಕಡೆಯಲ್ಲಿ ಸತ್ಯವಿಶ್ವಾಸಿಗಳಿಗೆ ವಿಶ್ವಾಸ ವರ್ಧಕವಾಗಿದ್ದರೆ ಮತ್ತೊಂದು ಕಡೆಯಲ್ಲಿ ಅವಿಶ್ವಾಸಿಗಳಿಗೆ ಮತ್ತು ಬಲಹೀನ ವಿಶ್ವಾಸಿಗಳಿಗೆ ಒಂದು ಪರೀಕ್ಷೆ ಸಹ ಆಗಿತ್ತೆಂದೂ ತಾತ್ಪರ್ಯ. ಈ ಖುರ್‌ಆನ್ ವಚನದ 'ರುಅ್‌ಯಾ' (ಸ್ವಪ್ನ ಅಥವಾ ಆಧ್ಯಾತ್ಮಿಕ ದರ್ಶನ) ಎಂಬ ಪದ ಗಮನಾರ್ಹವಾಗಿದೆ. ಕಣ್ಣಿನಿಂದ ಕಾಣುವುದನ್ನು 'ರುಅ್‌ಯಾ' ಎಂದಲ್ಲ 'ರುಅ್‌ಯತ್' ಎಂದು ಹೇಳುತ್ತಾರೆ.

2. ಖುರ್‌ಆನಿನಲ್ಲಿ ಮಿಅ್‌ರಾಜ್ ಕುರಿತು ಪ್ರಸ್ತಾವನೆಗಳಿರುವ 'ಸೂರತುನ್ನಜ್ಮ್'ನಲ್ಲಿ ಅಲ್ಲಾಹನು ಹೇಳುತ್ತಾನೆ:

مَا كَذَبَ الْفُؤَادُ مَا رَأَى

**"ಹೃದಯ ತಾನು ಕಂಡದ್ದನ್ನು ಸುಳ್ಳಾಗಿಸಲಿಲ್ಲ." (53:12)**

ಅಂದರೆ, ದೃಶ್ಯಗಳನ್ನು ಪೈಗಂಬರರ ಭೌತಿಕ ಕಣ್ಣುಗಳು ಕಾಣುವುದಲ್ಲ. ಬದಲು, ಪೈಗಂಬರರ ಹೃದಯ ಅಥವಾ ಅಂತರ್ದೃಷ್ಟಿ

ಮೂಲಕ ಆ ಅದ್ಭುತ ದೃಶ್ಯಗಳು ಗೋಚರಿಸುತ್ತವೆ. ಮಾತ್ರವಲ್ಲ, ಆ ದರ್ಶನಗಳು ನಿರರ್ಥಕಗಳಲ್ಲ. ಅವೆಲ್ಲ ಅರ್ಥಗರ್ಭಿತವಾಗಿರುತ್ತವೆ.

ಮುಂದುವರಿದು ಅಲ್ಲಾಹನು ಹೇಳುತ್ತಾನೆ:

وَلَقَدْ رَآهُ نَزْلَةً أُخْرَىٰ

**"ಖಂಡಿತವಾಗಿಯೂ ಅವರು (ಮುಹಮ್ಮದ್ ಪೈಗಂಬರರು) ಅವನನ್ನು (ಅಲ್ಲಾಹನನ್ನು) ಬೇರೊಂದು ಘಟ್ಟದಲ್ಲಿ ಸಹ ದರ್ಶಿಸಿದ್ದಾರೆ.** (53 : 14)

ಈ ವಚನಕ್ಕೆ ಹಝ್ರತ್ ಇಬ್ನು ಅಬ್ಬಾಸ್ (ರ) ನೀಡಿದ ವ್ಯಾಖ್ಯಾನವನ್ನು 'ಸಹೀಹ್ ಮುಸ್ಲಿಂ' ನಲ್ಲಿ ಹೀಗೆ ಉದ್ಧರಿಸಲಾಗಿದೆ:

رآه بفؤاده مرتين

**"ಮುಹಮ್ಮದ್ ಪೈಗಂಬರರು ಎರಡು ಸಲ ತನ್ನ ಹೃದಯದಿಂದ ಅಲ್ಲಾಹನನ್ನು ದರ್ಶಿಸಿದರು. "**

ಈ ಪ್ರಸ್ತಾಪನೆ ಮುಹಮ್ಮದ್ ಪೈಗಂಬರ್ (ಸ) ರವರ ಮಿಅ್‌ರಾಜ್‌ನಲ್ಲಿ 'ಸಿದ್‌ರತುಲ್ ಮುನ್‌ತಹಾ'ದ ಸಮೀಪದಲ್ಲುಂಟಾದ ಆ ದರ್ಶನದ ಕುರಿತಾಗಿದೆ. ಆ ದರ್ಶನಗಳು ಶಾರೀರಿಕವಲ್ಲವೆಂದೂ ಆಧ್ಯಾತ್ಮಿಕವಾಗಿದ್ದವೆಂದೂ ಇದರಿಂದ ಸ್ಪಷ್ಟವಾಗುತ್ತದೆ.

3. ಮುಹಮ್ಮದ್ ಪೈಗಂಬರ್ (ಸ) ರನ್ನು ನಂಬಲಿಕ್ಕೋಸ್ಕರ ವಿರೋಧಿಗಳು ಮುಂದಿಟ್ಟ ಒಂದು ಶರ್ತ ಪೈಗಂಬರರು ಆಕಾಶಕ್ಕೇರಿ ತೋರಿಸಬೇಕೆಂದಾಗಿತ್ತು. ವಿರೋಧಿಗಳು ಪೈಗಂಬರರೊಡನೆ ಹೀಗೆ ಹೇಳಿದರೆಂದು ಖುರ್‌ಆನ್‌ಹೇಳುತ್ತದೆ:

أَوْ تَرْقَىٰ فِي السَّمَاءِ وَلَن نُّؤْمِنَ لِرُقِيِّكَ حَتَّىٰ تُنَزِّلَ عَلَيْنَا كِتَابًا نَّقْرَؤُهُ

**"ಅಥವಾ ನೀನು ಆಕಾಶಕ್ಕೇರಿ ಹೋಗಬೇಕು; ನಾವು ಓದುವ ಒಂದು ಗ್ರಂಥವನ್ನು ನೀನು ನಮಗೋಸ್ಕರ ಇಳಿಸಿ ತರದಿದ್ದರೆ ನಿನ್ನ ಆರೋಹಣವನ್ನು ನಾವು ನಂಬಲಾರೆವು."** ( 17 : 94)

ಎದುರಾಳಿಗಳ ಈ ಬೇಡಿಕೆಗೆ ಉತ್ತರವಾಗಿ ಅಲ್ಲಾಹನು ಹೇಳಿದ್ದು ಹೀಗೆ :

قُلْ سُبْحَانَ رَبِّي هَلْ كُنتُ إِلَّا بَشَرًا رَّسُولًا

**"ಹೇಳು: ನನ್ನ ಪ್ರಭು ಪರಿಶುದ್ಧನು. ನಾನು ಕೇವಲ ಒಬ್ಬ ಮನುಷ್ಯನಾದ ಪ್ರವಾದಿ ಮಾತ್ರ ಆಗಿದ್ದೇನೆ".** ( 17 :94 )

ಆಗ, ಆಕಾಶಾರೋಹಣ ಮನುಷ್ಯನ ಶಕ್ತಿಗೆ ಅತೀತವಾದುದೆಂದೂ ಅದು ಅಲ್ಲಾಹನ ಪರಿಶುದ್ಧತೆಗೆ ವಿರುದ್ಧವಾದುದೆಂದೂ ಸ್ಪಷ್ಟವಾಗುತ್ತದೆ. 'ಮಿಅ್‌ರಾಜ್' ಶಾರೀರಿಕವಾಗಿ ನಡೆದ ಒಂದು ಯಾತ್ರೆಯಾಗಿದ್ದರೆ ಶತ್ರುಗಳೊಡನೆ ಆ ಸಂಗತಿಯನ್ನು ಎತ್ತಿ ಹೇಳಬಹುದಿತ್ತಲ್ಲವೇ. ಅವರಿಗೆ ಹಾಗೆ ಒಂದು ಬೇಡಿಕೆಯನ್ನು ಮುಂದಿಡಲು ಅವಕಾಶ ಕೂಡ ಸಿಗುತ್ತಿರಲಿಲ್ಲ.

4. 'ಇಸ್ರಾಅ್' ಮತ್ತು 'ಮಿಅ್‌ರಾಜ್' ಆಧ್ಯಾತ್ಮಿಕ ದರ್ಶನಗಳಾಗಿದ್ದವೆಂಬ ವಸ್ತುಸ್ಥಿತಿ ಅವೆರಡನ್ನೂ ವಿವರಿಸುವ ಹದೀಸುಗಳಿಂದಲೇ ರುಜುವಾಗುತ್ತದೆ. ಹಝ್ರತ್ ಪೈಗಂಬರರನ್ನು ಆಮಂತ್ರಿಸುವುದಕ್ಕಾಗಿ ಮಲಕುಗಳು ಬಂದರು ಎಂದು ಹೇಳಿದ ಕಡೆಯಲ್ಲಿ 'ಬುಖಾರಿ'ಯ ಒಂದು ಹದೀಸ್ ಹೀಗಿದೆ:

وَهُوَ نَائِمٌ فِي الْمَسْجِدِ الْحَرَامِ

**"ಆ ಸಂದರ್ಭದಲ್ಲಿ ಪೈಗಂಬರರು ಮಸ್‌ಜಿದುಲ್ ಹರಾಮ್ ಎಂಬ ಮಸೀದಿಯಲ್ಲಿ ನಿದ್ರಿಸುತ್ತಿದ್ದರು."**

'ಬುಖಾರಿ'ಯಲ್ಲೇ ಇರುವ ಬೇರೊಂದು ಹದೀಸಿನಲ್ಲಿ ಹಝ್ರತ್ ಪೈಗಂಬರರು ಆ ಘಟನೆಯ ವಿವರಣೆಯನ್ನು ಮುಂದುವರಿಸುವುದು ಹೀಗೆ:

بينا انا عند البيت بين النائم واليقظان

**"ನಾನು ಕಅ್‌ಬಕ್ಕೆ ಸಮೀಪವಿರುವ ಒಂದು ಸ್ಥಳದಲ್ಲಿ (ಮಸ್ಜಿದುಲ್ ಹರಾಮ್‌ನಲ್ಲಿ) ನಿದ್ರೆಗೂ ಜಾಗ್ರಾವಸ್ಥೆಗೂ ಮಧ್ಯದಲ್ಲಿರುವ ಸ್ಥಿತಿಯಲ್ಲಿದ್ದಾಗ".** (ಬುಖಾರಿ)

ಹಝ್ರತ್ ಪೈಗಂಬರರು ನಿದ್ರೆಯಲ್ಲಿದ್ದರೂ ಮಲಕುಗಳು ಬಂದದ್ದು ತಿಳಿದಿದ್ದರೆಂದೂ ಹೃದಯದಿಂದ ಅವರನ್ನು ಕಂಡಿದ್ದರೆಂದೂ ಹೇಳುತ್ತಾ ಹದೀಸ್ ಹೀಗೆ ಮುಂದುವರಿಯುತ್ತದೆ:

تَنَامُ عَيْنُهُ وَلَا يَنَامُ قَلْبُهُ وَكَذَٰلِكَ الْأَنْبِيَاءُ تَنَامُ أَعْيُنُهُمْ وَلَا تَنَامُ قُلُوبُهُمْ

**"ಆ ಸಂದರ್ಭದಲ್ಲಿ ಪೈಗಂಬರರ ಕಣ್ಣು ನಿದ್ರಿಸುತ್ತಿದ್ದರೂ ಹೃದಯ ನಿದ್ರಿಸುತ್ತಿರಲಿಲ್ಲ. ಪ್ರವಾದಿಗಳು ಹಾಗೆ - ಅವರ ಕಣ್ಣುಗಳು ನಿದ್ರಿಸುತ್ತಿರಬಹುದು; ಹೃದಯಗಳು ನಿದ್ರಿಸುವುದಿಲ್ಲ."** (ಬುಖಾರಿ)

ಸುದೀರ್ಘವಾದ ಈ ಹದೀಸಿನಲ್ಲೇ 'ಮಿಅ್‌ರಾಜ್' ಘಟನೆಗಳನ್ನೆಲ್ಲಾ ವಿವರಿಸಿದ ನಂತರ ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ಆಕಾಶದಲ್ಲಿ ಮೂಸಾ ಪ್ರವಾದಿಯವರಿಂದ ಬೀಳ್ಕೊಂಡದ್ದನ್ನು ಹೇಳುತ್ತಾ ವರದಿಗಾರ ಈ ರೀತಿ ಕೊನೆಗೊಳಿಸಿದ್ದಾರೆ:

وَاسْتَيْقَظَ وَهُوَ فِي الْمَسْجِدِ الْحَرَامِ

**"ನಂತರ ಪೈಗಂಬರ್ (ಸ) ಎಚ್ಚರಗೊಂಡರು. ಆಗ ಪೈಗಂಬರರು ಮಸ್ಜಿದುಲ್ ಹರಾಮ್‌ನಲ್ಲಿದ್ದರು."** (ಬುಖಾರಿ)

ಬೈತುಲ್‌ಮುಖದ್ದಸ್‌ಗೆ ಹೋದದ್ದು, 'ಸಿದ್‌ರತುಲ್ ಮುನ್‌ತಹಾ' ತನಕ ಆರೋಹಣ ಮಾಡಿದ್ದು, ಅಲ್ಲಾಹನೊಂದಿಗೆ ಸಂಭಾಷಣೆ ನಡೆಸಿದ್ದು, ಇತ್ಯಾದಿ ಎಲ್ಲ ಘಟನೆಗಳು ನಡೆದದ್ದು ನಿದ್ರಾವಸ್ಥೆಯಲ್ಲಾಗಿತ್ತೆಂದು ಮೇಲೆ ಕಾಣಿಸಿದ ಹದೀಸುಗಳಿಂದ ಸ್ಪಷ್ಟವಾಗುತ್ತದೆ. ಅಥವಾ ನಿದ್ರೆಗೂ ಎಚ್ಚರಕ್ಕೂ ಮಧ್ಯದಲ್ಲಿರುವ ಒಂದು ಅವಸ್ಥೆಯಲ್ಲಿ ಅದು ಘಟಿಸಿತು. ಆದ್ದರಿಂದ ಅದು ಒಂದು ಆಧ್ಯಾತ್ಮಿಕ ದರ್ಶನವೆಂದೇ ಭಾವಿಸಲು ನಿರ್ವಾಹವಿದೆ.

5. ಆ ಸಂಗತಿಯನ್ನು ಹಝ್ರತ್ ಆಯಿಶ(ರ) ನಮಗೆ ಸ್ಪಷ್ಟಪಡಿಸಿದ್ದಾರೆ. ಅವರು ಹೇಳುತ್ತಾರೆ:

وَاللهِ مَا فَقَدْنَا جَسَدَ رَسُولِ اللهِ صَلَّى اللهُ عَلَيْهِ وَسَلَّمَ
وَلَٰكِنْ عُرِجَ بِرُوحِهِ

"ಅಲ್ಲಾಹನಾಣೆ, ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಶರೀರ ಸ್ಥಳದಲ್ಲಿ ಇಲ್ಲದಿರಲಿಲ್ಲ. ಆದರೆ ಅವರ ಆತ್ಮವು ಮೇಲಕ್ಕೇರಿಸಲ್ಪಟ್ಟಿತ್ತು." (ತಫ್‌ಸೀರ್ ಕಶ್ಶಾಫ್)

ಇದನ್ನು ಕೆಲವರು ಖಂಡಿಸುತ್ತಾರೆ. ಅಂದು ಹಝ್ರತ್ ಆಯಿಶ(ರ)ರನ್ನು ಪೈಗಂಬರ್(ಸ) ವಿವಾಹವಾಗಿರಲಿಲ್ಲ ಎಂದು ಅವರು ಹೇಳುತ್ತಾರೆ. ಈ ವಾದದ ಔಚಿತ್ಯವೇನೆಂದು ತಿಳಿಯುವುದಿಲ್ಲ. ವಿವಾಹಕ್ಕೆ ಮುಂಚೆ ಘಟಿಸಿದ ವಿಚಾರಗಳ ಬಗ್ಗೆ ಅಭಿಪ್ರಾಯ ಹೇಳಲು ಹಝ್ರತ್ ಆಯಿಶರವರಿಗೆ ಅವಕಾಶವಿರಲಿಲ್ಲವೇ? ಮೇಲೆ ಉದ್ಧರಿಸಿದ ವಚನದಲ್ಲಿ ಹಝ್ರತ್ ಪೈಗಂಬರರು ತನ್ನ ಸಮೀಪದಲ್ಲಿದ್ದರೆಂದು ಹಝ್ರತ್ ಆಯಿಶ ಹೇಳುವುದಿಲ್ಲವಷ್ಟೆ. ಧರ್ಮದ ಬಗ್ಗೆ ಹಲವು ವಿಚಾರಗಳನ್ನು ಆ ಮಹಿಳಾ ಮಣಿ ನಮಗೆ ವಿವರಿಸಿ ಕೊಟ್ಟಿದ್ದಾರೆ. ಆ ವಿಚಾರಗಳ ಪೈಕಿಯಲ್ಲಿ ಇದು ಸಹ ಸೇರುತ್ತದೆ ಎಂದು ಭಾವಿಸಿದರೆ ಸಾಕು.

6. ಹಝ್ರತ್ ಮುಆವಿಯಾ (ರ) 'ಇಸ್ರಾಅ್-ಮಿಅ್‌ರಾಜ್' ಬಗ್ಗೆ ಹೀಗೆ ಮನವರಿಕೆಮಾಡಿಕೊಟ್ಟಿದ್ದಾರೆ:

كَانَتْ رُؤْيَا صَادِقَةً

"ಅದು ಅಲ್ಲಾಹನಿಂದ ಉಂಟಾದ ಸತ್ಯವಾದೊಂದು ಸ್ವಪ್ನವಾಗಿತ್ತು." (ಅದ್ದುರ್ರುಲ್ ಮನ್‌ಸೂರ್)

7. 'ಮಿಅ್‌ರಾಜ್' ಬಗ್ಗೆ ಹಸನುಲ್ ಬಸರೀ(ರ) ಹೇಳಿದ್ದು ನೋಡಿರಿ:

كَانَ فِي الْمَنَامِ رُؤْيَا رَاهُ رَسُوْلُ اللّٰهِ صَلَّى اللّٰهُ عَلَيْهِ وَسَلَّمَ

"ಅದು ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಸ್ವಪ್ನದಲ್ಲಿ ಕಂಡ ಒಂದು ದರ್ಶನವಾಗಿತ್ತು." (ಕಶ್ಶಾಫ್)

8. ಅಲ್ಲಾಮಾ ಇಬ್ನುಲ್‌ಖಯ್ಯಿಂ (ರ), ಹಝ್ರತ್ ಶಾಹ್ ವಲಿಯುಲ್ಲಾಹಿ ದಹಲವಿ(ರ) ಮೊದಲಾದ ಹಲವು ಮಹಾತ್ಮರುಗಳು ಇಸ್ರಾಅ್, ಮಿಅ್‌ರಾಜ್ ಘಟನೆಗಳ ಕುರಿತು ಇದೇ ಪ್ರಕಾರ ಪ್ರಸ್ತಾಪಿಸಿದ್ದಾರೆ. ಅಂದರೆ, ಅದು ಶಾರೀರಿಕವಲ್ಲ, ಆಧ್ಯಾತ್ಮಿಕವೆಂದು. ವಿಸ್ತಾರಭಯದಿಂದ ಆ ಉದ್ಧರಣೆಗಳನ್ನು ಇಲ್ಲಿ ಸೇರಿಸಿಲ್ಲ.

9. 'ಇಸ್ರಾಅ್' ಮತ್ತು 'ಮಿಅ್‌ರಾಜ್'ನಲ್ಲಿ ನಡೆದ ಘಟನೆಗಳಲ್ಲಿ ಒಂದೊಂದನ್ನೂ ನಾವು ಪರಿಶೀಲಿಸಿದರೆ ಅವು ದರ್ಶನಗಳೆಂದೇ ರುಜುವಾಗುತ್ತದೆ. ಉದಾಹರಣೆಗೆ, ಒಂದು ಹದೀಸಿನಲ್ಲಿ ಹಝ್ರತ್ ಪೈಗಂಬರ್ (ಸ) ಈ ಘಟನೆಯನ್ನು ವಿವರಿಸಲು ತೊಡಗುವುದು ಈ ರೀತಿಯಾಗಿದೆ:

فُرِجَ عَنْ سَقْفِ بَيْتِي وَأَنَا بِمَكَّةَ فَنَزَلَ جِبْرِيْلُ

"ನನ್ನ ಮನೆಯ ಮೇಲ್ಛಾವಣಿಯನ್ನು ಸೀಳಿ ಅದರ ಮೂಲಕ ಜಿಬ್ರೀಲ್ ಇಳಿದು ಬಂದರು." (ಬುಖಾರಿ)

ಇದು ಪ್ರತ್ಯಕ್ಷ ಘಟನೆಯಾಗಿರಲಿಲ್ಲವೆಂದು ಈ ಮಾತುಗಳೇ ರುಜುಪಡಿಸುತ್ತವೆ. ಮಲಕುಗಳಿಗೆ ಮನೆಯೊಳಗೆ ಇಳಿದು ಬರಲಿಕ್ಕೆ ಅದರ ಮೇಲ್ಛಾವಣಿಯನ್ನು ಸೀಳಬೇಕಾದ ಅಗತ್ಯವಿಲ್ಲವೆಂದು ಯಾರಿಗೆ ತಿಳಿಯದು? ಜಿಬ್ರೀಲ್ (ಅ) ವಹ್ಯ್ ಸಹಿತ ಅನೇಕ ಸಲ ಪೈಗಂಬರರ ಸಮೀಪಕ್ಕೆ ಬಂದಿದ್ದರಷ್ಟೆ. ಆಗೆಲ್ಲ ಮನೆಯ ಮೇಲ್ಛಾವಣಿಯನ್ನು ಸೀಳಿ ಬಂದಿದ್ದರೇ? ಆದರೆ, ಒಂದು ದರ್ಶನದಲ್ಲಿ ಹಾಗೆಲ್ಲ ಕಾಣಲು ಸಾಧ್ಯವಿದೆ.

10. "ಮಲಕುಗಳು ಪೈಗಂಬರರ ಎದೆಯಿಂದ ಹೊಕ್ಕುಳು ವರೆಗೆ ಸೀಳಿ ತೆರೆದು ಕಲ್ಮಷಗಳನ್ನೆಲ್ಲ ನೀಗಿಸಿ ಝಂಝಂ ನೀರಿನಿಂದ ತೊಳೆದು ಶುಚಿ ಮಾಡಿ ಒಂದು ಬಂಗಾರದ ಪಾತ್ರೆಯಲ್ಲಿ 'ಈಮಾನ್' ಮತ್ತು 'ಹಿಕ್‌ಮತ್' ತಂದರು. ಅವುಗಳನ್ನು ಎದೆಯೊಳಗೆ ತುಂಬಿಸಿ ಮುಚ್ಚಿ ಪೂರ್ವಸ್ಥಿತಿಯಂತೆ ಮಾಡಿದರು." (ಬುಖಾರಿ)

ಒಮ್ಮೆ ಯೋಚಿಸಿರಿ. ಇದು ಶಾರೀರಿಕವಾಗಿರಬಹುದೇ ? ಒಂದು ಮೇಜರ್ ಶಸ್ತ್ರಕ್ರಿಯೆ ಇಲ್ಲಿ ನಡೆದಿದೆ! ಪೈಗಂಬರರ ಎದೆಯೊಳಗಿಂದ ಹೊರಗೆ ತೆಗೆದ ಆ ಕಲ್ಮಷಗಳು ಏನಾಗಿದ್ದವು? ಈಮಾನ್ ಮತ್ತು ಹಿಕ್‌ಮತ್ (ವಿಶ್ವಾಸ ಮತ್ತು ವಿವೇಕ) ಪಾತ್ರೆಯಲ್ಲಿ ತರಬಲ್ಲ ವಸ್ತುಗಳೇ? ಬಂಗಾರದ ಪಾತ್ರೆಯನ್ನು ಉಪಯೋಗಿಸುವುದು ಶರೀಅತಿನಲ್ಲಿ ವಿರೋಧಿಸಲ್ಪಟ್ಟಿದ್ದಲ್ಲವೇ? ಪೈಗಂಬರರ ಹೃದಯದಲ್ಲಿ ಅದಕ್ಕೆ ಮುಂಚೆ ಈಮಾನ್ ಇರಲಿಲ್ಲವೇ ? ಆದರೆ ಆಧ್ಯಾತ್ಮಿಕ ದರ್ಶನದಲ್ಲಿ ಇವೆಲ್ಲ ಗೋಚರಿಸಲು ಸಾಧ್ಯವಿದೆ.

11. ಗಗನ ಯಾತ್ರೆಯಲ್ಲಿ ಪೈಗಂಬರರಿಗೆ ವಾಹನವಾಗಿ ಉಪಯೋಗಿಸಲು ಹೇಸರಗತ್ತೆಯ ಹೋಲಿಕೆಯುಳ್ಳ 'ಬುರಾಖ್' ಎಂಬ ಹೆಸರಿನ ಬಿಳಿ ಬಣ್ಣದ ಒಂದು ಅದ್ಭುತ ಮೃಗವನ್ನು 'ಜಿಬ್ರೀಲ್' ತಂದರು. ಬೈತುಲ್ ಮುಖದ್ದಸ್ ತನಕ ಪೈಗಂಬರರು ಅದರ ಮೇಲೆ ಸವಾರಿ ಮಾಡಿದರು. ಪ್ರವಾದಿಗಳು ತಮ್ಮ ಸವಾರಿ ಮೃಗಗಳನ್ನು ಕಟ್ಟುವಂತಹ ಕೊಂಡಿಯಿಂದ ಅದನ್ನು ಕಟ್ಟಿಹಾಕಿದರು. ಆ ಮೃಗ ಪ್ರತಿಯೊಂದು ನೆಗೆತದಲ್ಲಿ, ಅದರ ಪಾದಗಳು ಅದರ ದೃಷ್ಟಿ ತಲಪುವ ಸ್ಥಳದಲ್ಲಿ ಬೀಳುವ ವೇಗದಲ್ಲಿ ಅದು ಸಂಚರಿಸುತ್ತಿತ್ತು (ಮುಸ್ಲಿಂ). ಬುರಾಖಿನ ತಲೆ ಮತ್ತು ಮುಖ ಸ್ತ್ರೀಯ ರೂಪದಲ್ಲಿತ್ತೆಂದೂ ಶರೀರ ಕುದುರೆಯಂತೆ ಇತ್ತೆಂದೂ ಹೇಳಲ್ಪಟ್ಟಿದೆ.

ಇಲ್ಲಿ ಹಲವು ವಿಚಾರಗಳ ಬಗ್ಗೆ ಯೋಚಿಸಬೇಕಾಗಿದೆ. ಬುರಾಖಿನ ನೆಗೆತದಲ್ಲಿ ಅದರ ದೃಷ್ಟಿ ಮುಟ್ಟುವ ಸ್ಥಳದಲ್ಲಿ ಪಾದಗಳು ಬೀಳುವುವು. ಆದರೆ, ದೃಷ್ಟಿ ಎಷ್ಟು ದೂರ ತಲಪುವುದು? ಈ ಮೃಗವನ್ನು ಜಿಬ್ರೀಲ್ ಎಲ್ಲಿಂದ ತಂದರು ? ಆ ಬಳಿಕ ಅದು ಎಲ್ಲಿಗೆ ಹೋಯಿತು? ಇಂತಹ ಅನೇಕ ಪ್ರಶ್ನೆಗಳು ಬಾಕಿಯಾಗುತ್ತವೆ. ಆದರೆ ಭೌತಿಕ ಶರೀರವಿಲ್ಲದ ಜಿಬ್ರೀಲ್ ತಂದ ಆ ಅದ್ಭುತ ಮೃಗ ಅಶರೀರಿಯಾಗಿತ್ತೆಂದು ನಾವು ಮನವರಿಕೆ ಮಾಡಿದರೆ ಪ್ರಶ್ನೆಗಳೆಲ್ಲ ನಿವಾರಿಸಲ್ಪಡುತ್ತವೆ; ಆ ಮೃಗವನ್ನೇರಿದ್ದು ಪೈಗಂಬರರ ಭೌತಿಕ ಶರೀರವಾಗಿರಲಿಲ್ಲವೆಂದೂ ಸ್ಪಷ್ಟವಾಗುತ್ತದೆ. ಜಿಬ್ರೀಲ್ ಸಹ ಅದರ ಮೇಲೆಯೇ ಸವಾರಿಮಾಡಿದ್ದರಷ್ಟೆ.

12. ಹಝ್ರತ್ ಪೈಗಂಬರ್ (ಸ) ಬೈತುಲ್ ಮುಖದ್ದಸಿನ ಮಸೀದಿಯಲ್ಲಿ ಪ್ರವೇಶಿಸಿ ಎರಡು ರಕ್‌ಅತ್ ನಮಾಝ್ ಮಾಡಿದರು. ಆ ನಮಾಝ್‌ನಲ್ಲಿ ಅನೇಕ ಪ್ರವಾದಿಗಳು ಪೈಗಂಬರರ ಹಿಂದೆ ನಿಂತು ನಮಾಝ್ ಮಾಡಿದ್ದರು. ಅವರ ಪೈಕಿ ಹಝ್ರತ್ ಇಬ್ರಾಹೀಂ (ಅ), ಮೂಸಾ (ಅ), ಈಸಾ (ಅ) ಎಂಬೀ ಪ್ರವಾದಿಗಳ ಹೆಸರುಗಳನ್ನು

ಪ್ರತ್ಯೇಕವಾಗಿ ಹೇಳಲಾಗಿದೆ (ಮಿಶ್ಕಾತ್). ಯೋಚಿಸಿರಿ, ಮೃತರಾದ ಪ್ರವಾದಿಗಳು ಪುನಃ ಈ ಲೋಕಕ್ಕೆ ಶರೀರ ಸಹಿತ ಬರುವುದು ಖುರ್ಆನ್ ಮತ್ತು ಹದೀಸಿಗೆ ವಿರುದ್ಧವಲ್ಲವೇ? ಮರಣದ ನಂತರ ಸಹ ನಮಾಝ್ ಇದೆಯೇ? ಆದರೆ ಅವೆಲ್ಲ ಆಧ್ಯಾತ್ಮಿಕ ದರ್ಶನವೆಂದು ಮನವರಿಕೆ ಮಾಡಿದರೆ ಸಂಶಯಗಳಿಗೆಡೆಯಿಲ್ಲ.

13. ಇಲ್ಲಿ ಗಮನಾರ್ಹವಾದ ಇನ್ನೊಂದು ವಿಚಾರ ಸಹ ಇದೆ. ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರವರ ಕಾಲದಲ್ಲಿ ಜೆರೂಸಲೇಮಿನಲ್ಲಿ ಯಾವುದೇ ಮಸೀದಿ ಇರಲಿಲ್ಲ. ಬೈತುಲ್ ಮುಖದ್ದಸ್ (ಜೆರೂಸಲೇಮ್) ದಾವೂದ್ (ಅ), ಸುಲೈಮಾನ್ (ಅ) ಮೊದಲಾದ ಇಸ್ರಾಈಲೀ ಪ್ರವಾದಿಗಳ ಅನುಗ್ರಹೀತ ಕೇಂದ್ರವಾಗಿತ್ತು. ಅಂದು ಅಲ್ಲಿ ಅವರ ಪ್ರಾರ್ಥನಾಲಯ ಸಹ ಇತ್ತು. ಆದರೆ ಎರಡು ಸಲ ಶತ್ರುಗಳು ಆಕ್ರಮಿಸಿ ಅದನ್ನು ನಾಶಪಡಿಸಿದರೆಂಬುದು ಚರಿತ್ರೆಯಿಂದ ತಿಳಿದು ಬರುತ್ತದೆ. ಪವಿತ್ರ ಖುರ್ಆನಿನಲ್ಲಿ (17 : 5 - 8) ಈ ಆಕ್ರಮಣಗಳ ಕುರಿತು ಸಂಕ್ಷಿಪ್ತವಾಗಿ ಪ್ರಸ್ತಾಪಿಸಲಾಗಿದೆ. ಎರಡನೆಯ ಆಕ್ರಮಣವಾದುದು ಕ್ರಿ . ಶ 71ರಲ್ಲಾಗಿತ್ತು. ಎಂದರೆ, ಮುಹಮ್ಮದ್ ಪೈಗಂಬರ್ (ಸ)ರವರ ಜನನಕ್ಕೆ 500ವರ್ಷಗಳಿಗೆ ಮುಂಚೆ. ಅಂದು ರೋಮನರು ನಡೆಸಿದ ಆ ಆಕ್ರಮಣದಲ್ಲಿ Wailing Wall (ಪ್ರಲಾಪ ಗೋಡೆ) ಎಂದು ಆ ಬಳಿಕ ಹೆಸರಿಸಲ್ಪಟ್ಟ ಒಂದು ಗೋಡೆ ಹೊರತು ಯಹೂದರ ಎಲ್ಲ ಪ್ರಾರ್ಥನಾಲಯಗಳೂ ಪುಣ್ಯಕ್ಷೇತ್ರಗಳೂ ನಿರ್ಮೂಲನಗೊಂಡಿದ್ದವು. ಆದ್ದರಿಂದ ಖುರ್ಆನಿನಲ್ಲಿ "ಅಲ್ ಮಸ್‌ಜಿದುಲ್ ಅಖ್ಸಾ" (17 : 2)ಎಂದು ಹೇಳಿದುದರ ತಾತ್ಪರ್ಯ, ಮುಹಮ್ಮದ್ ಪೈಂಗಬರ್ (ಸ)ರಿಗೆ ತೋರಿಸಿದ ಒಂದು ಪರಿಶುದ್ಧ ಆಧ್ಯಾತ್ಮಿಕ ಕೇಂದ್ರವೆಂದು ಮನವರಿಕೆ ಮಾಡಬೇಕಾಗಿದೆ. ಹಿಜ್‌ರ 16ನೇ ವರ್ಷದಲ್ಲಿ ಹಝ್ರತ್ ಉಮರ್(ರ)ರವರ ಕಾಲದಲ್ಲಿ ಜೆರೂಸಲೇಮ್ ಮುಸ್ಲಿಮರ ಅಧೀನಕ್ಕೆ ಬಂತು. ಆಗ ಅಲ್ಲಿ ಪ್ರಾರ್ಥನಾಲಯವಿರಲಿಲ್ಲ. ಹಝ್ರತ್ ಉಮರ್‌ರವರ ನಿರ್ದೇಶನ ಪ್ರಕಾರ ಆ ಬಳಿಕ ಮುಸ್ಲಿಮರು ಅಲ್ಲಿ ಮಸೀದಿ ನಿರ್ಮಿಸಿದರು. ಸಂಕ್ಷಿಪ್ತವಾಗಿ, ಇಂದು ಅಲ್ಲಿರುವ "ಮಸ್‌ಜಿದುಲ್ ಅಖ್‌ಸಾ"ಎಂಬ ಮಸೀದಿ ಮುಹಮ್ಮದ್ ಪೈಗಂಬರ್ (ಸ)ರವರ ಕಾಲದಲ್ಲಿ ಇರಲಿಲ್ಲ. ಅಂದು ಪೈಗಂಬರರು ಪ್ರಸ್ತುತ ಆಧ್ಯಾತ್ಮಿಕ ದರ್ಶನದಲ್ಲಿ ಕಂಡ ಮಸೀದಿಯ ಸಾಕ್ಷಾತ್ಕಾರವಾಗಿ ಮುಸ್ಲಿಮರು ಅನಂತರ ಅದನ್ನು ನಿರ್ಮಿಸಿದರು. ಆದುದರಿಂದ ಪೈಗಂಬರರು ತನ್ನ 'ನಿಶಾ ಪ್ರಯಾಣದಲ್ಲಿ' ಜೆರೂಸಲೇಮಿನಲ್ಲಿ ಒಂದು ಮಸೀದಿಯನ್ನು ಕಂಡದ್ದು ಮತ್ತು ಇತರ ಪ್ರವಾದಿಗಳಿಗೆ ಇಮಾಮಾಗಿ ನಮಾಝ್ ಮಾಡಿದ್ದು ಎಲ್ಲವೂ ಆಧ್ಯಾತ್ಮಿಕ ದರ್ಶನದಲ್ಲಾಗಿತ್ತೆಂದು ಸ್ಪಷ್ಟವಾಗುತ್ತದೆ.

14. ಪೈಗಂಬರ್(ಸ) ಜಿಬ್ರೀಲ್ ಜೊತೆಯಲ್ಲಿ ಗಗನಾರೋಹಣಕ್ಕೆ ತೊಡಗಿದರು. ಪ್ರತಿಯೊಂದು ಆಕಾಶವನ್ನು ಸಮೀಪಿಸಿ ಬಾಗಿಲು ತೆರೆಯಲಿಕ್ಕೆ ಕೇಳಿಕೊಂಡಾಗ ಅಲ್ಲಿದ್ದ ಕಾವಲುಗಾರರಾದ ಮಲಕುಗಳು, ಬಂದವರು ಯಾರೆಂದು ಕೇಳಿದರು. ಜಿಬ್ರೀಲ್ ಎಂದು ಉತ್ತರಿಸಲಾಯಿತು. ಜೊತೆಯಲ್ಲಿ ಯಾರು? ಎಂದು ಕೇಳಿದಾಗ ಮುಹಮ್ಮದ್ ಎಂದು ಉತ್ತರಿಸಲಾಯಿತು. ಅವರು ಆಮಂತ್ರಣದ ಮೇರೆಗೆ ಬಂದಿರುವರೇ? ಎಂದು ಪುನಃ ಕೇಳಿದಾಗ ಹೌದೆಂದು ಉತ್ತರಿಸಲಾಯಿತು. ಹೀಗೆ ಕೇಳಿ ತಿಳಿದುಕೊಂಡ ನಂತರವೇ ಬಾಗಿಲನ್ನು ತೆರೆದು ಕೊಡಲಾಯಿತು. (ಬುಖಾರಿ, ಮುಸ್ಲಿಂ)

ಆಲೋಚಿಸಿರಿ, ಪ್ರಾಪಂಚಿಕ ಆಕಾಶಗಳಿಗೆ, ಮೇಲೆ ಹೇಳಿದಂತೆ ಬಾಗಿಲುಗಳಿವೆಯೇ? ಅಲ್ಲಿ ಕಾವಲುಗಾರರೇಕೆ? ಮಲಕುಗಳು ಪ್ರವೇಶಿಸಲಿಕ್ಕೂ ಬಾಗಿಲು ತೆರೆಯಬೇಕೇ? ಬಾಗಿಲಿನ ಆಚೆಯಿರುವವರನ್ನು ಮಲಕುಗಳು ಕಾಣಲಾರರೇ? ಆದರೆ 'ಮಿಅರಾಜ್' ಒಂದು ದಿವ್ಯದರ್ಶನವೆಂದು ಭಾವಿಸುವುದಾದರೆ ಇಂತಹ ಪ್ರಶ್ನೆಗಳಿಗೆ ಎಡೆಯಿಲ್ಲ.

15. ಏಳು ಆಕಾಶಗಳಲ್ಲಿ ಎಂಟು ಮಂದಿ ಪ್ರವಾದಿಗಳನ್ನು ಅಂದರೆ, ಆದಂ, ಇದ್ರೀಸ್, ಇಬ್ರಾಹೀಂ, ಯೂಸುಫ್, ಮೂಸಾ, ಹಾರೂನ್, ಯಹ್ಯಾ, ಈಸಾ (ಅಲೈಹಿಮುಸ್ಸಲಾಂ) ಎಂಬೀ ಪ್ರವಾದಿಗಳನ್ನು ಮುಹಮ್ಮದ್ ಪೈಗಂಬರ್ (ಸ) ಕಂಡರು. ಅವರೆಲ್ಲರೂ ಪೈಗಂಬರರಿಗೆ ಸ್ವಾಗತ ಹೇಳಿದರು. ಯಹ್ಯಾನಬಿ ಮತ್ತು ಈಸಾನಬಿಯನ್ನು ಎರಡನೇ ಆಕಾಶದಲ್ಲಿ ಪೈಗಂಬರರು ಕಂಡರು. (ಬುಖಾರಿ, ಮುಸ್ಲಿಂ)

ಮರಣಹೊಂದಿದ್ದ ಆ ಪ್ರವಾದಿಗಳ ಶರೀರಗಳು ಆಕಾಶದಲ್ಲಿರಲು ಸಾಧ್ಯವಿಲ್ಲವಷ್ಟೆ. ಆದರೆ ಅವರ ಆತ್ಮಗಳನ್ನು ಕಾಣಬಹುದಾಗಿದೆ. ಆ ಆತ್ಮಗಳೊಡನೆ ಮುಹಮ್ಮದ್ ಪೈಗಂಬರ್ (ಸ) ಶಾರೀರಿಕವಾಗಿ ಹೇಗೆ ಭೇಟಿಯಾದರು? ಮಾತ್ರವಲ್ಲ, ಭೂಮಿಯಲ್ಲಿ ಬೈತುಲ್ ಮುಖದ್ದಸ್‌ನಲ್ಲಿ ನಮಾಝ್ ಮಾಡುತ್ತಿದ್ದಾಗ ಅವರೆಲ್ಲರೂ ಅದರಲ್ಲಿ ಭಾಗವಹಿಸಿದ್ದರು. ಅದರ ನಂತರ ಪೈಗಂಬರ್ (ಸ) ಜಿಬ್ರೀಲ್ ಜೊತೆಯಲ್ಲಿ ಒಂದೊಂದಾಗಿ ಆಕಾಶವನ್ನೇರಿ ಬಾಗಿಲು ತಟ್ಟಿ ಅನುಮತಿ ಪಡೆದು ಪ್ರವೇಶಿಸಿದ್ದರು. ಹಾಗೆ ಪ್ರತಿಯೊಂದು ಆಕಾಶವನ್ನು ತಲಪಿದಾಗ ಬೈತುಲ್ ಮುಖದ್ದಸ್‌ನಲ್ಲಿ ತನ್ನ ಹಿಂದೆನಿಂತು ನಮಾಝ್ ಮಾಡಿದ ಪ್ರವಾದಿಗಳನ್ನು ಪೈಗಂಬರ್ (ಸ) ಕಂಡರು. ಪೈಗಂಬರ್ (ಸ) ತಲಪುವುದಕ್ಕೆ ಮುಂಚಿತವಾಗಿ ಅವರು ಅಲ್ಲಿದ್ದರು. ಬೈತುಲ್ ಮುಖದ್ದಸ್‌ನಿಂದ ಅಷ್ಟು ಶೀಘ್ರವಾಗಿ ಅವರು ಹೇಗೆ ಆಕಾಶಗಳನ್ನು ತಲಪಿದರು? ಅವರಿಗೆ ದಾರಿತೋರಿಸುವವನ ಸಹಾಯ ಅಥವಾ ಕಾವಲುಗಾರರ ಅನುಮತಿ ಅಗತ್ಯವಿರಲಿಲ್ಲವೇ? ಆ ಪೈಕಿ ಈಸಾನಬಿ(ಅ) ಸಹ ಎರಡು ಸ್ಥಳಗಳಲ್ಲೂ ಇದ್ದರೆಂಬುದು ವಿಶೇಷವಾಗಿ ಗಮನಾರ್ಹವಾಗಿದೆ. ಇತರ ಏಳು ಮಂದಿ ಪ್ರವಾದಿಗಳನ್ನು ಕಂಡ ಹಾಗೆಯೇ ಅವರನ್ನು ಸಹ ಪೈಗಂಬರರು ಕಂಡಿದ್ದರು. ಇತರ ಪ್ರವಾದಿಗಳ ಆತ್ಮಗಳನ್ನು ಪೈಗಂಬರರು ಕಂಡಿದ್ದರೆ ಈಸಾನಬಿಯನ್ನು ಸಹ ಹಾಗೆಯೇ ಕಂಡಿದ್ದರು. ಈಸಾನಬಿಗೆ ಯಾವುದೇ ವಿಶೇಷತೆ ಇರಲಿಲ್ಲ. ವಿಶೇಷತೆಯೇನಾದರೂ ಇದ್ದಿದ್ದರೆ ಅದು ಮೂಸಾನಬಿಗೆ ಮಾತ್ರವಾಗಿತ್ತು. ಪೈಗಂಬರರ ಹೆಚ್ಚಿನ ಸಂಭಾಷಣೆಗಳೂ ಸಮಾಲೋಚನೆಗಳೂ ನಡೆದದ್ದು ಅವರೊಂದಿಗೆ ಆಗಿತ್ತಷ್ಟೆ. ಈಸಾನಬಿ ಮರಣಹೊಂದಲಿಲ್ಲವೆಂದು ಸಿದ್ಧಾಂತಿಸುವುದಾದರೆ, ಇತರ ಪ್ರವಾದಿಗಳು ಸಹ ಮರಣಹೊಂದಲಿಲ್ಲ ವೆಂದು ಒಪ್ಪಬೇಕಾದೀತು. ಆಲೋಚಿಸಿರಿ.

16. ಒಂದನೇ ಆಕಾಶದಲ್ಲಿ ಕಾಣಲ್ಪಟ್ಟ ಆದಂ ನಬಿಯ ಎಡಕ್ಕೂ ಬಲಕ್ಕೂ ಅನೇಕ ಮನುಷ್ಯಾತ್ಮಗಳಿದ್ದವು. ಆದಂ ನಬಿ ಬಲಗಡೆ ನೋಡುವಾಗ ನಗುತ್ತಲೂ ಎಡಗಡೆ ನೋಡುವಾಗ ಅಳುತ್ತಲೂ ಇದ್ದರು. ಪೈಗಂಬರ್(ಸ) ಜಿಬ್ರೀಲ್‌ರೊಡನೆ ಅದರ ಕಾರಣವೇನೆಂದು ಕೇಳಿದರು.

ಬಲಗಡೆ ಇರುವವರು ಆದಂ ನಬಿಯ ಸ್ವರ್ಗವಾಸಿಗಳಾದ ಸಂತತಿಗಳೆಂದೂ ಎಡಗಡೆ ಇರುವವರು ಅವರ ನರಕವಾಸಿಗಳಾದ ಸಂತತಿಗಳೆಂದೂ ಜಿಬ್ರೀಲ್ ಹೇಳಿದರು. (ಬುಖಾರಿ)

ಮನುಷ್ಯಾತ್ಮಗಳು ಹೇಗೆ ಅಲ್ಲಿಗೆ ತಲಪಿದವು? ಇದು ಒಂದು ಆಧ್ಯಾತ್ಮಿಕ ದರ್ಶನವಾಗಿತ್ತೆಂದು ಇವೆಲ್ಲ ಸ್ಪಷ್ಟಪಡಿಸುತ್ತವೆ.

17. ಆರನೇ ಆಕಾಶದಲ್ಲಿ ಮೂಸಾನಬಿಯನ್ನು ಪೈಗಂಬರರು ಭೇಟಿಯಾದರು. ಅಲ್ಲಿಂದ ಮೇಲಕ್ಕೆ ಯಾತ್ರೆ ಹೋದಾಗ ಮೂಸಾನಬಿ(ಅ) ಜೋರಾಗಿ ಅತ್ತರು. ಕಾರಣವೇನೆಂದು ಕೇಳಿದಾಗ, ಅವರು ಹೇಳಿದ್ದು - ತನ್ನ ಸಮುದಾಯದಿಂದ ಸ್ವರ್ಗದಲ್ಲಿ ಪ್ರವೇಶಿಸುವವರಿಗಿಂತ ಹೆಚ್ಚು ಜನರು ತನ್ನ ನಂತರ ನಿಯೋಜಿಸಲ್ಪಟ್ಟ ಓರ್ವ ಪ್ರವಾದಿಯ ಸಮುದಾಯದಿಂದ ಪ್ರವೇಶಿಸುವರು ಎಂದಾಗಿತ್ತು. (ಬುಖಾರಿ, ಮುಸ್ಲಿಂ)

ಆಲೋಚಿಸಿರಿ. ಇದು ಪ್ರತ್ಯಕ್ಷದಲ್ಲಿ ಘಟಿಸಿದ್ದೆಂದು ಭಾವಿಸುವುದಾದರೆ ಮೂಸನಬಿ(ಅ) ಒಬ್ಬ ಅಸೂಯೆಗಾರನೆಂದಾಗುವುದು. ಆದ್ದರಿಂದ, ಅದೊಂದು ದರ್ಶನವಾಗಿರಲಿಕ್ಕೇ ಸಾಧ್ಯವೆಂದು ರುಜುವಾಗುತ್ತದೆ.

18. ಏಳನೇ ಆಕಾಶದಿಂದ ಪೈಗಂಬರ್(ಸ) 'ಬೈತುಲ್ ಮಅ್‌ಮೂರ್'ಗೆ ಏರಿದರು. ಅಲ್ಲಿ ಒಂದೊಂದು ಪಾತ್ರೆ ಹಾಲು, ಮದ್ಯ ಮತ್ತು ಜೇನನ್ನು ಪೈಗಂಬರರಿಗೆ ನೀಡಲಾಯಿತು. ಪೈಗಂಬರರು ಹಾಲನ್ನು ಮಾತ್ರ ಸ್ವೀಕರಿಸಿದರು. ಬೇರೆ ಎರಡನ್ನೂ ತಿರಸ್ಕರಿಸಿದರು. ಆಗ ಜಿಬ್ರೀಲ್ ಹೀಗೆ ಹೇಳಿದರು:

هي الفطرة انت عليها وامتك

**"ಅದೇ ಸಾಕ್ಷಾತ್ ಪ್ರಕೃತಿ. ತಮ್ಮ ಮತ್ತು ತಮ್ಮ ಸಮುದಾಯದ ಸ್ಥಿತಿ ಇದೇ ಆಗಿದೆ".** (ಬುಖಾರಿ, ಮುಸ್ಲಿಂ)

ಇದೇ ಪಾನೀಯಗಳನ್ನು ಬೈತುಲ್ ಮುಖದ್ದಸ್‌ನಲ್ಲಿ ಜಿಬ್ರೀಲ್ ನೀಡಿದರೆಂದೂ ಪೈಗಂಬರರು ಹಾಲನ್ನು ಮಾತ್ರ ಸ್ವೀಕರಿಸಿದರೆಂದೂ ಇನ್ನೊಂದು ಹದೀಸಿನಲ್ಲಿದೆ (ಮುಸ್ಲಿಂ). ಬೇರೊಂದು ವರದಿಯಲ್ಲಿ, ಪೈಗಂಬರರಿಗೆ ನೀರನ್ನೂ ನೀಡಲಾಗಿತ್ತೆಂದು ಹೇಳಲಾಗಿದೆ. ಪೈಗಂಬರರು ನೀರನ್ನು ಕುಡಿದಿದ್ದರೆ ಪೈಗಂಬರರು ಮತ್ತು ಸಮುದಾಯ ಐಹಿಕೇಚ್ಛೆಗಳಲ್ಲಿ ಮುಳುಗಿಹೋಗುತ್ತಿದ್ದರೆಂದೂ ಮದ್ಯ ಸೇವಿಸಿರುತ್ತಿದ್ದರೆ ಪೈಗಂಬರರ ಸಮುದಾಯ ದಾರಿತಪ್ಪಿ ಹೋಗುತ್ತಿತ್ತೆಂದೂ ಜಿಬ್ರೀಲ್ ಹೇಳಿದರು. (ಇಬ್ನುಜರೀರ್)

ಪೈಗಂಬರ್ (ಸ) ಎಂದೂ ಮದ್ಯ ಸೇವಿಸಿರಲಿಲ್ಲ. ನಂತರ ಮದ್ಯವು ಕಡ್ಡಾಯವಾಗಿ ನಿಷೇಧಿಸಲ್ಪಟ್ಟಿತು. ಹಾಗಿರುವ ಒಂದು ನಿಷಿದ್ಧ ವಸ್ತುವನ್ನು ಆ ಪರಿಶುದ್ಧ ಸ್ಥಳಗಳಲ್ಲಿ ಪೈಗಂಬರರಿಗೆ ಏಕೆ ನೀಡಲಾಯಿತು? ಪೈಗಂಬರರು ಸಾಮಾನ್ಯವಾಗಿ ಇಷ್ಟಪಟ್ಟು ಕುಡಿಯುತ್ತಿದ್ದ ಶುದ್ಧಜಲ ಆ ಸಂದರ್ಭದಲ್ಲಿ ಹೇಗೆ ಅಹಿತವಾಯಿತು? ಜಿಬ್ರೀಲ್ ಅರ್ಥ ಹೇಳಿಕೊಟ್ಟದ್ದನ್ನೂ ಗಮನಿಸಿರಿ. ಸಂಕ್ಷಿಪ್ತವಾಗಿ, ಅದೊಂದು ದರ್ಶನವಾಗಿತ್ತೆಂದು ಈ ಸಂಗತಿಗಳೆಲ್ಲ ರುಜುಪಡಿಸುತ್ತವೆ.

19. ಪೈಗಂಬರ್(ಸ) ಅಲ್ಲಿಂದ ಹೊರಟು "ಸಿದ್‌ರತುಲ್ ಮುನ್‌ತಹಾ" ಎಂಬ ವೃಕ್ಷದೆಡೆಗೆ ಬಂದರು. ಆಗ ಅದರ ಎಲೆಗಳು ಆನೆಯ ಕಿವಿಗಳಂತೆ ಮತ್ತು ಅದರ ಫಲಗಳು ದೊಡ್ಡ ಭರಣಿ ಪಾತ್ರೆಗಳಂತೆ ಕಂಡರು. ಪೈಗಂಬರ್(ಸ) ಅಲ್ಲಿ ನಾಲ್ಕು ನದಿಗಳನ್ನು ಸಹ ಕಂಡರು. ಅವುಗಳಲ್ಲಿ ಎರಡು ನದಿಗಳು ಪ್ರತ್ಯಕ್ಷವಾಗಿದ್ದವು. ಎರಡು ಅಂತರ್ವಾಹಿನಿಗಳಾಗಿದ್ದವು. ಅವು ಏನೆಂದು ಪೈಗಂಬರರು ಜಿಬ್ರೀಲರೊಡನೆ ಕೇಳಿದರು. ಅಂತರ್ವಾಹಿನಿಗಳು ಸ್ವರ್ಗದ ನದಿಗಳೆಂದೂ ಬಾಹ್ಯವಾಹಿನಿಗಳಲ್ಲಿ ಒಂದು ನೈಲ್‌ನದಿ ಮತ್ತೊಂದು ಫುರಾತ್(ಯೂಫ್ರೆಟಿಸ್) ನದಿ ಎಂದು ಜಿಬ್ರೀಲ್ ಉತ್ತರ ನೀಡಿದರು. (ಬುಖಾರಿ, ಮುಸ್ಲಿಂ)

ಏಳನೆಯ ಆಕಾಶದ ಆಚೆಯಿರುವ ಅದ್ಭುತಕರವಾದ ಆ ವೃಕ್ಷದ ಗುಣಗಳನ್ನು ಗಮನಿಸಿರಿ. ಅಲ್ಲಿರುವ ನದಿಗಳ ಬಗ್ಗೆ ಸಹ ಆಲೋಚಿಸಿರಿ. ನೈಲ್ ನದಿ ಮತ್ತು ಯೂಫ್ರೆಟಿಸ್ ನದಿ ಈ ಭೂಮಿಯಲ್ಲಿರುವ ನದಿಗಳೆಂಬ ವಸ್ತುಸ್ಥಿತಿ ನೆನಪಿಡಬೇಕಾಗಿದೆ. ಅವು ಹೇಗೆ 'ಸಿದ್‌ರತುಲ್ ಮುನ್‌ತಹಾ'ವನ್ನು ತಲುಪಿದವು? ಇದೊಂದು ದರ್ಶನವಾಗಿರಲಿಕ್ಕೆ ಸಾಧ್ಯವೆಂದು ಸ್ಪಷ್ಟವಾಗುತ್ತದೆ.

20. ಆ ಬಳಿಕ ಲೇಖನಿಗಳ ಚಲನೆ ಶಬ್ದ ಕೇಳುವ ಒಂದು ಸ್ಥಾನಕ್ಕೆ ಪೈಗಂಬರರು ಎತ್ತಲ್ಪಟ್ಟರು (ಬುಖಾರಿ, ಮುಸ್ಲಿಂ). ಅಂದರೆ, ದೈವಿಕ ವಿಧಿಗಳು 'ಲೌಹುಲ್ ಮಹ್‌ಫೂಸ್'ನಲ್ಲಿ ಬರೆಯಲ್ಪಡುವಾಗ ಆ ಲೇಖನಿಗಳು ಚಲಿಸುವ ಶಬ್ದವನ್ನು ಪೈಗಂಬರರು ಅಲ್ಲಿ ಆಲಿಸಿದರು.

'ಲೌಹುಲ್ ಮಹ್‌ಫೂಸ್' ಎಂಬ ಫಲಕ ಮತ್ತು ಅದರ ಮೇಲೆ ಬರೆಯುವ ಲೇಖನಿಗಳು ಪ್ರಾಪಂಚಿಕ ವಸ್ತುಗಳಲ್ಲದಿರುವಾಗ, ಅವು ಭೌತಿ ಕೇಂದ್ರಿಯಗಳಿಗೆ ಅನುಭವವಾಗುವುದು ಹೇಗೆ? ಆದರೆ ಆಧ್ಯಾತ್ಮಿಕ ದರ್ಶನದಲ್ಲಿ ಹಾಗೆ ಸಂಭವಿಸಬಹುದು.

21. ಅಲ್ಲಿ ಪೈಗಂಬರ್(ಸ) ಅಲ್ಲಾಹನನ್ನು ಭೇಟಿಯಾದರು. ಆ ಸಂಗತಿಯನ್ನೂ ಹದೀಸುಗಳಲ್ಲಿ ವಿಶದವಾಗಿ ವಿವರಿಸಲಾಗಿದೆ. ಸಂಕ್ಷಿಪ್ತವಾಗಿ ಖುರ್‌ಆನಿನಲ್ಲಿ ಸಹ.

ಆದರೆ, ನಾವು ಚಿಂತನೆಮಾಡಬೇಕಾದ ವಿಚಾರವೇನೆಂದರೆ, ಅಲ್ಲಾಹನೊಡನೆ ಸಂಭಾಷಣೆ ನಡೆಸಲಿಕ್ಕೋಸ್ಕರ ಏಳನೇ ಆಕಾಶಕ್ಕೂ 'ಸಿದ್‌ರತುಲ್ ಮುನ್‌ತಹಾ'ಕ್ಕೂ ಆಚೆಗೆ ಆರೋಹಣ ಮಾಡಬೇಕಾದ ಅವಶ್ಯಕತೆ ಇದೆಯೇ? ಮುಹಮ್ಮದ್ ಪೈಗಂಬರ್(ಸ)ಮತ್ತು ಇತರ ಪ್ರವಾದಿಗಳು ಭೂಮಿಯಲ್ಲೇ ಅಲ್ಲಾಹನೊಡನೆ ಸಂಭಾಷಣೆಗಳನ್ನು ನಡೆಸಿರಲಿಲ್ಲವೇ? ಅಲ್ಲಾಹನಿಗೆ ಆಕಾಶದಲ್ಲಿ ಒಂದು ಕುಳಿತುಕೊಳ್ಳುವ ಪೀಠ ಇದೆಯೇ? ಅವನು ಅಲ್ಲಿ ಸೀಮಿತನೇ? ಅಲ್ಲಾಹನು ಸರ್ವವ್ಯಾಪಿಯಲ್ಲವೇ? ಖುರ್‌ಆನ್ ಹೇಳುವುದನ್ನು ನೋಡಿರಿ:

اَللّٰهُ نُوْرُ السَّمٰوٰتِ وَالْاَرْضِ

**"ಅಲ್ಲಾಹನು ಆಕಾಶಗಳ ಮತ್ತು ಭೂಮಿಯ ಪ್ರಕಾಶವಾಗಿದ್ದಾನೆ."** (ಸೂರತುನ್ನೂರ್)

اَيْنَمَا تُوَلُّوْا فَثَمَّ وَجْهُ اللّٰهِ

**"ನೀವು ಯಾವ ಕಡೆ ತಿರುಗಿದರೂ ಅಲ್ಲಿ ಅಲ್ಲಾಹನ ಮುಖವಿದೆ."** (ಸೂರತುಲ್ ಬಖರ)

وَنَحْنُ أَقْرَبُ إِلَيْهِ مِنْ حَبْلِ الْوَرِيدِ

"ನಾವು ಮನುಷ್ಯನೊಂದಿಗೆ, ಅವನ ಜೀವನಾಡಿಗಿಂತ ಹೆಚ್ಚು ಸಮೀಪದಲ್ಲಿದ್ದೇವೆ". (ಸೂರತುಲ್ ಖಾಫ್)

22. ಅನಂತರ ಪೈಗಂಬರ್(ಸ) ಸ್ವರ್ಗವನ್ನು ಪ್ರವೇಶಿಸಿದರು. (ಬುಖಾರಿ, ಮುಸ್ಲಿಂ)

ಸ್ವರ್ಗ ಮರಣಾನಂತರ ಸುಕೃತರಿಗೆ ನೀಡಲಾಗುವ ಸುಖಾನುಭೂತಿಯ ಉದ್ಯಾನವಷ್ಟೆ. ಅದರಲ್ಲಿ ಪ್ರವೇಶಿಸಿದ ಬಳಿಕ ಅದರಿಂದ ಯಾರೂ ಹೊರಗೆ ಬರಲಾರರೆಂದು ಖುರ್‌ಆನ್ ಹೇಳುತ್ತದೆ:

وَمَا هُمْ مِنْهَا بِمُخْرَجِينَ

"ಅದರಿಂದ ಅವರು ಹೊರಡಿಸಲ್ಪಡಲಾರರು." (15 : 49)

ಹಾಗೆ ಮರಣಾನಂತರ ಪ್ರವೇಶಿಸಲ್ಪಡುವ ಸ್ವರ್ಗದಲ್ಲಿ ಮುಹಮ್ಮದ್ ಪೈಗಂಬರ್(ಸ) ಹೇಗೆ ಪ್ರವೇಶಿಸಿದರು? ಮಾತ್ರವಲ್ಲ, ಪೈಗಂಬರರ ಕಾಲದಲ್ಲಿ ಜೀವಿಸಿದ್ದ ಕೆಲವು ಸಹಾಬಿಗಳನ್ನು ಸಹ ಸ್ವರ್ಗದಲ್ಲಿ ಅವರು ಕಂಡರಷ್ಟೆ. ಬಿಲಾಲ್ ಎಂಬ ಸಹಾಬಿ ಸ್ವರ್ಗದಲ್ಲಿ ಪೈಗಂಬರರ ಮುಂದೆ ನಡೆಯುವುದನ್ನು ಅವರು ಕಂಡರು (ಮುಸ್ಲಿಂ). ಅದು ಒಂದು ಆಧ್ಯಾತ್ಮಿಕ ದರ್ಶನವಾಗಿತ್ತೆಂದು ಇವೆಲ್ಲ ಸ್ಪಷ್ಟಪಡಿಸಿಕೊಡುತ್ತವೆ. ದರ್ಶನದಲ್ಲಿ ಪೈಗಂಬರ್(ಸ) ಹಲವು ಸಲ ಸ್ವರ್ಗ-ನರಕಗಳನ್ನು ಕಂಡಿದ್ದರೆಂದು ಬೇರೆ ಹದೀಸುಗಳಲ್ಲಿ ಸಹ ಹೇಳಲಾಗಿದೆ.

23. ಪೈಗಂಬರ್(ಸ) ಪ್ರಸ್ತುತ ಯಾತ್ರೆಯ ಆರಂಭದಲ್ಲೇ ಓರ್ವ ಮುದುಕಿಯನ್ನು ಕಂಡಿದ್ದರು. ಅದು 'ದುನ್‌ಯಾ'(ಇಹಲೋಕ)ಎಂದು ಜಿಬ್ರೀಲ್ ಅವರಿಗೆ ವ್ಯಾಖ್ಯಾನ ಹೇಳಿದರು (ಇಬ್ನು ಜರೀರ್). ಇದು ಪ್ರತ್ಯಕ್ಷ ಘಟನೆಯಾಗಿದ್ದರೆ ಮುದುಕಿ ಹೇಗೆ ದುನ್‌ಯಾ ಆದಳು? ಆದರೆ ಸ್ವಪ್ನದಲ್ಲಿ ಇಂತಹ ಪ್ರತೀಕಾತ್ಮಕ ದೃಶ್ಯಗಳು ಸಹಜವಾಗಿವೆ. ಭೌತಿಕ ದೃಶ್ಯಗಳಿಗೆ ಅರ್ಥವೂ ವ್ಯಾಖ್ಯಾನವೂ ಅಗತ್ಯವಿಲ್ಲವಷ್ಟೆ.

24. ಖುರೈಶಿಗಳು ಪೈಗಂಬರರ ಬೈತುಲ್‌ಮುಖದ್ದಸ್ ಯಾತ್ರೆಯನ್ನು ಅಲ್ಲಗಳೆದು, ಅವರು ಪೈಗಂಬರರನ್ನು ಪರೀಕ್ಷಿಸಲಿಕ್ಕೋಸ್ಕರ ಬೈತುಲ್ ಮುಖದ್ದಸ್ ಮತ್ತು ಅದರ ಪರಿಸರಗಳಿಗೆ ಸಂಬಂಧಿಸಿದ ಹಲವು ಚಿಹ್ನೆಗಳ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳಿದರು. ಪೈಗಂಬರರು ಬಹಳ ಕಳವಳಗೊಂಡರು. ಆಗ ಅಲ್ಲಾಹನು ಪೈಗಂಬರರಿಗೆ ಬೈತುಲ್ ಮುಖದ್ದಸ್ ಮತ್ತು ಪರಿಸರವನ್ನು ತೋರಿಸಿಕೊಟ್ಟನು. ಆಗ ಅದನ್ನು ನೋಡಿಕೊಂಡು ಪೈಗಂಬರರು ಅವರ ಪ್ರಶ್ನೆಗಳಿಗೆಲ್ಲಾ ಉತ್ತರ ನೀಡುತ್ತಲಿದ್ದರು (ಬುಖಾರಿ, ಮುಸ್ಲಿಂ).

ಪೈಗಂಬರರ ಬೈತುಲ್ ಮುಖದ್ದಸ್ ಪ್ರಯಾಣ ಶಾರೀರಿಕವಾಗಿರುತ್ತಿದ್ದರೆ, ತಾನು ಸ್ವತಃ ಕಂಡ ಆ ದೃಶ್ಯಗಳು ಅಷ್ಟುಬೇಗ ಮರೆತು ಹೋದುವೆಂದು ಭಾವಿಸಲು ನಿರ್ವಾಹವಿಲ್ಲ. ಪೈಗಂಬರರ ಸ್ಮರಣ ಶಕ್ತಿ ಅಷ್ಟು ಕ್ಷೀಣವೇ? ನಾವು ಒಂದು ಸ್ಥಳವನ್ನು ಸಂದರ್ಶಿಸಿದರೆ, ಕಂಡ ಕೂಡಲೇ ಅಲ್ಲಿಯ ಪ್ರಧಾನ ದೃಶ್ಯಗಳು ನಮ್ಮ ಮನಸ್ಸಿನಲ್ಲಿ ಅಚ್ಚೊತ್ತುತ್ತವೆಯಷ್ಟೆ. ಆದರೆ ಸ್ವಪ್ನದಲ್ಲಿ ಅಥವಾ ದಿವ್ಯದರ್ಶನದಲ್ಲಿ ಕಂಡ ದೃಶ್ಯಗಳು ಮರೆತು ಹೋಗಲಿಕ್ಕೂ ಅವು ಸ್ಪಷ್ಟವಾಗಿ ದೃಷ್ಟಿಗೆ ಬಾರದಿರಲಿಕ್ಕೂ ಸಾಧ್ಯವಿದೆ.

25. ದಿನಂಪ್ರತಿ ಐವತ್ತು ಹೊತ್ತಿನ ನಮಾಝುನ್ನು ಅಲ್ಲಾಹನು ಕಡ್ಡಾಯಗೊಳಿಸಿದನು. ಆ ಆಜ್ಞೆಯನ್ನು ಸ್ವೀಕರಿಸಿ ಮುಹಮ್ಮದ್ ಪೈಗಂಬರ್ (ಸ) ಮರಳಿಬಂದರು. ದಾರಿ ಮಧ್ಯೆ ಮೂಸಾನಬಿಯನ್ನು ಭೇಟಿಯಾದರು. ಇದು ಪೈಗಂಬರರ ಸಮುದಾಯಕ್ಕೆ ವಹಿಸಲಾಗದ ಭಾರವಾಗುವುದೆಂದೂ ಆದ್ದರಿಂದ ಆ ವಿಧಿಯನ್ನು ಬದಲಾಯಿಸಿ ಐವತ್ತು ಹೊತ್ತಿಗಿಂತ ಕಡಿತಗೊಳಿಸಲಿಕ್ಕೆ ಅಲ್ಲಾಹನ ಸನ್ನಿಧಿಯಲ್ಲಿ ನಿವೇದಿಸಬೇಕೆಂದೂ ಮೂಸಾನಬಿ (ಅ) ತನ್ನ ಅನುಭವವನ್ನು ಮುಂದಿಟ್ಟು ಪೈಗಂಬರರನ್ನು ಒತ್ತಾಯ ಪೂರ್ವಕವಾಗಿ ಉಪದೇಶಿಸಿದರು. ಅದರ ಪ್ರಕಾರ ಪೈಗಂಬರರು ಪುನಃ ಅಲ್ಲಾಹನ ಬಳಿಗೆ ಹೋಗಿ ಭಿನ್ನವಿಸಿದ ಕಾರಣ ಅದನ್ನು ಅವನು ನಲ್ವತ್ತು ಹೊತ್ತಿಗೆ ಇಳಿಸಿದನು. ಆದರೆ, ಮೂಸಾಬಿಯ ಉಪದೇಶ ಪ್ರಕಾರವೇ ಮತ್ತೂ ಪೈಗಂಬರರು ಅಲ್ಲಾಹನ ಬಳಿಗೆ ಹೋಗಿ ನಮಾಝ್‌ನ ಸಮಯಗಳನ್ನು ಕಡಿಮೆ ಮಾಡಲು ಅಗತ್ಯಪಡಿಸಿದರು. ಹಾಗೆ ಹಲವು ಸಲ ಅಲ್ಲಾಹನ ಮತ್ತು ಮೂಸಾನಬಿಯ ಮಧ್ಯೆ ಆಚೆ-ಈಚೆ ಬರುತ್ತಾ ಹೋಗುತ್ತಾ ಕೊನೆಗೆ ನಮಾಝ್ ಐದು ಹೊತ್ತಾಗಿ ಕಡಿತಗೊಳಿಸಲ್ಪಟ್ಟಿತು. ಅದು ಸಹ ಹೆಚ್ಚಾಯಿತೆಂದೂ ಅದರಿಂದಲೂ ಕಡಿಮೆ ಮಾಡಲು ವಿಜ್ಞಾಪಿಸಬೇಕೆಂದೂ ಮೂಸಾನಬಿ(ಅ) ಮತ್ತೂ ಉಪದೇಶಿಸಿದರೂ ಪೈಗಂಬರರು ಅದಕ್ಕೊಪ್ಪದೆ ಇನ್ನೂ ಕಡಿತಗೊಳಿಸಲು ಅಗತ್ಯಪಡಿಸುವುದಕ್ಕೆ ತಾನು ನಾಚಿಕೆಪಡುತ್ತೇನೆಂದು ಹೇಳಿದರು. ಆ ಐದು ಐವತ್ತೆಂದೂ ಅದರಲ್ಲಿ ಬದಲಾವಣೆ ಇಲ್ಲವೆಂದೂ ಅಲ್ಲಾಹನು ಸಹ ಘೋಷಿಸಿದನು (ಬುಖಾರಿ, ಮುಸ್ಲಿಂ)

24 ತಾಸುಗಳಲ್ಲಿ 50 ಹೊತ್ತು ನಮಾಝ್‌ಮಾಡುವುದು ತುಂಬಾ ತ್ರಾಸದಾಯಕವಾಗಿರಬಹುದೆಂದು ಯೋಚಿಸಲು ಪೈಗಂಬರರಿಗೆ ಸಾಧ್ಯವಾಗಲಿಲ್ಲ! ಮೂಸಾನಬಿಗೆ ಉಂಟಾದ ಆಲೋಚನೆಗಳೇನೂ ಅಲ್ಲಾಹನಿಗೆ ಉಂಟಾಗಲಿಲ್ಲ!(ನಊದುಬಿಲ್ಲಾಹ್). ಇವೆಲ್ಲ ಪ್ರತ್ಯಕ್ಷ ಘಟನೆಗಳಾಗಿರಲಿಲ್ಲವೆಂದೂ ಆಧ್ಯಾತ್ಮಿಕ ದೃಶ್ಯಗಳು ಮಾತ್ರವಾಗಿದ್ದವೆಂದೂ ಇರುವ ವಸ್ತುಸ್ಥಿತಿಯನ್ನು ಈ ಸಂಭಾಷಣೆ ಇತ್ಯಾದಿಗಳು ಮನಗಾಣಿಸಿಕೊಡುವುದು ಸ್ಪಷ್ಟವಷ್ಟೆ.

'ಇಸ್ರಾಅ್' ಮತ್ತು 'ಮಿಅ್‌ರಾಜ್' ಸಂಪೂರ್ಣವಾಗಿಯೂ ಆಧ್ಯಾತ್ಮಿಕ ದರ್ಶನಗಳಾಗಿದ್ದವೆಂದು ಮೇಲಿನ ವಿವರಣೆಗಳಿಂದ ಮನವರಿಕೆ ಮಾಡಲು ಪ್ರಯಾಸವಿಲ್ಲ. ಆದರೆ, ಅಲ್ಲಾಹನಿಗೆ ಏನೂ ಮಾಡಲು ಶಕ್ತಿಯಿಲ್ಲವೇ? ಅವನಿಗೆ 'ಖುದ್‌ರತ್' ಇಲ್ಲವೇ? ಎಂದೂ ಕೆಲವರು ಕೇಳುತ್ತಾರೆ. ಅಲ್ಲಾಹನು ಸರ್ವಶಕ್ತ ಎಂಬುದರಲ್ಲಿ ಏನೂ ತರ್ಕವಿಲ್ಲ. ಮನುಷ್ಯರೆಲ್ಲರನ್ನೂ ಆಕಾಶದಲ್ಲಿ ನೆಲೆಸುವಂತೆ ಮಾಡಲು ಅವನಿಗೆ ಸಾಧ್ಯವಿದೆ. ಆದರೆ ಅಲ್ಲಾಹನ ವಚನವಾದ ಖುರ್‌ಆನನ್ನೂ ಅವನ ರಸೂಲ್ ಆದ ಮುಹಮ್ಮದ್ ಪೈಗಂಬರರ ವಿಶದೀಕರಣಗಳನ್ನೂ ನಾವು ಸ್ವೀಕರಿಸಬೇಡವೇ? ಅವೆರಡನ್ನೂ ಆಧಾರ ಮಾಡಿ ಆಲೋಚಿಸುವಾಗ ಇಸ್ರಾಅ್ ಮತ್ತು ಮಿಅ್‌ರಾಜ್ ಆಧ್ಯಾತ್ಮಿಕ ದರ್ಶನಗಳೆಂದು ಸ್ಪಷ್ಟವಾಗಿ ರುಜುವಾಗುತ್ತದೆ.

ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಅಹ್ಮದ್

ಅಲೈಹಿಸ್ಸಲಾಮ್ ಮಿಲ್‌ರಾಜ್ ಬಗ್ಗೆ ಏನು ಕಲಿಸಿದ್ದಾರೆಂದು ನೋಡೋಣ. ಭಿನ್ನಾಭಿಪ್ರಾಯಗಳ ಕುರಿತು ವಿಧಿ ಹೇಳಲು ಅಲ್ಲಾಹನಿಂದ ನಿಯುಕ್ತರಾದ ಆ ನೀತಿವಂತನಾದ ನ್ಯಾಯಾಧಿಪತಿ (حكم عدل) ಹೀಗೆ ಹೇಳಿದ್ದಾರೆ:

"ಮಿಲ್‌ರಾಜ್ ಯಾತ್ರೆ ಸ್ಥೂಲದೇಹ ಸಹಿತ ಆಗಿರಲಿಲ್ಲ. ಬದಲು, ಅದು ಅತಿ ಮಹತ್ತರವಾದ ದಿವ್ಯದರ್ಶನವಾಗಿತ್ತು. ಅದನ್ನು ಯಥಾರ್ಥದಲ್ಲಿ ಜಾಗ್ರಾವಸ್ಥೆಯೆಂದೇ ಹೇಳಬೇಕಾಗಿದೆ. ಅಂತಹ ದಿವ್ಯದರ್ಶನದ ಸ್ಥಿತಿಯಲ್ಲಿ ಮನುಷ್ಯನಿಗೆ ಒಂದು ಪ್ರಕಾಶಶರೀರದೊಂದಿಗೆ ತನ್ನ ಆಧ್ಯಾತ್ಮಿಕ ಶಕ್ತಿಗನುಸಾರವಾಗಿ ಸ್ವರ್ಗೀಯಯಾತ್ರೆ ಮಾಡಲು ಸಾಧ್ಯವಾಗುತ್ತದೆ. ಪೈಗಂಬರ್(ಸ)ರವರ ಆಧ್ಯಾತ್ಮಿಕ ಸಿದ್ಧಿ ಅತ್ಯುನ್ನತವಾದ ಸ್ಥಾನವನ್ನು ಗಳಿಸಿದ್ದು ಪರಿಪೂರ್ಣತೆಯ ಪರಮೋಚ್ಚವನ್ನು ತಲಪಿದುದರಿಂದ ಪೈಗಂಬರರು ಮಿಲ್‌ರಾಜ್ ಯಾತ್ರೆಯಲ್ಲಿ 'ಅತಿ ಮಹತ್ತರ ಸಿಂಹಾಸನ' (عرش عظيم) ಎಂಬ ವಿಶಿಷ್ಟವಾದ, ಆಧ್ಯಾತ್ಮಿಕ ಪ್ರಪಂಚದ ಕೇಂದ್ರವನ್ನೇ ಪಡೆದರು. ಒಟ್ಟಾರೆ, ಯಥಾರ್ಥದಲ್ಲಿ ಈ ಯಾತ್ರೆ ಜಾಗ್ರದರ್ಶನದೊಂದಿಗೆ ಬಹಳ ಸಾಮ್ಯತೆಯಿರುವ ಒಂದು ರೀತಿಯ ಆಧ್ಯಾತ್ಮಿಕ ದರ್ಶನವಾಗಿದೆ. ನಾನು ಅದನ್ನು ಸ್ವಪ್ನವೆಂದು ಎಂದಿಗೂ ಹೇಳಲಾರೆ. ಕೆಳಮಟ್ಟದ ಒಂದು 'ಕಶ್ಫ್' ಎಂದು ಕೂಡ ಹೇಳುವುದಿಲ್ಲ. ಬದಲು, ಅತಿ ಮಹತ್ತರವಾದ ಒಂದು 'ಕಶ್ಫ್' (ದಿವ್ಯ ದರ್ಶನ) ಅದಾಗಿತ್ತು.ವಾಸ್ತವಿಕವಾಗಿ ಈ ಸ್ಥಿತಿ ಜಾಗ್ರಾವಸ್ಥೆಗಿಂತ ಹೆಚ್ಚು ಸ್ಪಷ್ಟವಾಗಿರುತ್ತದೆ. ಇಂತಹ ಕಶ್ಫ್‌ಗಳಿಗೆ ಸಂಬಂಧಿಸಿ ಈ ಗ್ರಂಥಕರ್ತ ಸಹ ಅನುಭವಿ." (ಇಝಾಲೆ ಔಹಾಂ)

ಇನ್ನು, ಈ ಮಹತ್ತರವಾದ ದಿವ್ಯದರ್ಶನದ ತಾತ್ಪರ್ಯ ಮತ್ತು ಉದ್ದೇಶವೇನೆಂದು ಪರಿಶೀಲಿಸೋಣ. ಈ ಘಟನೆ ಮುಹಮ್ಮದ್ ಪೈಗಂಬರ್(ಸ)ರವರ ಹಿಜ್‌ರಕ್ಕೆ ಮುಂಚೆ ಮಕ್ಕ ಜೀವನ ಕಾಲದಲ್ಲಿ ನಡೆದುದಷ್ಟೆ. ಅಂದು ಪೈಗಂಬರರೊಂದಿಗೆ ನಿರ್ಬಲವಾದ ಒಂದು ಶಿಷ್ಯಗಣ ಮಾತ್ರವೇ ಇತ್ತು. ಪ್ರಬಲರಾದ ಬಹುಸಂಖ್ಯಾತರು ಕಡುವೈರಿಗಳಾಗಿದ್ದರು. ಪೈಗಂಬರರ ಬಗ್ಗೆ ಕಳ್ಳ, ಹುಚ್ಚ ಎಂದು ಅವರು ಪ್ರಚಾರ ಮಾಡಿದ್ದರು. ಹೊರಗಿನ ಸತ್ಯಾನ್ವೇಷಿಗಳಿಗೆ ಆ ಶತ್ರುಗಳು ತಪ್ಪುಭಾವನೆ ಹುಟ್ಟಿಸಿ ಅವರನ್ನು ಬೆದರಿಸಿ ಮರಳಿಕಳುಹಿಸುವುದು ಅವರ ರೂಢಿಯಾಗಿತ್ತು. ಬಡವರಾದ ಅಲ್ಪ ಸಂಖ್ಯಾತ ಸತ್ಯವಿಶ್ವಾಸಿಗಳನ್ನೂ ಪೈಗಂಬರರನ್ನೂ ಅವರು ಹಲವಿಧದಲ್ಲಿ ಉಪದ್ರವಿಸುತ್ತಲೂ ಬೆದರಿಸುತ್ತಲೂ ಇದ್ದರು. ಅಂದು ಬಾಹ್ಯದೃಷ್ಟಿಯಲ್ಲಿ ಇಸ್ಲಾಮಿಗೆ ವಿಜಯದ ಸಾಧ್ಯತೆ ತೀರಾ ಇರಲಿಲ್ಲ. ಮಕ್ಕದಲ್ಲಿ ಹುಟ್ಟಿದ ಆ ಸಂಘಟನೆ ಮಕ್ಕದ ಮಣ್ಣಿನಲ್ಲೇ ನಾಶಗೊಳ್ಳುವುದೆಂದು ವಿರೋಧಿಗಳು ಭಾವಿಸಿದ್ದರು. ಕಠಿಣವಾದ ವಿರೋಧ ಪರಾಕಾಷ್ಠೆಗೆ ತಲುಪಿದ ಸಂದಿಗ್ಧ ಘಟ್ಟದಲ್ಲಿ ಇಸ್ರಾಲ್-ಮಿಲ್‌ರಾಜ್ ಘಟನೆ ನಡೆಯಿತು. ಆ ದಿವ್ಯ ದರ್ಶನಗಳು ಕೆಳಗೆ ಹೇಳುವ ಸಂಗತಿಗಳನ್ನು ಸೂಚಿಸಿದ್ದವು:

1. ಮುಹಮ್ಮದ್ ಪೈಗಂಬರ್(ಸ)ರವರ ಸಂಘಟನೆ-ಇಸ್ಲಾಂ ಪರಾಜಿತಗೊಳ್ಳಲಾರದು. ಅದಕ್ಕೆ ಸರ್ವತ್ರ ಅಂಗೀಕಾರ ದೊರೆಯುವುದು. ಅದು ಬೇರೆಲ್ಲ ಸಂಘಟನೆಗಳನ್ನು ಸೋಲಿಸುವುದು.

2. ಮುಹಮ್ಮದ್ ಪೈಗಂಬರ್(ಸ) ಪ್ರವಾದಿ ಪ್ರಭುವಾಗಿದ್ದಾರೆ. ಎಲ್ಲ ಪ್ರವಾದಿಗಳು ಪೈಗಂಬರರನ್ನು ಇಮಾಮ್ ಮಾಡಿ, ಹಿಂದೆ ನಿಂತು ನಮಾಝ್ ಮಾಡಿದರಷ್ಟೆ. ಅವರೆಲ್ಲರ ಸಮುದಾಯಗಳು ಪೈಗಂಬರರನ್ನು ಅನುಸರಿಸುವುವು. ಲೋಕದ ಜನತೆಗಳೆಲ್ಲ ಪೈಗಂಬರರ ಪತಾಕೆಯಡಿಯಲ್ಲಿ ಬರುವುವೆಂದು ಇದು ಸೂಚಿಸುತ್ತದೆ.

3. ಬೈತುಲ್‌ಮುಖದ್ದಸಿನ 'ಮಸ್ಜಿದುಲ್ ಅಖ್‌ಸಾ' ಸಂದರ್ಶನಕ್ಕೆ ವಿಶೇಷ ಅರ್ಥವಿದೆ. ಅದು ಇಸ್ರಾಈಲ್ ಪ್ರವಾದಿಗಳ ಪುಣ್ಯಕೇಂದ್ರವಷ್ಟೆ. ಬನೂ ಇಸ್ರಾಈಲ್ ಸಮುದಾಯ ಇಬ್ರಾಹೀಂ ನಬಿ (ಅ)ರವರ ಒಬ್ಬ ಪುತ್ರನಾದ ಇಸ್‌ಹಾಕ್ ನಬಿ (ಅ)ಯ ಸಂತಾನ ಪರಂಪರೆಯಾಗಿದೆ. ಅದೇ ಪ್ರಕಾರವೇ ಇಬ್ರಾಹೀಂ ನಬಿಯ ಇನ್ನೊಬ್ಬ ಪುತ್ರನಾದ ಇಸ್ಮಾಈಲ್ ನಬಿ(ಅ)ಯ ಸಂತಾನ ಪರಂಪರೆ ಅರಬಿಯರು-ಮುಖ್ಯವಾಗಿ ಮಕ್ಕ ನಿವಾಸಿಗಳು. ಅವರ ಪುಣ್ಯಕೇಂದ್ರ ಮಕ್ಕದ ಕಲ್‌ಬವಾಗಿತ್ತಷ್ಟೆ. ಅಲ್ಲಾಹನು ಮುಹಮ್ಮದ್ ಪೈಗಂಬರ್(ಸ)ರವರನ್ನು ಮಕ್ಕದಿಂದ ಬೈತುಲ್ ಮುಖದ್ದಿಸಿಗೆ ನಿಶಾಪ್ರಯಾಣ ಮಾಡಿಸಿದನು. ಅಂದರೆ, ಮುಹಮ್ಮದ್ ಪೈಗಂಬರ್ (ಸ) ಮೇಲೆ ಹೇಳಿದ ಎರಡು ಸಹೋದರ ಸಮುದಾಯಗಳನ್ನು ಒಂದುಗೂಡಿಸುವ ಕೊಂಡಿಯಾಗಿದ್ದಾರೆ. ಹಾಗೆ ಎರಡು ಕೇಂದ್ರಗಳನ್ನು ಅವರು ಜೋಡಿಸಿದರು. ಕೇಂದ್ರಗಳು ಜನತೆಗಳ ಪ್ರತೀಕಗಳೆಂಬುದನ್ನು ನೆನಪಿಡಬೇಕು. ಮೋಸ್ಕೊ ಮತ್ತು ವಾಷಿಂಗ್ಟನ್ ಪರಸ್ಪರ ಸಮೀಪಿಸಿದವು ಎಂದು ಹೇಳಿದರೆ ಅದರ ತಾತ್ಪರ್ಯ ಎರಡು ರಾಷ್ಟ್ರಗಳೂ ಪರಸ್ಪರ ಮೈತ್ರಿ ಹೊಂದಿದವು ಎಂದಷ್ಟೆ. ಮುಂದೆ, ಇಬ್ರಾಹೀಂ ನಬಿಯ ಇಡೀ ಕುಟುಂಬದ ಎಲ್ಲಾ ವಿಧದ ಅನುಗ್ರಹಗಳ ಏಕ ಉತ್ತರಾಧಿಕಾರಿ ಮುಹಮ್ಮದ್ ಪೈಗಂಬರ್ (ಸ) ಆಗುವರೆಂಬ ಒಂದು ಸೂಚನೆ ಸಹ ಅದರಲ್ಲಿ ಅಡಕವಾಗಿದೆ. ಮಾತ್ರವಲ್ಲ, ಬೈತುಲ್ ಮುಖದ್ದಸ್ ಇರುವ ಭೂಪ್ರದೇಶಗಳು ಮುಸ್ಲಿಮರ ಅಧೀನಕ್ಕೆ ಬರುವುದೆಂದೂ ಅದು ಸೂಚಿಸುತ್ತದೆ. ಅದು ಶೀಘ್ರವಾಗಿ ಈಡೇರಿತಷ್ಟೆ.

4. ಪೈಗಂಬರರು ಏಳು ಆಕಾಶಗಳಲ್ಲಿ ಹಲವು ಪ್ರವಾದಿಗಳನ್ನು ಕಂಡದ್ದು ಅವರವರ ಪದವಿಗಳನ್ನು ಸೂಚಿಸುತ್ತದೆ. ಅವರನ್ನೆಲ್ಲ ದಾಟಿ ಮುಹಮ್ಮದ್ ಪೈಗಂಬರ್ (ಸ) ಅತ್ಯುನ್ನತ ಪದವಿಗೆ ಆರೋಹಣ ಮಾಡಿದರು. ಮೂಸಾನಬಿ(ಅ) ಅತ್ತದ್ದರ ಅರ್ಥ ಸಹ ಅದೇ ಆಗಿದೆ. ಆ ಸಂದರ್ಭದಲ್ಲಿ ಮೂಸಾನಬಿ (ಅ) ಹೀಗೆ ಹೇಳಿದರೆಂದು ಹದೀಸಿನಲ್ಲಿದೆ:

رب لم اظن ان يرفع احد على

"ನನ್ನ ಪ್ರಭೂ, ಯಾರಾದರೂ ನನಗಿಂತ ಉನ್ನತ ಪದವಿಗೆ ಎತ್ತಲ್ಪಡುವರೆಂದು ನಾನು ಊಹಿಸಿರಲಿಲ್ಲ." (ಬುಖಾರಿ)

ಪೈಗಂಬರರು ಹೆಚ್ಚು ಮೇಲೆ ಏರಿಹೋಗುವುದರ ಅರ್ಥ ಮೂಸಾನಬಿ (ಅ) ಮನಗಂಡದ್ದು ಪೈಗಂಬರರ ಮೂಲಕ ಹೆಚ್ಚು ಜನರು ಸ್ವರ್ಗವನ್ನು ಪ್ರವೇಶಿಸುವರೆಂಬುದನ್ನು ಮುಂಚೆ ಪ್ರಸ್ತಾಪಿಸಲಾಗಿದೆಯಷ್ಟೆ.

5. ಎದೆಯನ್ನು ಸೀಳಿದ್ದು, ತೊಳೆದು ಸ್ವಚ್ಛಮಾಡಿ ಅದರಲ್ಲಿ ಈಮಾನ್ ಮತ್ತು ಹಿಕ್‌ಮತ್ ತುಂಬಿಸಿದ್ದಾಗಿ ಕಂಡದುದರ ತಾತ್ಪರ್ಯ ಪೈಗಂಬರರಿಗೆ ಹೃದಯ ಶುದ್ಧಿ ಮತ್ತು ಆಧ್ಯಾತ್ಮಿಕ ಜ್ಞಾನ ಹೆಚ್ಚಾಗಿ ಲಭಿಸುವುದೆಂದಾಗಿದೆ.

6. ಬೈತುಲ್ ಮುಖದ್ದಸ್‌ನಲ್ಲಿ ಮತ್ತು ಏಳನೇ ಆಕಾಶದಲ್ಲಿರುವ ಬೈತುಲ್ ಮಲ್‌ಮೂರ್‌ನಲ್ಲಿ ಹಾಲು ಕುಡಿದದ್ದು ಮತ್ತು ಮದ್ಯವನ್ನೂ ನೀರನ್ನೂ ತಿರಸ್ಕರಿಸಿದ್ದು-ಇದರ ಅರ್ಥ ಜಿಬ್ರೀಲ್ ಹೇಳಿ ಕೊಟ್ಟದ್ದನ್ನು ಜ್ಞಾಪಿಸಿರಿ. ಮಾತ್ರವಲ್ಲ, ಸ್ವಪ್ನದಲ್ಲಿ ಹಾಲು ಕಂಡರೆ ಅದರ

ತಾತ್ಪರ್ಯ ಅರಿವು ಅಥವಾ ದೈವಿಕ ಜ್ಞಾನ ಎಂದು ಪೈಗಂಬರರೇ ಕಲಿಸಿದ್ದಾರೆ.(ಬುಖಾರಿ)

7. ಪೈಗಂಬರರ ವಾಹನ 'ಬುರಾಖ್' ಆಗಿತ್ತಷ್ಟೆ. ಸುಂದರ ಮೋಹನವಾದ ಅದರ ರೂಪ ಮತ್ತು ಓಟದಲ್ಲಿ ಅದರ ವೇಗತೆ ವಿವರಿಸಲ್ಪಟ್ಟದ್ದು ವಿಶೇಷವಾಗಿ ಗಮನಾರ್ಹವಾಗಿದೆ. 'ಬುರಾಖ್'ಎಂಬ ಪದಕ್ಕೆ ಪ್ರಕಾಶಿಸುವಂಥದ್ದು, ಮಿಂಚಿನ ವೇಗದಲ್ಲಿ ಓಡುವಂಥದ್ದು ಎಂಬ ಅರ್ಥಗಳನ್ನು ಹದೀಸ್ ವ್ಯಾಖ್ಯಾನಗಾರರೇ ಹೇಳಿದ್ದಾರೆ (ಮಿರ್ಖಾತ್). ಇಸ್ಲಾಂ ಆ ಕಾಲದಲ್ಲಿ ನಿಸ್ಸಹಾಯಾವಸ್ಥೆಯಲ್ಲೂ ಶತ್ರುಗಳಿಂದ ಸುತ್ತುವರಿಯಲ್ಪಟ್ಟ ಸ್ಥಿತಿಯಲ್ಲೂ ಇದ್ದರೂ ಅದಕ್ಕೆ ಸದ್ಯೋಭವಿಷ್ಯದಲ್ಲಿ ಬಹಳ ಪ್ರಚಾರ ಸಿದ್ಧಿಸುವುದೆಂದೂ ಮಿಂಚಿನ ವೇಗದಲ್ಲಿ ಅದರ ಪ್ರಕಾಶ ಹರಡುವುದೆಂದೂ ಬೇಗನೇ ಅದು ಲೋಕಕ್ಕೆ ಒಂದು ಆಕರ್ಷಕ ವಸ್ತುವಾಗುವುದೆಂದೂ ಇದರ ತಾತ್ಪರ್ಯವೆಂದು ತಿಳಿದುಕೊಳ್ಳಬೇಕು. ಅದು ಸಹ ಈಡೇರಿತಷ್ಟೆ.

8. ಸಮೀಪ ಕಾಲದಲ್ಲೇ ಪೈಗಂಬರರ ಹಿಜ್‌ರತ್ ಉಂಟಾಗುವುದೆಂಬ ಒಂದು ಸೂಚನೆ ಸಹ ಇದರಲ್ಲಿ ಅಡಕವಾಗಿದೆ. ಬೈತುಲ್ ಮುಖದ್ದಸನ್ನು ಮದೀನದ ಪ್ರತೀಕವನ್ನಾಗಿಯೂ ಪರಿಗಣಿಸಬಹುದಾಗಿದೆ. ಇಸ್ರಾಈಲ್ ಪ್ರವಾದಿಗಳ ಅನುಯಾಯಿಗಳೂ ಲೋಕದ ಇತರ ಜನತೆಗಳೂ ಪೈಗಂಬರರನ್ನು ಅನುಸರಿಸಲು ತೊಡಗಿದ್ದು ಪೈಗಂಬರರ ಮದೀನ ಯಾತ್ರೆಯ ನಂತರವಷ್ಟೆ. ಸಂಕ್ಷಿಪ್ತವಾಗಿ, ಸದ್ಯೋಭವಿಷ್ಯದಲ್ಲಿ ಉಂಟಾಗಲಿರುವ ಯಾತ್ರೆ ಮತ್ತು ಅದರ ನಂತರ ಉಂಟಾಗುವ ಮಹತ್ತರವಾದ ಪ್ರಗತಿಗಳನ್ನು ಪೈಗಂಬರರಿಗೆ ಅಲ್ಲಾಹನು ತೋರಿಸಿಕೊಟ್ಟನು ಎಂದು ಸಾರಾಂಶ. ಹಾಗೆಯೇ ಸಂಭವಿಸಿತು.

9. ನೈಲ್ ನದಿ ಮತ್ತು ಯೂಫ್ರಟಿಸ್ ನದಿ ಕಂಡದ್ದರ ತಾತ್ಪರ್ಯ-ಸಮೀಪದಲ್ಲೇ ಸಂಭವಿಸುವ ಹಿಜ್‌ರದ ನಂತರ ಗಳಿಸಲಿರುವ ಪ್ರಗತಿಯ ಫಲವಾಗಿ ಸದ್ಯೋಭವಿಷ್ಯದಲ್ಲಿ, ಆ ನದಿಗಳಿರುವ ರಾಜ್ಯಗಳು (ಈಜಿಪ್ಟ್, ಇರಾಕ್ ಇತ್ಯಾದಿ) ಮುಸ್ಲಿಮರಿಗೆ ಅಧೀನವಾಗುವುದೆಂದೂ ಅಲ್ಲಿ ಇಸ್ಲಾಮಿನ ವಿಜಯ ಪತಾಕೆಗಳು ಹಾರಾಡುವುವೆಂದೂ ಭಾವಿಸಬಹುದಾಗಿದೆ. ಇಂದು ಲೋಕದಲ್ಲಿ ವಿಭಿನ್ನ ಧೋರಣೆಗಳನ್ನು ಹೊಂದಿರುವ ಎರಡು ಮಹಾಶಕ್ತಿಗಳು ಇಸ್ಲಾಮಿಗೆ ಬೆದರಿಕೆಯಾಗಿರುವಂತೆಯೇ ಪೈಗಂಬರರ ಕಾಲದಲ್ಲಿ ಕಿಸ್ರಾ, ಕೈಸರ್ ಅಥವಾ ಪರ್ಶಿಯಾ, ರೋಮ್ ಎಂಬ ಹೆಸರಿನ ಎರಡು ಶಕ್ತಿಗಳು ಇಸ್ಲಾಮಿಗೆ ಬೆದರಿಕೆಯಾಗಿದ್ದವು. ಅವೆರಡನ್ನೂ ನಿರ್ಮೂಲ ಮಾಡಿ ಅದರ ಸ್ಥಾನವನ್ನು ಇಸ್ಲಾಂ ಸ್ವಾಧೀನಪಡಿಸುವುದೆಂಬುದಾಗಿತ್ತು ಪ್ರಸ್ತುತ ದರ್ಶನದ ಅರ್ಥವೆಂದೂ ಮನವರಿಕೆ ಮಾಡಬಹುದಾಗಿದೆ. ಅದು ಸಹ ಈಡೇರಿತಷ್ಟೆ.

10. ಮಿಅ್‌ರಾಜ್ ವಿಷಯದಲ್ಲಿ ಪ್ರಧಾನವಾಗಿ ಪರಿಗಣಿಸಬೇಕಾದ ಒಂದು ವಿಚಾರ ಪೈಗಂಬರ್ (ಸ) ಆರೋಹಣ ಮಾಡಿದ ಆಕಾಶಯಾವುದಾಗಿತ್ತು ಎಂಬುದಾಗಿದೆ. ಅರಬಿ ಭಾಷೆಯಲ್ಲಿ 'ಸಮಾಅ್'(ಆಕಾಶ) ಎಂಬ ಪದಕ್ಕೆ مسكن ارواح الابرار (ಸಜ್ಜನರ ಆತ್ಮಗಳು ವಾಸಿಸುವ ಸ್ಥಳ) ಎಂದು ಸಹ ಅರ್ಥವಿದೆ (ಅಲ್ ಮುನ್‌ಜಿದ್). ಆ ಅರ್ಥವೇ ಇಲ್ಲಿ ವಿವಕ್ಷಿತವೆಂದು ಸ್ಪಷ್ಟವಷ್ಟೆ. ಅದು ನಮ್ಮ ಈ ಭೌತಿಕ ಪ್ರಪಂಚದ ಆಕಾಶವಲ್ಲ. ಬದಲು, ದಿವ್ಯದರ್ಶನದಲ್ಲಿ ಪೈಗಂಬರರ ಆಧ್ಯಾತ್ಮಿಕ ದೃಷ್ಟಿ ಸಂಚರಿಸಿದ್ದು ಮೇಲೆ ಹೇಳಿದ ಆಧ್ಯಾತ್ಮಿಕ ಪ್ರಪಂಚದ ಆಕಾಶಗಳಲ್ಲಾಗಿದೆ. ಅಲ್ಲಿಯ ನಿತ್ಯನಿವಾಸಿಗಳಾದ ಪರಿಶುದ್ಧಾತ್ಮರುಗಳನ್ನು ಮುಹಮ್ಮದ್ ಪೈಗಂಬರ್(ಸ)ರವರ ಆತ್ಮ ದರ್ಶಿಸಿತು. ಅವರ ಸ್ಥಾನಗಳನ್ನು ಪೈಗಂಬರ್ (ಸ) ವಿವರಿಸಿದ್ದು ಈ ಪ್ರಕಾರವಷ್ಟೆ:

| | | |
|---|---|---|
| ಒಂದನೇ ಆಕಾಶದಲ್ಲಿ | : | ಆದಂ ನಬಿ (ಅಲೈಹಿಸ್ಸಲಾಮ್) |
| ಎರಡನೇ ಆಕಾಶದಲ್ಲಿ | : | ಯಹ್‌ಯಾ ನಬಿ (ಅ) ಮತ್ತು ಈಸಾನಬಿ (ಅ) |
| ಮೂರನೇ ಆಕಾಶದಲ್ಲಿ | : | ಯೂಸುಫ್ ನಬಿ (ಅ) |
| ನಾಲ್ಕನೇ ಆಕಾಶದಲ್ಲಿ | : | ಇದ್ರೀಸ್ ನಬಿ (ಅ) |
| ಐದನೇ ಆಕಾಶದಲ್ಲಿ | : | ಹಾರೂನ್ ನಬಿ (ಅ) |
| ಆರನೇ ಆಕಾಶದಲ್ಲಿ | : | ಮೂಸಾ ನಬಿ (ಅ) |
| ಏಳನೇ ಆಕಾಶದಲ್ಲಿ | : | ಇಬ್ರಾಹೀಂ ನಬಿ (ಅ) |

ಇಬ್ರಾಹೀಂ ನಬಿ (ಅ) ಅಲ್ಲಿ "ಬೈತುಲ್ ಮಅ್‌ಮೂರ್" ಮಸೀದಿಯ ಗೋಡೆಗೆ ಒರಗಿ ಕುಳಿತಿದ್ದರು. ಇವೆಲ್ಲ ಆ ಪ್ರವಾದಿಗಳ ಪದವಿಗಳನ್ನು ಸೂಚಿಸುತ್ತವೆ. ತಂತಮ್ಮ ನಿಶ್ಚಿತ ಸ್ಥಾನಗಳಿಂದ ಮೇಲಕ್ಕೆ ಹೋಗಲು ಅವರಿಗೆ ಅನುಮತಿಯಿಲ್ಲ. ಆದರೆ ಪ್ರವಾದಿ ಪ್ರಭುವಾದ ಮುಹಮ್ಮದ್ ಪೈಗಂಬರ್(ಸ)ರವರ ಸ್ಥಾನ ಅತ್ಯುಚ್ಚವಾಗಿದೆ. ಅದು ಏಳು ಆಕಾಶಗಳಿಗೂ ಆಚೆಯಿರುವ "ಸಿದ್‌ರತುಲ್‌ಮುನ್‌ತಹಾ" ಆಗಿದೆ. "ಖಾತಮುನ್ನಬಿಯ್ಯೀನ್"ನ ಸ್ಥಾನ ಅದೇ ಆಗಿದೆ. ಬೇರೆ ಯಾವ ಪ್ರವಾದಿಗೂ ಅದು ಸಿಗಲಾರದು. ಬೇರೆ ಮಾತಿನಲ್ಲಿ ಹೇಳುವುದಾದರೆ, ಸೃಷ್ಟಿಕರ್ತ ಮತ್ತು ಸೃಷ್ಟಿಗಳ ಮಧ್ಯದಲ್ಲಿರುವ ಅಂತರದಲ್ಲಿ ಮನುಷ್ಯನಿಗೆ ತಲುಪಲು ಸಾಧ್ಯವಿರುವ ಕೊನೆಯ ಎಲ್ಲೆಯಾಗಿದೆ "ಸಿದ್‌ರತುಲ್ ಮುನ್‌ತಹಾ". ಅದರ ತುದಿಯಲ್ಲಿ ನಿಂತು ಪೈಗಂಬರ್(ಸ) "ಲೌಹುಲ್‌ಮಹ್‌ಫೂಸ್"ನಲ್ಲಿ ಬರೆಯುವ ಲೇಖನಿಗಳ ಶಬ್ದವನ್ನು ಕೇಳಿದರು. ದೇವಸಿಂಹಾಸನ ಅಥವಾ "ಅರ್ಶ್ ಅಝೀಂ" ಆ ಕೊನೆಯ ಸೀಮೆಯ ಆಚೆಗಿದೆ. ಆದರೆ ಈ ಹೇಳಿದ ಸ್ಥಾನಗಳಲ್ಲಿ ಯಾವುದು ಕೂಡ (ಬೈತುಲ್‌ಮಅ್‌ಮೂರ್, ಲೌಹುಲ್ ಮಹ್‌ಫೂಸ್, ಸಿದ್‌ರತುಲ್ ಮುನ್‌ತಹಾ, ಅರ್ಶ್ ಅಝೀಂ ಎಂಬಿವು) ನಮ್ಮ ಭೌತಿಕ ಪ್ರಪಂಚದಲ್ಲಿ ಒಳಗೊಂಡದ್ದಲ್ಲವೆಂಬ ಸತ್ಯಾಂಶವನ್ನು ಮತ್ತೊಮ್ಮೆ ನೆನಪಿಸಿಕೊಡುತ್ತೇನೆ.

ಹಾಗೆ ಪ್ರವಾದಿವರ್ಯರಾದ ಮುಹಮ್ಮದ್ ಪೈಗಂಬರ್ (ಸ) ಬೇರೆ ಯಾವ ಮನುಷ್ಯನಿಗೂ ದೊರಕದಂತಹ ಆ ಮಹೋನ್ನತ ಸ್ಥಾನದಿಂದ ಅತ್ಯುನ್ನತನಾದ ಅಲ್ಲಾಹನನ್ನು ಪಡೆಯಲಿಕ್ಕೋಸ್ಕರ ಆಚೆಗೆ ಅವನೆಡೆಗೆ ಸಾಗಿದರು. ಆಗ ಸರ್ವೋನ್ನತನಾದ ಅಲ್ಲಾಹನು ಪೈಗಂಬರೆಡೆಗೆ ಈಚೆಗೂ ಸಮೀಪಿಸಿದನು. ಹಾಗೆ ಸುದೀರ್ಘವಾದ ಸಂಭಾಷಣೆ ನಡೆದವು. ಖುರ್‌ಆನ್‌ನಲ್ಲಿ "ಸೂರತುನ್ನಜ್ಮ್"ನಲ್ಲಿ ಮತ್ತು ವಿಶ್ವಾಸಾರ್ಹ ಹದೀಸುಗಳಲ್ಲಿ ಈ ಸಂಗತಿಗಳು ವಿಶದೀಕರಿಸಲ್ಪಟ್ಟಿವೆ. *

**" ಇನ್ಸಾನಿಯತ್ ಝಿಂದಾಬಾದ್ "**

**"ಮಾನವೀಯತೆ ಚಿರಕಾಲ ಬಾಳಲಿ"**

# ಪ್ರವಾದಿತ್ವ ಸಮಾಪ್ತಿಯ ನಿಜಸ್ಥಿತಿ - 6

ಉರ್ದು ಮೂಲ : ಮಿರ್ಝಾ ಬಶೀರ್ ಅಹ್ಮದ್ ಎಂ.ಎ.
ಅನುವಾದ : ಎಂ. ಉಬೈದುಲ್ಲಾ

## ಮುಬಶ್ಶಿರಾತ್ ಪಡೆಯುವ ಓರ್ವ ನಬಿಯ ಕುರಿತು ಭವಿಷ್ಯವಾಣಿ

"ಲಮ್ ಯಬ್‌ಖ ಮಿನನ್ನುಬುವ್ವತಿ ಇಲ್ಲಲ್ ಮುಬಶ್ಶಿರಾತ್" (ನುಬುವ್ವತ್‌ನಲ್ಲಿ ಮುಬಶ್ಶಿರಾತ್ ಹೊರತು ಇನ್ನೇನೂ ಬಾಕಿಯಾಗಿ ಉಳಿದಿಲ್ಲ) ಎಂಬ ಹದೀಸಿನಲ್ಲಿ ಒಂದು ಸೂಕ್ಷ್ಮ ಸೂಚನೆ ಸಹ ಇತ್ತು. ಲೋಕದ ಅಂತಿಮ ಕಾಲಘಟ್ಟದಲ್ಲಿ ಮಸೀಹ್ ನಾಸಿರೀ (ಅಲೈಹಿಸ್ಸಲಾಮ್) ರವರಿಗೆ ಹೋಲಿಕೆಯನ್ನು ಹೊಂದಿದ ಒಬ್ಬ ಪ್ರವಾದಿಯ ಆಗಮನದ ಸಮಾಚಾರವನ್ನು ಈ ಹದೀಸಿನಲ್ಲಿ ನೀಡಲಾಗಿತ್ತು. ಅದರ ವಿವರಣೆ ಹೀಗೆ: ಹಝ್ರತ್ ಈಸಾ ಅಲೈಹಿಸ್ಸಲಾಮರಿಗೆ ಇಂಜೀಲ್ ಅವತೀರ್ಣವಾಗಿತ್ತು. ಇಂಜೀಲ್ ಎಂಬ ಶಬ್ದದ ಅರ್ಥವನ್ನು ಪ್ರತಿಯೊಂದು ನಿಘಂಟುವಿನಲ್ಲಿ "ಬಶಾರತ್" ಅಥವಾ ಶುಭವಾರ್ತೆ ಎಂದು ಬರೆಯಲಾಗಿದೆ. (ಅಖ್‌ರಬುಲ್ ಮವಾರಿದ್ ಮೊದಲಾದ ನಿಘಂಟು ಗ್ರಂಥಗಳನ್ನು ನೋಡಿರಿ.) ಹಝ್ರತ್ ಈಸಾ ಅಲೈಹಿಸ್ಸಲಾಮರಿಗೆ ನೀಡಲಾದ ನುಬುವ್ವತ್ (ಪ್ರವಾದಿತ್ವ) ಗೈರ್ ತಶ್‌ರೀಈ ಎಂದರೆ ಶರೀಅತೇತರ ನುಬುವ್ವತ್ ಆಗಿತ್ತು. ಹೀಗಿದ್ದರೂ ಅವರಿಗೆ ಎಂತಹ ಸಂದೇಶವಾಣಿಯನ್ನು ಅಲ್ಲಾಹನು ಅವತೀರ್ಣಗೊಳಿಸಿದನೆಂದರೆ ಆ ಸಂದೇಶವಾಣಿಗಳನ್ನು "ಬಶಾರತ್" (ಶುಭವಾರ್ತೆ) ಎಂದು ಹೆಸರಿಸಿದನು. ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರು "ಲಮ್ ಯಬ್‌ಖ ಮಿನನ್ನುಬುವ್ವತಿ ಇಲ್ಲಲ್ ಮುಬಶ್ಶಿರಾತ್" (ನುಬುವ್ವತ್‌ನಲ್ಲಿ ಮುಬಶ್ಶಿರಾತ್ ಹೊರತು ಇನ್ನೇನೂ ಬಾಕಿಯಾಗಿ ಉಳಿದಿಲ್ಲ) ಎಂದು ಹೇಳಿದಾಗ ಹೀಗೆ ಸೂಚಿಸಿದ್ದರು: ನಾನು ಹೋಗುತ್ತೇನೆ. ಆದರೆ ಹಝ್ರತ್ ಮೂಸಾ ಅಲೈಹಿಸ್ಸಲಾಮರ ಸಮುದಾಯದಲ್ಲಿ ಜನಿಸಿದ ಮೂಸವೀ ಮಸೀಹರ ಹಾಗೆಯೇ ಶುಭ ವಾರ್ತೆಗಳನ್ನು ಪಡೆದ ಒಬ್ಬ ಮುಹಮ್ಮದೀ ಮಸೀಹರನ್ನು ನೀವು ಪ್ರತೀಕ್ಷಿಸಬೇಕು. ಬರಲಿರುವ ಆ ಮಸೀಹರು ನನ್ನ ಹೆಜ್ಜೆ ಗುರುತುಗಳಲ್ಲಿಯೇ ನಡೆದು ನನ್ನ ಪ್ರಕಾಶದಿಂದಲೇ ಪ್ರಕಾಶ ಪಡೆದು ಆಗಮಿಸುವರು.

ನೋಡಿರಿ ಇದು ಎಂತಹ ಸೂಕ್ಷ್ಮಜ್ಞಾನ ಭರಿತ ಹದೀಸು ಎಂದು. ನಮ್ಮ ಯಜಮಾನರಾದ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪವಿತ್ರ ನಾಲಗೆಯಿಂದ ಈ ನುಡಿಯು ಹೊರಟಿತ್ತು. ಅವರು ತನ್ನ ಈ ನುಡಿಯ ಮೂಲಕ ಹೀಗೆ ಭವಿಷ್ಯ ನುಡಿದಿದ್ದರು : ಹಝ್ರತ್ ಮೂಸಾ ಅಲೈಹಿಸ್ಸಲಾಮರ ನಂತರ ಅವರ ಶರೀಅತಿನ ಸೇವೆಗಾಗಿ ಒಬ್ಬ ಮಸೀಹರು ಆಗಮಿಸಿದ ಹಾಗೆಯೇ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮುದಾಯದಲ್ಲಿ ಒಬ್ಬ ಮುಹಮ್ಮದೀ ಮಸೀಹರು ಆಗಮಿಸುವರು. ಅವರಿಗೆ ಅಲ್ಲಾಹನು "ಬಶಾರತ್" ಅಥವಾ ಶುಭವಾರ್ತೆಗಳನ್ನು ದಯಪಾಲಿಸುವನು.

ಮೇಲೆ ಬರೆದುದರ ಸಾರಾಂಶವೇನೆಂದರೆ: ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹ್ ಅಲೈಹಿ ವಸಲ್ಲಮ್‌ರವರು ತನ್ನ ಕಾಲಕ್ಕೆ ಸಂಬಂಧಿಸಿ "ಮುಬಶ್ಶಿರಾತ್" ಎಂಬ ಪದಕ್ಕೆ ಸಾತ್ವಿಕ ಸ್ವಪ್ನಗಳು ಎಂಬ ಅರ್ಥ ಹೇಳಿದ್ದರು. ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲಕ್ಕೆ ಸಮೀಪದ ಕಾಲದಲ್ಲಿ ಪವಿತ್ರ ಖುರ್‌ಆನಿನ ಸಂದೇಶವಾಣಿಗಳ ಜೊತೆಗೆ ಬೇರೆ ಸಂದೇಶವಾಣಿಗಳು ಮಿಶ್ರವಾಗದಿರಲಿಯೆಂಬ ಉದ್ದೇಶದಿಂದ ಈ ರೀತಿ ಹೇಳಿದರು. ಆದರೆ ದೂರದ ಕಾಲಕ್ಕೆ ಸಂಬಂಧಿಸಿ ಇದೇ ಶಬ್ದವನ್ನು ಮೂಸವೀ ಮಸೀಹರಿಗೆ ಹೋಲಿಕೆಯನ್ನು ಪಡೆದ ಮುಹಮ್ಮದೀ ಮಸೀಹರ ಆಗಮನವನ್ನು ಸೂಚಿಸುವ ರೀತಿಯಲ್ಲಿ ಬಳಸಿದರು.

ನಮ್ಮ ವಿರೋಧಿಗಳು ಮೇಲಿಂದ ಮೇಲೆ ಮಾಡುವ ತರ್ಕಗಳನ್ನು ಕೈ ಬಿಟ್ಟು ಇಂತಹ ಸೂಕ್ಷ್ಮ ಸತ್ಯಗಳ ಕುರಿತು ಚಿಂತಿಸುತ್ತಿದ್ದರೆ ಎಷ್ಟು ಚೆನ್ನಾಗಿತ್ತು. ಪವಿತ್ರ ಖುರ್‌ಆನ್ ಮತ್ತು ಹದೀಸುಗಳು ಇಂತಹ ಸೂಕ್ಷ್ಮ ಜ್ಞಾನಗಳಿಂದ ತುಂಬಿವೆ.

## ನಕಾರಾತ್ಮಕ ಹದೀಸುಗಳ ಕುರಿತು ವಿಮರ್ಶೆ

ನಕಾರಾತ್ಮಕ ಹದೀಸುಗಳು ಎಂದರೆ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ನುಬುವ್ವತಿನ ಶೃಂಖಲೆ ಕೊನೆಗೊಂಡಿದೆ ಎಂದು ಬಾಹ್ಯವಾಗಿ ನೋಡಿದರೆ ತೋರುವಂತಹ ಹದೀಸುಗಳು. ಈ ಹದೀಸುಗಳು ವಿವಿಧ ರೀತಿಗಳಲ್ಲಿ ಇವೆ. ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರವರು ವಿವಿಧ ಶಬ್ದಗಳನ್ನು ಬಳಸಿದ್ದಾರೆ. ಕೆಲವು ಹದೀಸುಗಳಲ್ಲಿ ಹೀಗೆ ಹೇಳಲಾಗಿದೆ: " ಲಾ ನಬಿಯ್ಯ ಬಅ್‌ದೀ" (ನನ್ನ ನಂತರ ಯಾವ ಪ್ರವಾದಿಯೂ ಇಲ್ಲ). ಬೇರೊಂದು ಹದೀಸು ಹೀಗಿದೆ : "ಲೌಕಾನ ಬಅ್‌ದೀ ನಬಿಯ್ಯನ್ ಲಕಾನ ಉಮರ್" (ನನ್ನ ನಂತರ ಯಾರಾದರೂ ಪ್ರವಾದಿ ಆಗಬಹುದಾಗಿದ್ದರೆ ಉಮರ್ ಪ್ರವಾದಿ ಆಗುತ್ತಿದ್ದರು). ಇನ್ನೊಂದು ಹದೀಸು ಹೀಗಿದೆ: "ಇನ್ನೀ ಆಖಿರುಲ್ ಅಂಬಿಯಾ" ( ನಾನು ಅಂತಿಮ ಪ್ರವಾದಿ ಆಗಿದ್ದೇನೆ). ಮತ್ತೊಂದು ಹದೀಸು ಹೀಗಿದೆ : "ಮಿಸ್‌ಲೀ ವ ಮಿಸ್‌ಲು ಅಂಬಿಯಾಯಿ ಮಿನ್‌ಖಬ್‌ಲೀ...." (ನನ್ನ ಮತ್ತು ನನಗಿಂತ ಮುಂಚೆ ಆಗಮಿಸಿದ ಪ್ರವಾದಿಗಳ ಉದಾಹರಣೆ ಒಂದು ಮನೆಯ ಹಾಗಿದೆ. ಅದರಲ್ಲಿ ಒಂದು ಇಟ್ಟಿಗೆಯ ಸ್ಥಳ ಬಾಕಿಯಾಗಿ ಉಳಿದಿತ್ತು. ನನ್ನ ಆಗಮನದಿಂದ ಆ ಇಟ್ಟಿಗೆಯ ಸ್ಥಾನ ಭರ್ತಿಯಾಯಿತು). ಮಗದೊಂದು ಹದೀಸು ಹೀಗಿದೆ: " ಇನ್ನರ್ರಿಸಾಲತ ವನ್ನುಬುವ್ವತ ಖದಿಂಖತಅತ್" (ಈಗ ರಿಸಾಲತ್ ಮತ್ತು ನುಬುವ್ವತ್ ಶೃಂಖಲೆ ಕೊನೆಗೊಂಡಿದೆ).

ಬೇರೊಂದು ಹದೀಸು ಹೀಗಿದೆ : **"ಸಲಾಸೂನ ದಜ್ಜಾಲೂನ ಕಝ್ಝಾಬೂನ ಕುಲ್ಲುಹುಮ್ ಯಝ್‌ಉಮು ಅನ್ನಹು ನಬಿಯ್ಯುನ್"** (ನನ್ನ ನಂತರ ಮೂವತ್ತು ಸುಳ್ಳುಗಾರರಾದ ದಜ್ಜಾಲರು ಆಗಮಿಸುವರು. ಪ್ರತಿಯೊಬ್ಬ ತಾನು ಪ್ರವಾದಿಯೆಂದು ವಾದಿಸುವನು)

ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ನಂತರ ಎಲ್ಲಾ ವಿಧ ನುಬುವ್ವತ್‌ಗಳ ಬಾಗಿಲು ಪೂರ್ಣವಾಗಿ ಮುಚ್ಚಲ್ಪಟ್ಟಿದೆ ಎಂದು ಭಾವಿಸಿ ಅದಕ್ಕೆ ಆಧಾರವಾಗಿ ನೀಡುವ ಹದೀಸುಗಳು ಮೇಲಿನವುಗಳಾಗಿವೆ.

ಈ ಹದೀಸುಗಳು ಎಷ್ಟರ ಮಟ್ಟಿಗೆ ವಿಶ್ವಾಸಾರ್ಹ ಆಗಿವೆ ಅಥವಾ ವಿಶ್ವಾಸಾರ್ಹವಾಗಿಲ್ಲ ಎಂಬ ವಿಷಯದ ಕುರಿತು ನಾನಿಲ್ಲಿ ಪ್ರಸ್ತಾಪಿಸುವುದಿಲ್ಲ; ಅದಕ್ಕೆ ಇಲ್ಲಿ ಸ್ಥಳಾವಕಾಶವೂ ಇಲ್ಲ. ಆದರೆ ನಮ್ಮ ವಿರೋಧಿಗಳು ಮೇಲಿನ ಹದೀಸುಗಳನ್ನು ಆಧಾರವಾಗಿಟ್ಟುಕೊಂಡು ಯಾವ ರೀತಿ ನಿಷ್ಕರ್ಷೆ ಮಾಡುತ್ತಾರೋ ಆ ರೀತಿ ನಿಷ್ಕರ್ಷೆ ಮಾಡುವುದು ಖಂಡಿತವಾಗಿಯೂ ಸರಿಯಲ್ಲ ಎಂದು ನಾನು ಇನ್‌ಶಾ ಅಲ್ಲಾಹ್ ಇನ್ನು ಮುಂದೆ ಸಾಬೀತು ಗೊಳಿಸುವೆನು.

ಈ ಹದೀಸುಗಳ ಕುರಿತು ಗಾಢವಾಗಿ ಚಿಂತಿಸಿದರೆ ತಿಳಿಯುವುದೇನೆಂದರೆ - ಶರೀಅತ್ ತರುವಂತಹ ಮತ್ತು ಸ್ವತಂತ್ರ ರೂಪದ ನುಬುವ್ವತ್ ನಿಸ್ಸಂಶಯವಾಗಿಯೂ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಆಗಮನದ ನಂತರ ಕೊನೆಗೊಂಡಿದೆ. ಆದರೆ ಮುಹಮ್ಮದೀ ನಂಬುವ್ವತಿನ ಪ್ರತಿಬಿಂಬವಾಗಿರುವ ಮತ್ತು ಅದರ ಭಾಗವೇ ಆಗಿರುವ ಉಮ್ಮತೀ ನುಬುವ್ವತಿನ ಬಾಗಿಲನ್ನು ಮುಚ್ಚುವ ಒಂದೇ ಒಂದು ಹದೀಸು ಸಹ ಇಂತಹ ನಕಾರಾತ್ಮಕ ಹದೀಸುಗಳಲ್ಲಿ ಇಲ್ಲ.

ಬೇರೆ ಬೇರೆ ಹದೀಸುಗಳ ಕುರಿತು ಸುವಿಸ್ತಾರವಾಗಿ ವಿವರಿಸುವ ಮೊದಲು ಈ ಹದೀಸುಗಳ ಕುರಿತು ಒಂದು ಸೈದ್ಧಾಂತಿಕ ವಿವರಣೆ ನೀಡಲು ಬಯಸುತ್ತೇನೆ. ಇದು ಈ ಸಂಗತಿಯನ್ನು ಮನವರಿಕೆ ಮಾಡಲು ಸಹಾಯಕವಾಗಬಹುದೆಂದು ನಾನು ಆಶಿಸುತ್ತೇನೆ.

## ಹದೀಸುಗಳು ಪರಸ್ಪರ ವಿರುದ್ಧವಾಗಿವೆ ಎಂದು ಭಾಸವಾದರೆ ಅವುಗಳ ಮಧ್ಯೆ ಇರುವ ವೈರುಧ್ಯವನ್ನು ದೂರ ಸರಿಸಲು ಕೈಗೊಳ್ಳಬೇಕಾದ ರೀತಿ

ಪ್ರವಾದಿತ್ವ ಸಮಾಪ್ತಿ ಅಥವಾ ಖತ್‌ಮೆ ನುಬುವ್ವತ್ ವಿಷಯಕ್ಕೆ ಸಂಬಂಧಿಸಿ ನಾವು ಕೆಲವು ಹದೀಸುಗಳನ್ನು ನಿಮ್ಮ ಮುಂದೆ ಇಟ್ಟಿದ್ದೇವೆ. ಅವುಗಳ ಮೂಲಕ ನುಬುವ್ವತಿನ ಬಾಗಿಲು ತೆರೆದಿರುವುದು ಸಾಬೀತಾಗುತ್ತದೆ. ನಮ್ಮನ್ನು ವಿರೋಧಿಸುವವರು ಕೆಲವು ಹದೀಸುಗಳನ್ನು ಮುಂದೆ ಇರಿಸುತ್ತಾರೆ. ಅವುಗಳಿಂದ ನುಬುವ್ವತಿನ ಬಾಗಿಲು ಮುಚ್ಚಿರುವ ಹಾಗೆ ಬಾಹ್ಯವಾಗಿ ತೋರುತ್ತದೆ. ಬಾಹ್ಯವಾಗಿ ನೋಡಿದರೆ ಇದು ಎಂತಹ ಪರಸ್ಪರ ವಿರೋಧವಾಗಿರುವ ಸಂಗತಿ ಎಂದರೆ ಈ ವೈರುಧ್ಯವನ್ನು ಪರಿಹರಿಸದಿದ್ದರೆ ನಮ್ಮ ಯಜಮಾನರಾದ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಕುರಿತು ಆಕ್ಷೇಪ ಉಂಟಾಗುತ್ತದೆ. (ಇಂತಹ ಆಕ್ಷೇಪಗಳನ್ನು ಮಾಡುವುದರಿಂದ ಅಲ್ಲಾಹನು ನಮ್ಮನ್ನು ರಕ್ಷಿಸಲಿ). ಹದೀಸುಗಳು ಪರಸ್ಪರ ವಿರೋಧವಾಗಿ ಇವೆ ಎಂದು ಭಾವಿಸುವುದರ ಅರ್ಥ ಹೀಗಾಗುತ್ತದೆ : ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಒಮ್ಮೆ ಹೇಳಿದರು - " ನನ್ನ ಅನಂತರ ಯಾವ ಪ್ರವಾದಿಯೂ ಇಲ್ಲ; ಇನ್ನೊಮ್ಮೆ ಹೇಳಿದರು - " ನನ್ನ ಅನಂತರ ಸಹ ಪ್ರವಾದಿ ಬರಬಹುದು" ಎಂದು. ಒಮ್ಮೆ ಹೇಳಿದರು - " ನಾನು ಕೊನೆಯ ಪ್ರವಾದಿ" ಎಂದು; ಇನ್ನೊಮ್ಮೆ ಹೇಳಿದರು - " ನನ್ನ ಸಮುದಾಯದಲ್ಲಿ ನನ್ನ ಅನಂತರ ಒಬ್ಬ ಮಸೀಹ್ ಬರಲಿರುವರು; ಆ ಮಸೀಹ್ ಪ್ರವಾದಿ ಆಗಿರುವರು" ಎಂದು.

ಬಾಹ್ಯವಾಗಿ ಪರಸ್ಪರ ವಿರುದ್ಧ ಎಂದು ತೋರುವ ಈ ಮಾತುಗಳನ್ನು ಅರ್ಥ ಮಾಡಿಕೊಳ್ಳಲು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕಾದುದು ಅತ್ಯಾವಶ್ಯಕವಾಗಿದೆ. ನಮ್ಮ ಮತ್ತು ಇತರ ಮುಸ್ಲಿಮರೆಲ್ಲರ ಸಾಮೂಹಿಕ ಹೊಣೆಗಾರಿಕೆ ಏನೆಂದರೆ ನಾವು ಬಹಳ ಸದ್ಭಾವನೆಯಿಂದ ಮತ್ತು ನಿಷ್ಕಳಂಕರಾಗಿ ಈ ಸಂಗತಿ ಕುರಿತು ಚಿಂತಿಸಬೇಕು. ಮೇಲಿಂದ ಮೇಲೆ ನೋಡಿದರೆ ವೈರುಧ್ಯವನ್ನು ಕಾಣಬಹುದಾದರೂ ಯಥಾರ್ಥವಾಗಿ ಯಾವುದೇ ವಿರೋಧಾಭಾಸ ನಮ್ಮ ಯಜಮಾನರಾದ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ನುಡಿಗಳಲ್ಲಿ ಇರಲು ಸಾಧ್ಯವಿಲ್ಲ. ಆದುದರಿಂದ ನಾವು ಒಟ್ಟುಗೂಡಿ ಈ ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸಬೇಕು. ಪ್ರತಿಯೊಬ್ಬ ವಿವೇಕಶಾಲಿ ನಮ್ಮ ಈ ನಿಲುವಿನ ಬಗ್ಗೆ ಒಮ್ಮತ ಸೂಚಿಸುವರೆಂದು ನಾವು ಆಶಿಸುತ್ತೇವೆ.

ಈ ಹದೀಸುಗಳಲ್ಲಿ ಬಾಹ್ಯವಾಗಿ ತೋರುವ ವೈರುಧ್ಯವನ್ನು ದೂರೀಕರಿಸಲು ಈ ಕೆಳಗಿನ ಎರಡೇ ಎರಡು ದಾರಿಗಳು ಮಾತ್ರ ಇವೆ:

ಪ್ರಥಮ ದಾರಿ ಇದಾಗಿದೆ : ಎಲ್ಲಾ ಹದೀಸುಗಳ ಮೇಲೆ ನ್ಯಾಯಾಧೀಶನ ಸ್ಥಾನದಲ್ಲಿ ಇರುವುದು ಪವಿತ್ರ ಖುರ್‌ಆನ್ ಆಗಿದೆ. ಆದುದರಿಂದ ಈ ಹದೀಸುಗಳನ್ನು ಪವಿತ್ರ ಖುರ್‌ಆನಿನ ಮುಂದೆ ಇರಿಸಿ ಪವಿತ್ರ ಖುರ್‌ಆನ್ ಈ ಹದೀಸುಗಳ ಬಗ್ಗೆ ಏನು ಹೇಳುತ್ತದೆ ಎಂದು ತಿಳಿಯಬೇಕು. ಯಾವ ಹದೀಸು ಪವಿತ್ರ ಖುರ್‌ಆನಿಗೆ ಅನುಸಾರವಾಗಿ ಇದೆಯೋ ಅದನ್ನು ಸ್ವೀಕರಿಸಬೇಕು. ಪವಿತ್ರ ಖುರ್‌ಆನಿಗೆ ವಿರುದ್ಧವಾಗಿರುವುದನ್ನು ತಿರಸ್ಕರಿಸಬೇಕು. ಈ ಸಿದ್ಧಾಂತವನ್ನು ಪವಿತ್ರ ಖುರ್‌ಆನ್ ಸ್ವತಃ ನಮ್ಮ ಮುಂದೆ ಹೀಗೆ ಇರಿಸಿದೆ.

فَبِأَيِّ حَدِيثٍ بَعْدَ اللَّهِ وَآيَاتِهِ يُؤْمِنُونَ ۝

**"ಅಲ್ಲಾಹನ ಮತ್ತು ಅವನ ವಚನಗಳ ವಿರುದ್ಧವಾಗಿ ಜನರು ಯಾವ ಮಾತನ್ನು ನಂಬುವರು?"** (45 :7)

ನಮ್ಮ ವಿರೋಧಿಗಳು ಈ ಶುಭ್ರವಾದ ಮತ್ತು ನೇರವಾದ ದಾರಿಯನ್ನು ಅಂಗೀಕರಿಸುವುದಿಲ್ಲವಾದರೆ ಅವರು ಅವಲಂಬಿಸಬಹುದಾದ ಎರಡನೆಯ ದಾರಿ ಇದಾಗಿದೆ :

ಕೆಲವು ಹದೀಸುಗಳು ಕೃತಕವೂ ನಿರ್ಮಿತವೂ ಆಗಿವೆ. ಅಂತಹ ಹದೀಸುಗಳನ್ನು ಕೈಬಿಟ್ಟು ಉಳಿದ ಎಲ್ಲಾ ಹದೀಸುಗಳನ್ನು ತೆಗೆದುಕೊಂಡು ಅವುಗಳು ಪರಸ್ಪರ ವಿರುದ್ಧವಾಗಿವೆ ಎಂದು ಬಾಹ್ಯವಾಗಿ ತೋರುವುದಾದರೂ

ಯಾವುದಾದರೂ ರೀತಿಯಲ್ಲಿ ಹೊಂದಾಣಿಕೆಗೆ ಪ್ರಯತ್ನಿಸಬೇಕು. ನುಬುವ್ವತ್ ಜಾರಿಯಲ್ಲಿದೆ ಎಂದು ಸೂಚಿಸುವ ಹದೀಸು ಯಾವ ರೀತಿಯಲ್ಲಿ ನುಬುವ್ವತ್ ಜಾರಿಯಲ್ಲಿವೆ ಎಂದು ಸೂಚಿಸುತ್ತದೆ ಎಂದು ಪರಿಶೀಲಿಸಬೇಕು. ನುಬುವ್ವತ್ ಜಾರಿಯಲ್ಲಿರುವುದನ್ನು ನಿರಾಕರಿಸುವ ಹದೀಸು ಯಾವ ಅರ್ಥದಲ್ಲಿ ನಿರಾಕರಿಸುತ್ತದೆ ಎಂಬುದನ್ನು ಪರಿಶೀಲಿಸಬೇಕು. ಈ ಮಾರ್ಗವನ್ನು ಅವಲಂಬಿಸಿದರೆ ಯಾವುದೇ ದೀರ್ಘ ಚರ್ಚೆ ಇಲ್ಲದೆ ಎರಡು ವಿಧಗಳ ಹದೀಸುಗಳನ್ನು ಅಂಗೀಕರಿಸಲು ಸುಲಭ ಸಾಧ್ಯವಾಗುವುದು.

## ಪವಿತ್ರ ಖುರ್‌ಆನಿನ ತೀರ್ಪು ನಮ್ಮ ಪರವಾಗಿದೆ

ಹದೀಸುಗಳಲ್ಲಿ ಬಾಹ್ಯವಾಗಿ ತೋರುವ ವೈರುಧ್ಯಗಳನ್ನು ಹೋಗಲಾಡಿಸಲು ಮೇಲೆ ವಿವರಿಸಿದ ಎರಡು ದಾರಿಗಳನ್ನೇ ಅವಲಂಬಿಸಬೇಕಾಗಿದೆ. ಪ್ರತಿಯೊಬ್ಬ ಸತ್ಯಸಂಧನಾದ ಮುಸ್ಲಿಮ್ ಈ ಬಗ್ಗೆ ಅತ್ಯಂತ ಶ್ರದ್ಧೆಯಿಂದಲೂ ಪ್ರಾಮಾಣಿಕತೆಯಿಂದಲೂ ಚಿಂತಿಸಬೇಕು. ಏಕೆಂದರೆ ಇದು ಈಮಾನಿಗೆ (ವಿಶ್ವಾಸಕ್ಕೆ) ಸಂಬಂಧಿಸಿದ ಸಂಗತಿಯಾಗಿದೆ. ಇದು ಪ್ರತಿಯೊಬ್ಬ ಮುಸ್ಲಿಮನಿಗೆ ಕಡ್ಡಾಯವಾದ ಕರ್ತವ್ಯವಾಗಿದೆ.

ಪವಿತ್ರ ಖುರ್‌ಆನ್ ಈ ಬಗ್ಗೆ ಸ್ಪಷ್ಟವಾಗಿ ಹೇಳಿದೆ. ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ನಂತರ ನುಬುವ್ವತ್ ಶೃಂಖಲೆ ಕೊನೆಗೊಂಡಿದೆ ಎಂದು ಸೂಚಿಸುವ ಒಂದೇ ಒಂದು ವಚನವಾಗಲೀ ವಚನದ ಭಾಗವಾಗಲೀ ಪವಿತ್ರ ಖುರ್‌ಆನ್‌ನಲ್ಲಿ ಇಲ್ಲ. ಪವಿತ್ರ ಖುರ್‌ಆನ್‌ನಲ್ಲಿ ಎಲ್ಲ ಕಡೆಗಳಲ್ಲಿಯೂ ಹೇಳಿರುವುದೇನೆಂದರೆ- ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಆಗಮನದ ನಂತರ ಅಲ್ಲಾಹನ ಅನುಗ್ರಹಗಳ ಮತ್ತು ಕಾರುಣ್ಯಗಳ ಬಾಗಿಲುಗಳು ಹಿಂದೆ ಇದ್ದುದಕ್ಕಿಂತಲೂ ಹೆಚ್ಚು ವಿಶಾಲವಾಗಿ ತೆರೆದಿವೆ.

ನಮ್ಮ ವಿರೋಧಿಗಳು ಖಾತಮುನ್ನಬಿಯ್ಯೀನ್ ಎಂಬ ಒಂದೇ ಒಂದು ವಚನವನ್ನು ನಮ್ಮ ಮುಂದಿರಿಸುತ್ತಾರೆ. ಆದರೆ ಈ ವಚನವು ನುಬುವ್ವತ್ ಶೃಂಖಲೆಯನ್ನು ಕೊನೆಗೊಳಿಸಿದುದಾಗಿ ಪ್ರಸ್ತಾಪಿಸುವುದಿಲ್ಲ ಎಂದು ನಾವು ಈ ಮೊದಲೇ ಸಾಬೀತುಗೊಳಿಸಿರುವೆವು. ಈ ವಚನ ಸ್ಪಷ್ಟಪಡಿಸುವುದೇನೆಂದರೆ - ಹಿಂದಿನ ಕಾಲದಲ್ಲಿ ಪ್ರವಾದಿಗಳಿಗೆ ಪ್ರವಾದಿತ್ವವೆಂಬ ಪಾರಿತೋಷಕ ನೇರವಾಗಿ ಲಭಿಸುತ್ತಿತ್ತು. ಆದರೆ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮರ ಆಗಮನದ ನಂತರ, ಅವರ ಅತ್ಯುನ್ನತ ಪದವಿ ಮತ್ತು ಅವರು ಪರಿಪೂರ್ಣವಾಗಿ ಅಲ್ಲಾಹನಿಂದ ಅನುಗ್ರಹೀತರಾದ ಕಾರಣ ಅವರನ್ನು ಅನುಸರಿಸದೆ ಮತ್ತು ಅವರ ಶಿಷ್ಯತ್ವವನ್ನು ಪಡೆಯದೆ ಮತ್ತು ಅವರ ಅಂಗೀಕಾರದ ಮುದ್ರೆಯನ್ನು ಗಳಿಸದೆ ಯಾರಿಗೂ ನುಬುವ್ವತ್ ಪದವಿ ದೊರಕಲಾರದು.

ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಆಗಮನದ ನಂತರ ನುಬುವ್ವತ್ ಶೃಂಖಲೆ ಕೊನೆಗೊಂಡಿದೆ ಎಂದು ಪವಿತ್ರ ಖುರ್‌ಆನಿನ ಯಾವುದೇ ವಚನ ಸೂಚಿಸುವುದಿಲ್ಲ ಎಂದು ನಾವು ಪುನಃ ಹೇಳ ಬಯಸುತ್ತೇವೆ. ಪವಿತ್ರ ಖುರ್‌ಆನಿನ ಆರಂಭದಲ್ಲಿಯೇ ಅಲ್ಲಾಹನು ಬಹಳ ಜಾಣ್ಮೆಯಿಂದ ಸೂಚಿಸಿರುವುದೇನೆಂದರೆ - ಇತರ ಜನಾಂಗಗಳಿಗೆ ಬೇರೆ ಬೇರೆ ಅನುಗ್ರಹಗಳು ದೊರೆತಿದ್ದುವು. ಆ ಅನುಗ್ರಹಗಳೆಲ್ಲವೂ ಸಮಗ್ರವಾಗಿ ಯಾವುದೇ ಕೊರತೆಗೊಳಗಾಗದೆ ಮುಸ್ಲಿಮ್ ಸಮುದಾಯಕ್ಕೆ ಪರಿಪೂರ್ಣವಾಗಿ ದೊರಕುವುವು.

ಇಂತಹ ವಿಶಾಲವಾದ ಅನುಗ್ರಹದ ನಿಲುವನ್ನು ಪ್ರತಿಪಾದಿಸುತ್ತಾ ಪ್ರಾರಂಭಿಸುವ ಆ ಪರಿಪೂರ್ಣ ಗ್ರಂಥವು ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಆಗಮನವು ಅಲ್ಲಾಹನ ಅನುಗ್ರಹದ ವಿಶಾಲವಾದ ನದಿಯನ್ನು ಒಣಗಿಸಿ ಬಿಟ್ಟಿದೆ ಎಂಬ ಸಂಕುಚಿತ ನಿಲುವನ್ನು ಹೇಗೆ ತಾನೆ ಅನುಮೋದಿಸಬಲ್ಲದು ?

## ಹದೀಸುಗಳಲ್ಲಿ ಯಥಾರ್ಥವಾಗಿ ಯಾವುದೇ ವೈರುಧ್ಯವಿಲ್ಲ

ಹದೀಸುಗಳಲ್ಲಿ ಕಾಣುವ ವಿರೋಧಾಭಾಸ ಕೇವಲ ಬಾಹ್ಯವಾಗಿ ಮಾತ್ರ ಕಾಣುವುದಾಗಿದೆ. ವಾಸ್ತವಿಕವಾಗಿ ಯಾವುದೇ ವಿರೋಧಾಭಾಸ ಇರುವುದಿಲ್ಲ. ನಾವು ನಿಮ್ಮ ಮುಂದೆ ಇರಿಸುವ ಕೆಲವು ಹದೀಸುಗಳಿಂದ, ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ನಂತರ ಅವರ ಧರ್ಮದ ಸೇವೆಗಾಗಿ, ಅವರ ಸಮುದಾಯಕ್ಕೆ ಸೇರಿದ ಅವರ ಸೇವಕರಿಂದಲೇ, ಅವರಿಂದ ಪ್ರಕಾಶ ಪಡೆದು, ಅವರ ಪ್ರತಿಬಿಂಬದ ಹಾಗೆ ರೂಪ ಪಡೆದು ಓರ್ವ ವ್ಯಕ್ತಿ ನುಬುವ್ವತಿನ ಸ್ಥಾನವನ್ನು ತಲಪಬಹುದು ಎಂದು ಸಾಬೀತಾಗುತ್ತದೆ. ಬೇರೆ ಕೆಲವು ಹದೀಸುಗಳನ್ನು ವಿರೋಧ ಪಕ್ಷದ ಜನರು ನಮ್ಮ ಮುಂದಿರಿಸುತ್ತಾರೆ. ಆ ಹದೀಸುಗಳನ್ನು ಬಾಹ್ಯವಾಗಿ ನೋಡಿದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ಯಾವುದೇ ಪ್ರವಾದಿ ಬರಲಾರರು ಮತ್ತು ಅವರು ಕೊನೆಯ ಪ್ರವಾದಿ ಆಗಿರುವರು ಎಂದು ಭಾಸವಾಗುತ್ತದೆ. ಬಾಹ್ಯವಾಗಿ ನೋಡಿದರೆ ಇದು ಬಹಳ ದೊಡ್ಡ ವಿರೋಧಾಭಾಸವಾಗಿದೆ. ಆದರೆ ಮಿತ್ರರೇ, ಬಂಧುಗಳೇ, ನಮಗೆ ಮತ್ತು ನಿಮಗೆ ಯಜಮಾನರಾಗಿರುವವರ ಹೆಸರು ಹೇಳುವವರೇ, ಅಲ್ಲಾಹನು ನಿಮ್ಮ ಕಣ್ಣುಗಳನ್ನು ತೆರೆಯಲಿ. ಈ ವಿರೋಧಾಭಾಸವನ್ನು ಈ ಕೆಳಗಿನ ರೀತಿ ಹೋಗಲಾಡಿಸಲು ಸಾಧ್ಯವಿಲ್ಲವೇ? ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರು "ಲಾ ನಬಿಯ್ಯ ಬಅ್‌ದೀ" ಮತ್ತು "ಇನ್ನೀ ಆಖಿರುಲ್ ಅಂಬಿಯಾ" ಎಂದು ಹೇಳಿದಾಗ ಅವರ ಉದ್ದೇಶ: "ನನ್ನ ಅನಂತರ ನನ್ನಿಂದ ಸ್ವತಂತ್ರನಾಗಿ, ನನ್ನ ಶರೀಅತನ್ನು ರದ್ದುಗೊಳಿಸಿ, ನನ್ನ ನುಬುವ್ವತಿನಿಂದ ದೂರ ಸರಿದು ನಬಿಯಾಗಿ ಯಾರೂ ಬರಲಾರರು. ಇದೇ ಅರ್ಥದಲ್ಲಿ ನಾನು ಕೊನೆಯ ಪ್ರವಾದಿ ಆಗಿದ್ದೇನೆ. ನನ್ನ ಅನಂತರ ಪ್ರವಾದಿ ಇಲ್ಲ" ಎಂದಾಗಿದೆ.

ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರು "ನನ್ನ ಸಮುದಾಯದಲ್ಲಿ ನನ್ನ ಅನಂತರ ನಬಿ ಬರಬಹುದು. ನನ್ನ ಸಮುದಾಯದಲ್ಲಿ ಬರಲಿರುವ ವಾಗ್ದತ್ತ ಮಸೀಹ್ ನಬಿಯಾಗಿರುವರು" ಎಂದು ಹೇಳಿದುದರ ಉದ್ದೇಶ: "ನನ್ನ ಶರೀಅತಿನ ಸೇವಕನಾಗಿ, ನನ್ನ ಪ್ರಕಾಶದಿಂದ ಪ್ರಕಾಶವನ್ನು ಪಡೆದು, ನನ್ನ ಸೂರ್ಯನೊಂದಿಗೆ ಚಂದ್ರನ ಹಾಗೆ ಸಂಬಂಧ ಸ್ಥಾಪಿಸಿ ನನ್ನ ಆಧ್ಯಾತ್ಮಿಕ ಪುತ್ರನಾಗಿ ನುಬುವ್ವತ್ ಪಡೆಯಬಹುದು" ಎಂದಾಗಿದೆ. ಇಂತಹ ವ್ಯಕ್ತಿ ನುಬುವ್ವತ್ ಪಡೆದರೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಆಖಿರೀ ನಬಿ (ಕೊನೆಯ ಪ್ರವಾದಿ) ಆಗಿಯೇ ಇರುತ್ತಾರೆ ಹಾಗೂ "ಲಾ ನಬಿಯ್ಯ ಬಅ್‌ದೀ" (ನನ್ನ ನಂತರ ಪ್ರವಾದಿ ಇಲ್ಲ) ಎಂಬ ಅರ್ಥಕ್ಕೆ ಚ್ಯುತಿ ಉಂಟಾಗುವುದಿಲ್ಲ. ಏಕೆಂದರೆ ಶಾಖೆ ಅದರ ಬೇರಿನಿಂದ ಬೇರೆಯಾಗಿರುವುದಿಲ್ಲ;

ನೆರಳು ಅದರ ಮೂಲವಸ್ತುವಿನಿಂದ ಬೇರೆಯಾಗಿ ಇರುವುದಿಲ್ಲ.

## ನಾವು ಸೈದ್ಧಾಂತಿಕವಾಗಿ ಎಲ್ಲಾ ಹದೀಸುಗಳನ್ನು ಅಂಗೀಕರಿಸುತ್ತೇವೆ.

ನೋಡಿರಿ, ಹದೀಸುಗಳ ಬಾಹ್ಯ ವಿರೋಧಾಭಾಸವನ್ನು ಮೇಲಿನಂತೆ ಚಿಂತಿಸಿ ಪರಿಹರಿಸಬಹುದು. ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರತಿಯೊಂದು ಹದೀಸು ನಮ್ಮ ಕಣ್ಣಿಗೆ ತಂಪೆರೆಯುವಂತಹದು ಮತ್ತು ನಮ್ಮ ಹೃದಯಕ್ಕೆ ಸಮಾಧಾನ ನೀಡುವುದು ಆಗಿರುತ್ತದೆ. ಇಲ್ಲಿ ಯಾವುದೇ ಹೆಚ್ಚಿನ ವಾಗ್ವಾದಗಳ ಆವಶ್ಯಕತೆ ಇಲ್ಲ. ಈ ಹದೀಸುಗಳು ಬಲಹೀನವಾಗಿವೆ; ಸರಿಯಾಗಿ ಇರುವುದಿಲ್ಲ ಎಂಬುದರ ಕುರಿತು ಕೆಲವು ಜನರು ದೀರ್ಘವಾಗಿ ವಾಗ್ವಾದ ಮಾಡಿರುವರೆಂದು ನನಗೆ ಗೊತ್ತಿದೆ. ಈ ರಂಗದಲ್ಲಿ ಪ್ರವೇಶಿಸುವುದರಿಂದ ಸಾಕಷ್ಟು ಚರ್ಚೆಯ ಮಾರ್ಗಗಳು ತೆರೆಯಲ್ಪಡುತ್ತವೆ ಎಂದೂ ನನಗೆ ತಿಳಿದಿದೆ. ಆದರೆ ನಾನು ಇದರ ಮೊದಲು ಬರೆದ ಹಾಗೆ ಈ ಬಗ್ಗೆ ಚರ್ಚೆ ಮಾಡಲು ಇಚ್ಛಿಸುವುದಿಲ್ಲ. ನಾನು ಸಾಕ್ಷ್ಯಾಧಾರವಾಗಿ ಈ ಎಲ್ಲಾ ಹದೀಸುಗಳನ್ನು ಅಂಗೀಕರಿಸುತ್ತೇನೆ. ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ "ಇನ್ನೀ ಆಖಿರುಲ್ ಅಂಬಿಯಾ" (ನಿಶ್ಚಯವಾಗಿಯೂ ನಾನು ಕೊನೆಯ ಪ್ರವಾದಿ ಆಗಿರುವೆನು) ಎಂದು ಹೇಳಿದುದನ್ನು ನಾನು ಒಪ್ಪುತ್ತೇನೆ. ಆದರೆ ಈ ಹದೀಸಿಗೆ, ಹಝ್ರುತ್ ಪೈಗಂಬರರ ಬೇರೆ ಹದೀಸಿಗೆ ವಿರುದ್ಧವಾಗಿರುವ ರೀತಿಯಲ್ಲಿ ಅರ್ಥವನ್ನು ಹೇಳಲಾರೆ. ಹಝ್ರುತ್ ಪೈಗಂಬರರ ಘನತೆಗೆ ಕುಂದುಂಟಾಗುವ ರೀತಿಯಲ್ಲಿ ಕೂಡ ನಾನು ಅರ್ಥವನ್ನು ಹೇಳಲಾರೆನು.

ನಾನು ಈ ಹದೀಸ್‌ಗಳನ್ನು ಒಪ್ಪುತ್ತೇನೆ. ಅದರೊಂದಿಗೆ ಬೇರೆ ಹದೀಸುಗಳನ್ನೂ ನಾನು ಸರಿ ಎಂದು ಒಪ್ಪುತ್ತೇನೆ. ಆ ಹದೀಸುಗಳಲ್ಲಿ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಶಿಷ್ಯರಾಗಿರುವ ಪ್ರವಾದಿ ಬರಬಹುದು ಮತ್ತು ಬರಲಿರುವ ಪ್ರವಾದಿ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಆಧ್ಯಾತ್ಮಿಕ ಪುತ್ರರಾಗಿ ಬರುವರು ಎಂದು ಪ್ರಸ್ತಾಪಿಸಲಾಗಿದೆ. ಈ ರೀತಿ ನಾನು ಎರಡು ವಿಧಗಳಲ್ಲಿರುವ ಹದೀಸುಗಳನ್ನು ಅಂಗೀಕರಿಸುತ್ತೇನೆ. ನಾನು ಹೇಳುವ ಅರ್ಥವನ್ನು ಸ್ವೀಕರಿಸಿದರೆ ಹದೀಸುಗಳ ಮಧ್ಯೆ ಬಾಹ್ಯವಾಗಿ ತೋರುವ ವಿರೋಧಾಭಾಸವನ್ನು ದೂರ ಸರಿಸಬಹುದು ಮತ್ತು ನಮ್ಮ ಯಜಮಾನರಾದ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಉನ್ನತ ಸ್ಥಾನ ಇನ್ನಷ್ಟು ಭವ್ಯವಾಗಿ ಕಾಣಿಸಿಕೊಳ್ಳುವುದು. ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಸೇವಕರು ಸಹ ಅವರನ್ನು ಅನುಸರಿಸುವ ಮೂಲಕ ಪ್ರವಾದಿ ಸ್ಥಾನ ಪಡೆಯಬಲ್ಲರು ಎಂಬುದು ಅವರ ಭವ್ಯ ಪದವಿಯನ್ನು ಸ್ಪಷ್ಟಗೊಳಿಸುತ್ತದೆ. ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಹೀಗೆ ಹೇಳಿದ್ದರು:

لوكان موسٰى وعيسٰى حيّين لما وسعهما إلّا اتّباعي۔

(اليواقيت والجواهر مرتبہ امام شعرانی جلد ۲ صفحہ ۲۰)

**ಲೌಕಾನ ಮೂಸಾ ವ ಈಸಾ ಹಯ್ಯಯ್‌ನಿ ಲಮಾ ವಸಿಅಹುಮಾ ಇಲ್ಲತ್ತಿಬಾಈ**

**" ಈಗ ಮೂಸಾ ಮತ್ತು ಈಸಾ ಜೀವಿಸಿರುತ್ತಿದ್ದರೆ ಅವರು ನನ್ನನ್ನು ಅನುಸರಿಸದೆ ಇರಲು ಸಾಧ್ಯವಿರುತ್ತಿರಲಿಲ್ಲ".**

(ಅಲ್‌ಯವಾಖೀತು ವಲ್ ಜವಾಹಿರ್. ಲೇಖಕ : ಇಮಾಮ್ ಶಿಅರಾನಿ. ಸಂಪುಟ 2 ಪುಟ 20)

ಒಬ್ಬ ಮುಸ್ಲಿಮೇತರನು- "ಇದು ಬಾಯಿಮಾತಿನ ಒಂದು ವಾದವಾಗಿದೆ. ಇದಕ್ಕೆ ಆಧಾರವೇನೂ ಇಲ್ಲ" ಎಂದು ಹೇಳಬಹುದು. ಅಲ್ಲಾಹನು ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸೇವಕರಲ್ಲಿ ಒಬ್ಬನನ್ನು ಮಸೀಹರಿಗೆ ಸಮಾನರನ್ನಾಗಿ ಮಾಡಿ ಅವರಿಗೆ ನುಬುವ್ವತ್ ಪದವಿ ನೀಡಿ, ತನ್ನ ಪ್ರೀತಿಗೆ ಪಾತ್ರನಾದವನ ವಾದ ಸಂಪೂರ್ಣ ಸತ್ಯ ಎಂದು ಸ್ಪಷ್ಟಪಡಿಸಿದನು. ಅನಂತರದ ಸಂಭವಗಳು ಪೈಗಂಬರರ ವಾದವು ಸರಿ ಎಂದು ಸಾಬೀತುಗೊಳಿಸಿದವು. ಏನು ನಮ್ಮ ವಿರೋಧಿಗಳು ಈ ಸಂಭವಗಳ ಸಾಕ್ಷ್ಯವನ್ನು ಅಂಗೀಕರಿಸಲು ಸಿದ್ಧರಾಗಿರುವರೇ? ಈ ವಿಷಯವಾಗಿ ಪ್ರಸ್ತಾಪಿಸಲಾಗುವ ಎಲ್ಲಾ ಹದೀಸುಗಳನ್ನು ಅಂಗೀಕರಿಸಲು ಸಿದ್ಧರಾಗಿರುವೆವು ಎಂದು ಹೇಳಲು ನಮ್ಮ ಹಾಗೆ ನಮ್ಮ ವಿರೋಧಿಗಳೂ ಸಿದ್ಧರಾಗುವರೇ ಮತ್ತು ಹದೀಸುಗಳಲ್ಲಿ ಕಂಡು ಬರುವ ಬಾಹ್ಯ ವಿರೋಧಾಭಾಸವನ್ನು ದೂರೀಕರಿಸಲು ತಯಾರಾಗುವರೇ? ನಮ್ಮ ವಿರೋಧಿಗಳು ಇದಕ್ಕೆ ಸಿದ್ಧರಾಗುವುದಿಲ್ಲವಾದರೆ ಅವರು ಯೋಚಿಸಲಿ– ಅವರು ಪವಿತ್ರ ಖುರ್‌ಆನನ್ನು ಸಂಪೂರ್ಣವಾಗಿ ಬಿಟ್ಟು ಬಿಟ್ಟಿರುವರು. ಅವರು ಹದೀಸುಗಳ ಅರ್ಧ ಭಾಗವನ್ನೂ ಬಿಟ್ಟಿರುವರು. ಹೀಗೆ ಮಾಡಿರುವುದರಿಂದ ಅವರಿಗೆ ಲಭಿಸಿದುದಾದರೂ ಏನು? ಅವರು ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಭವ್ಯ ಪದವಿಯನ್ನು ತಗ್ಗಿಸಿ ಅಲ್ಲಾಹನ ಅನುಗ್ರಹಗಳ ಕಾಲುವೆಗಳನ್ನು ಒಣಗಿಸಿ ಕುಳಿತು ಕೊಂಡಿರುವರು. "ಓ ದೃಷ್ಟಿಯುಳ್ಳವರೇ, ಚಿಂತಿಸಿ ನೋಡಿರಿ".

ನಾನು ಇನ್ನು ಮುಂದೆ ನಕಾರಾತ್ಮಕ ಹದೀಸುಗಳ ಕುರಿತು ಸಂಕ್ಷಿಪ್ತವಾಗಿ ವಿವರಿಸುವೆನು.

## ಲಾ ನಬಿಯ್ಯ ಬಅ್‌ದೀ (ನನ್ನ ನಂತರ ಯಾವ ಪ್ರವಾದಿಯೂ ಇಲ್ಲ) ಎಂಬ ಹದೀಸಿನ ವಿವರಣೆ

ಈ ಹದೀಸಿನ ಕುರಿತು ನಮ್ಮ ವಿರೋಧಿಗಳು ಬಲವಾಗಿ ವಾದಿಸುತ್ತಾರೆ. "ನನ್ನ ನಂತರ ಯಾವ ಪ್ರವಾದಿಯೂ ಇಲ್ಲ" ಎಂದು ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಹೇಳಿರುವರು ಎಂದು ಅವರು ತಮ್ಮ ಭಾಷಣಗಳಲ್ಲಿ ಮತ್ತು ಲೇಖನಗಳಲ್ಲಿ ಪದೇ ಪದೇ ಸೂಚಿಸುತ್ತಾ ಇರುತ್ತಾರೆ.

ಈ ಹದೀಸಿನ ಸರಿಯಾದ ಅರ್ಥವೇನೆಂದು ನೋಡೋಣ. "ಲಾ ನಬಿಯ್ಯ ಬಅ್‌ದೀ" ಎಂಬ ವಾಕ್ಯದ ಶಬ್ದಾರ್ಥ "ನನ್ನ ನಂತರ ಯಾವ ಪ್ರವಾದಿಯೂ ಇಲ್ಲ" ಎಂದೇ ಆಗಿದೆ. ಆದರೆ 'ಲಾ' ಎಂಬ ಅಕ್ಷರ ಇಲ್ಲ ಎಂಬ ಅರ್ಥವನ್ನು ಕೊಡುತ್ತದೆಯಾದರೂ ಅದರಿಂದ ಒಂದು ವರ್ಗದ ಎಲ್ಲದರ ಕುರಿತು ನಕಾರವನ್ನು ಸೂಚಿಸದೆ ಆ ವರ್ಗಕ್ಕೆ ಸೇರಿದ ನಿರ್ದಿಷ್ಟ ಗುಂಪನ್ನು ಮಾತ್ರ ಸೂಚಿಸುತ್ತದೆ.

ಈ ಅರ್ಥವನ್ನು ಸ್ಪಷ್ಟಗೊಳಿಸಲು ಹಝ್‌ರತ್ ಮುಹಮ್ಮದ್

ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಒಂದು ಹದೀಸನ್ನು ಉದಾಹರಣೆಗೆ ಕೊಡುತ್ತೇನೆ. ಆ ಹದೀಸ್ ಈ ರೀತಿ ಇದೆ:

اذا هلك قيصر فلا قيصر بعده واذا هلك كسرى

فلا كسرى بعده - (بخاری کتاب الايمان والنذور)

"ಈಗಿನ ಖೈಸರ್ ಮೃತನಾದರೆ ಆತನ ನಂತರ ಬೇರೆ ಯಾವನೇ ಖೈಸರ್ ಇಲ್ಲ; ಈಗಿನ ಕಿಸ್ರಾ ಮೃತನಾದರೆ ಆತನ ನಂತರ ಬೇರೆ ಯಾವನೇ ಕಿಸ್ರಾ ಇಲ್ಲ."

(ಬುಖಾರಿ - ಕಿತಾಬುಲ್ ಈಮಾನ್)

ಈ ಹದೀಸಿನಲ್ಲಿ ಖೈಸರ್ ಮತ್ತು ಕಿಸ್ರಾ ಎಂಬ ಪದಗಳನ್ನು ರೋಮಿನ ಅರಸ ಮತ್ತು ಈರಾನಿನ ಅರಸನನ್ನು ಸೂಚಿಸಲು ಬಳಸಲಾಗಿದೆ. ಇಲ್ಲಿ ಸೂಚಿಸಲಾದ ಪದಗಳು ಈ ರಾಜರ ಪದವಿಯ ಹೆಸರುಗಳಾಗಿವೆ. ಬಾಹ್ಯವಾಗಿ ನೋಡಿದರೆ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲದಲ್ಲಿ ರಾಜ್ಯಭಾರ ಮಾಡುತ್ತಿದ್ದ ಖೈಸರ್ ಮತ್ತು ಕಿಸ್ರಾ ಮೃತರಾದ ನಂತರ ಹೊಸದಾಗಿ ಯಾರೂ ಖೈಸರ್ ಮತ್ತು ಕಿಸ್ರಾ ಆಗ ಬಾರದಾಗಿತ್ತು. ಆದರೆ ಹೀಗೆ ಹೇಳಿದ ನಂತರ ಸಹ ಹೊಸ ಖೈಸರ್ ಮತ್ತು ಕಿಸ್ರಾ ಅರಸರು ಆಳುತ್ತಾ ಇದ್ದರು. ಖೈಸರ್ ರಾಜ್ಯಭಾರ ಆ ನಂತರ ಐನೂರು, ಆರುನೂರು ವರ್ಷಗಳ ಕಾಲ ಇದ್ದಿತು. ಆದುದರಿಂದ ಎಲ್ಲಾ ವಿದ್ವಾಂಸರು ಈ ಬಗ್ಗೆ ಐಕ್ಯಮತ್ಯದಿಂದ ಹೀಗೆ ಬರೆದರು: "ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಉದ್ದೇಶಿಸಿದುದು ಈಗಿನ ಕಾಲದ ಖೈಸರ್ ಮತ್ತು ಕಿಸ್ರಾ ರಾಜರ ನಂತರ ಅಂತಹ ವೈಭವಶಾಲಿಗಳಾದ ಖೈಸರ್ ಮತ್ತು ಕಿಸ್ರಾ ರಾಜ್ಯಭಾರ ಮಾಡಲಾರರು ಎಂದಾಗಿದೆ".

(ಫತ್‌ಹುಲ್ ಬಾರೀ ಸಂಪುಟ 6 ಪುಟ 407 ನೋಡಿರಿ)

ಇದೇ ಅರ್ಥದಲ್ಲಿ, ಹಝ್ರುತ್ ಪೈಗಂಬರರು ಲಾ ನಬಿಯ್ಯ ಬಅ್‌ದೀ "ನನ್ನ ನಂತರ ಯಾವ ಪ್ರವಾದಿಯೂ ಇಲ್ಲ" ಎಂದು ಹೇಳಿರುವರು. ಅವರು ಉದ್ದೇಶಿದುದು "ನನ್ನ ನಂತರ ನನ್ನ ಹಾಗೆ ಶರೀಅತ್ ತರುವ ಯಾವ ಪ್ರವಾದಿಯೂ ಬರಲಾರರು" ಎಂದಾಗಿತ್ತು. ಸ್ವತಂತ್ರವಾಗಿ ಪ್ರವಾದಿ ಆಗಮಿಸಲಾರರು ಎಂದೇ ಇಲ್ಲಿ ಉದ್ದೇಶಿಸಲಾಗಿದೆ. ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರು ಮೇಲೆ ವಿವರಿಸಲಾದ ಹದೀಸನ್ನು ಸಹ ಹೇಳಿ ಈ ಹದೀಸಿನ ಅರ್ಥವನ್ನು ಸ್ಪಷ್ಟಪಡಿಸಿರುವರು.

"ಲಾ ಖೈಸರ ಬಅ್‌ದಹು"- ಆತನ ನಂತರ ಬೇರೆ ಯಾವ ಖೈಸರನೂ ಇಲ್ಲ ಎಂದು ಹೇಳಿದುದರ ಅರ್ಥ ಆ ಖೈಸರನಿಗೆ ಸಮಾನರಾಗಿ ಯಾವ ಖೈಸರನೂ ಇನ್ನು ಮುಂದೆ ಬರಲಾರನು ಎಂದಾಗಿತ್ತು. ಅದೇ ಪ್ರಕಾರ "ಲಾ ನಬಿಯ್ಯ ಬಅ್‌ದೀ" (ನನ್ನ ನಂತರ ಯಾವ ಪ್ರವಾದಿಯೂ ಇಲ್ಲ) ಎಂದು ಹೇಳಿದುದು ಸಹ ಸೀಮಿತವಾದ ಅರ್ಥದಲ್ಲಾಗಿದೆ. "ನನ್ನ ನಂತರ ಶರೀಅತ್ ತರುವ ಸ್ವತಂತ್ರ ಪ್ರವಾದಿ ಇಲ್ಲ" ಎಂದೇ ಈ ವಾಕ್ಯದ ಅರ್ಥವಾಗಿದೆ.

### ಬಅ್‌ದೀ ಎಂಬ ಶಬ್ದದ ಅರ್ಥ ವಿವರಣೆ

ಈ ಹದೀಸಿನಲ್ಲಿ ಪ್ರಯೋಗಿಸಲಾದ ಬಅ್‌ದ್ ಎಂಬ ಪದ ಸಹ ಗಮನಾರ್ಹವಾಗಿದೆ. ಈ ಪದ ಅರಬಿ ಭಾಷೆಯಲ್ಲಿ ಮೂರು ವಿಧದ ಅರ್ಥಗಳಲ್ಲಿ ಬಳಸಲಾಗುತ್ತದೆ.

ಪ್ರಥಮ ಅರ್ಥ "ಹಿಂದೆ" ಎಂದು. ಉದಾಹರಣೆಗೆ ಒಂದು ಕಟ್ಟಡದ ಹಿಂಭಾಗದಲ್ಲಿ ಇನ್ನೊಂದು ಕಟ್ಟಡ ಇರುತ್ತದೆ.

ದ್ವಿತೀಯ ಅರ್ಥ "ಎದುರಿಗೆ". ಒಂದು ವಸ್ತುವನ್ನು ದಾಟಿಕೊಂಡು ಅಥವಾ ಬಿಟ್ಟು ಇನ್ನೊಂದನ್ನು ಕೈಗೊಳ್ಳುವುದು. ಇದೇ ಅರ್ಥದಲ್ಲಿ ಪವಿತ್ರ ಖುರ್‌ಆನ್‌ನಲ್ಲಿ ಈ ಪದ ಬಳಸಲಾಗಿದೆ.

فَبِاَيِّ حَدِيْثٍ بَعْدَ اللّٰهِ وَاٰيٰتِهٖ يُؤْمِنُوْنَ۔

"ಅಲ್ಲಾಹನನ್ನು ಮತ್ತು ಅವನ ವಚನಗಳನ್ನು ಬಿಟ್ಟು ಜನರು ಬೇರೆ ಯಾವ ಮಾತನ್ನು ನಂಬುವರು?" (45:7)

ಮೂರನೆಯ ಅರ್ಥ "ಅನಂತರ". ಇದು ಕಾಲವನ್ನು ಸೂಚಿಸುತ್ತದೆ. ಒಂದು ವಸ್ತು ದಾಟಿ ಹೋದ ನಂತರ ಅಥವಾ ಅದರ ಕಾಲವು ಸಮಾಪ್ತಿಯಾದ ನಂತರ ಇನ್ನೊಂದು ವಸ್ತು ಬರುತ್ತದೆ.

ಬಅ್‌ದ್ ಎಂಬ ಪದಕ್ಕೆ ಮೇಲಿನ ಮೂರು ಅರ್ಥಗಳಿವೆ. ಇವುಗಳನ್ನು ಯಾರಿಗೂ ಅಲ್ಲಗಳೆಯಲು ಸಾಧ್ಯವಾಗಲಾರದು.

ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ತಬೂಕ್ ಯುದ್ಧಕ್ಕೆ ಹೋಗುವಾಗ ಹಝ್‌ರತ್ ಅಲಿ ರಝಿಯಲ್ಲಾಹು ಅನ್‌ಹುರವರನ್ನು ಮದೀನದ ರಕ್ಷಣಾಧಿಕಾರಿಯಾಗಿ ನೇಮಿಸಿ ಹೋಗಿದ್ದರು. ಆಗ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಹಝ್‌ರತ್ ಅಲಿ ರಝಿಯಲ್ಲಾಹು ಅನ್‌ಹುರವರನ್ನು ಸಂಬೋಧಿಸಿ ಹೀಗೆ ಹೇಳಿದರು: "ನನ್ನ ಈ ಯಾತ್ರೆಯ ನಂತರ ನೀವು ಹಝ್‌ರತ್ ಹಾರೂನ್ ಅಲೈಹಿಸ್ಸಲಾಮರ ಹಾಗೆ ಇದ್ದೀರಿ (ಅಂದರೆ, ಯಾವ ಪ್ರಕಾರ ಹಝ್‌ರತ್ ಮೂಸಾ ಅಲೈಹಿಸ್ಸಲಾಮ್ ತಾನು ಹಾಜರಿರದ ಸಮಯದಲ್ಲಿ ಹಝ್‌ರತ್ ಹಾರೂನ್ ಅಲೈಹಿಸ್ಸಲಾಮರನ್ನು ತನ್ನ ಜನಾಂಗದ ಮೇಲ್ವಿಚಾರಣೆಗೆ ನೇಮಿಸಿ ಹೋದರೋ ಅದೇ ಪ್ರಕಾರ ನಾನು ನಿಮ್ಮನ್ನು ನನ್ನ ಅನಂತರ ನೇಮಿಸುತ್ತಿದ್ದೇನೆ). ಗೈರ ಅನ್ನಹು ಲಾ ನಬಿಯ್ಯ ಬಅ್‌ದೀ - ವ್ಯತ್ಯಾಸವೇನೆಂದರೆ, ನನ್ನ ಅನಂತರ ನಬಿಯಿಲ್ಲ." (ಅಂದರೆ, ಹಝ್‌ರತ್ ಹಾರೂನ್ (ಅ) ನಬಿಯಾಗಿದ್ದರು. ಆದರೆ ನೀವು ನಬಿಯಲ್ಲ.)

ಈ ಹದೀಸು ಸೂಚಿಸುವುದೇನೆಂದರೆ, ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ಅನುಪಸ್ಥಿತಿಯಲ್ಲಿ ಅವರ ಪ್ರತಿನಿಧಿಯಾಗಿ ಹಝ್‌ರತ್ ಅಲಿ ರಝಿಯಲ್ಲಾಹು ಅನ್‌ಹುರವರನ್ನು ಹಝ್‌ರತ್ ಹಾರೂನ್ ಅಲೈಹಿಸ್ಸಲಾಮರನ್ನು ನೇಮಿಸಿದ ಹಾಗೆ ನೇಮಿಸಿದ್ದರೂ ಅವರಿಗೆ ನಬಿಯ ಸ್ಥಾನ ಇಲ್ಲ ಎಂದಾಗಿದೆ.

"ಲಾ ನಬಿಯ್ಯ ಬಅ್‌ದೀ" ಎಂಬ ವಾಕ್ಯ ಈ ಹದೀಸಿನಲ್ಲಿ ಒಂದು ವಿಶಿಷ್ಟ ಸಂದರ್ಭದಲ್ಲಿ ಬಳಸಲಾಗಿದೆ. ಆದರೆ ಬೇರೆ ಹದೀಸುಗಳಲ್ಲಿಯೂ ಈ ವಾಕ್ಯ ಬಳಸಲಾಗಿರುವುದರಿಂದ ನಾನು ಈ ವಿಶಿಷ್ಟ ಸಂದರ್ಭದ ಕುರಿತು ಹೆಚ್ಚು ವಿವರಿಸಲು ಬಯಸುವುದಿಲ್ಲ. ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಈ ವಿಶಿಷ್ಟ ಸಂದರ್ಭದಲ್ಲಿ ಮಾತ್ರವಲ್ಲ

ಬೇರೆ ಹದೀಸುಗಳಲ್ಲಿಯೂ ಈ ವಾಕ್ಯವನ್ನು ಮತ್ತು ಇಂತಹದೇ ವಾಕ್ಯಗಳನ್ನು ಬಳಸಿದ್ದಾರೆಂದು ನಾನು ಒಪ್ಪುತ್ತೇನೆ.

"ಬಅ್‌ದ್"ನ ಎರಡನೆಯ ಅರ್ಥ, ಒಂದನ್ನು ಬಿಟ್ಟು ಇನ್ನೊಂದನ್ನು ಕೈಗೊಳ್ಳುವುದು ಎಂದಾಗಿದೆ. ಪವಿತ್ರ ಖುರ್‌ಆನಿನ ವಚನ "ಫಬಿಅಯ್ಯಿ ಹದೀಸಿನ್ ಬಅ್‌ದಲ್ಲಾಹಿ ವ ಆಯಾತಿಹೀ ಯೂಮಿನೂನ್" ಎಂಬ ವಚನ ಇದನ್ನೇ ಸೂಚಿಸುತ್ತದೆ. "ಅಲ್ಲಾಹನನ್ನು ಮತ್ತು ಅವನ ವಚನಗಳನ್ನು ಬಿಟ್ಟು ಬೇರೆ ಯಾವ ಮಾತನ್ನು ಅವರು ನಂಬುವರು?" ಎಂದು ಈ ವಚನದಲ್ಲಿ ಪ್ರಶ್ನಿಸಲಾಗಿದೆ. ಈ ಅರ್ಥದ ಪ್ರಕಾರ ಸಹ "ಲಾ ನಬಿಯ್ಯ ಬಅ್‌ದೀ" ಎಂಬ ವಾಕ್ಯದ ಅರ್ಥ ಸ್ಪಷ್ಟವಾಗಿ ತಿಳಿಯುತ್ತದೆ. "ನನ್ನ ಶರೀಅತನ್ನು ಬಿಟ್ಟು ಅದನ್ನು ರದ್ದುಗೊಳಿಸಿ ಯಾವ ಪ್ರವಾದಿಯೂ ಬರಲಿಕ್ಕಿಲ್ಲ" ಎಂದು ಈ ಹದೀಸಿನ ಅರ್ಥವಾಗುತ್ತದೆ. "ಬರಲಿರುವ ಪ್ರವಾದಿ ನನ್ನ ಶರೀಅತಿನ ಸೇವಕನಾಗಿ, ನನ್ನ ಪತಾಕೆಯ ಕೆಳಗೆ ನಿಲ್ಲುವವನಾಗಿ ಆಗಮಿಸುವರು" ಎಂದು ಈ ಹದೀಸು ಸೂಚಿಸುತ್ತದೆ.

"ಬಅ್‌ದ್"ನ ಮೂರನೆಯ ಅರ್ಥ ಕಾಲಕ್ಕೆ ಸಂಬಂಧಿಸಿದೆ. ಒಂದು ವಸ್ತು ದಾಟಿ ಹೋದ ನಂತರ, ಒಂದು ಕಾಲಘಟ್ಟ ದಾಟಿ ಹೋದ ನಂತರ ಸಂಭವಿಸುವುದನ್ನು ಇದು ಸೂಚಿಸುತ್ತದೆ. ಒಂದರ ನಂತರ, ಅದರ ಕಾಲಾವಧಿ ಮುಗಿದ ನಂತರ ಇನ್ನೊಂದು ಬರುವುದನ್ನು ಇದು ಸೂಚಿಸುತ್ತದೆ. ಎಂದರೆ ಕಾಲ ಪರಿಗಣನೆಯ ಪ್ರಕಾರ ಮುಂದೆ ಮತ್ತು ಹಿಂದೆ ಇರುವುದನ್ನು ಬಅ್‌ದ್ ಶಬ್ದ ಸೂಚಿಸುತ್ತದೆ. ಆಗ ಈ ಹದೀಸಿನ ಅರ್ಥ ಹೀಗೆ ಆಗುತ್ತದೆ: "ನನ್ನ ಕಾಲಘಟ್ಟ ದಾಟಿ ಹೋದ ನಂತರ ಬೇರೊಬ್ಬ ನಬಿ ಇಲ್ಲ." ಈ ಅರ್ಥ ಸಹ ಸ್ಪಷ್ಟವಾಗಿದೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ನಂತರ ಅವರ ಕಾಲಘಟ್ಟವನ್ನು ಮುಗಿತಾಯಗೊಳಿಸಿ ಹೊಸ ಕಾಲಘಟ್ಟವನ್ನು ಪ್ರಾರಂಭಿಸುವ ನಬಿ ಬರಲಿಕ್ಕಿಲ್ಲ ಎಂದು ಈ ಹದೀಸು ಸೂಚಿಸುತ್ತದೆ. ಈ ಅರ್ಥದಲ್ಲಿಯೂ ಯಾವುದೇ ಆಕ್ಷೇಪ ಉಂಟಾಗಲಾರದು. ಏಕೆಂದರೆ ನಮ್ಮ ಯಜಮಾನರಾದ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಶಾಶ್ವತ ಶರೀಅತನ್ನು ಪಡೆದಿರುವರು. ಅವರ ಶರೀಅತಿನ ಕಾಲಘಟ್ಟ ಪುನರುತ್ಥಾನದ ದಿನದ ತನಕ ವ್ಯಾಪಿಸಿಕೊಂಡಿರುತ್ತದೆ. ಈ ಬಗ್ಗೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಪದೇ ಪದೇ ಪ್ರಸ್ತಾಪಿಸಿರುವರು. ಒಮ್ಮೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ತನ್ನ ಕೈ ಎತ್ತಿ ಎರಡು ಬೆರಳುಗಳನ್ನು ಪರಸ್ಪರ ಹತ್ತಿರ ತಂದು ಮುನ್ನೆಚ್ಚರಿಕೆ ರೂಪದಲ್ಲಿ ಹೀಗೆ ಹೇಳಿದರು:

بعثت انا والساعة كهاتين

"ನಾನು ಮತ್ತು ಪುನರುತ್ಥಾನ ನನ್ನ ಈ ಎರಡು ಬೆರಳುಗಳ ಹಾಗೆ ಪರಸ್ಪರ ಸೇರಿಕೊಂಡಿವೆ. ಅವುಗಳ ಮಧ್ಯೆ ಯಾವುದೇ ಎಡೆಯಿಲ್ಲ." (ಬುಖಾರಿ)

## ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ನುಬುವ್ವತ್ ಖಿಯಾಮತ್ ತನಕ ವ್ಯಾಪಿಸಿಕೊಂಡಿದೆ.

ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ನುಬುವ್ವತ್ ಖಿಯಾಮತ್ ತನಕ ವ್ಯಾಪಿಸಿಕೊಂಡಿರುವುದರಿಂದ "ಲಾ ನಬಿಯ್ಯ ಬಅ್‌ದೀ" ಎಂದು ಹೇಳಿರುವುದರ ಅರ್ಥ "ನನ್ನ ಕಾಲಘಟ್ಟವನ್ನು ಕೊನೆಗೊಳಿಸುವ ಮತ್ತು ಹೊಸ ಕಾಲಘಟ್ಟವನ್ನು ಪ್ರಾರಂಭಿಸುವ ಯಾವ ಪ್ರವಾದಿಯೂ ಬರಲಿಕ್ಕಿಲ್ಲ. ಏಕೆಂದರೆ ನನ್ನ ಕಾಲಘಟ್ಟ ಖಿಯಾಮತ್ ತನಕ ಇರುತ್ತದೆ" ಎಂದಾಗಿದೆ.

ಅತ್ಯಂತ ಖೇದಕರ ಸಂಗತಿಯೇನೆಂದರೆ, ನಮ್ಮ ವಿರೋಧಿಗಳು ಸಂಕುಚಿತ ದೃಷ್ಟಿಯಿಂದ "ಬಅ್‌ದೀ" ಎಂಬ ಪದದ ಅರ್ಥವನ್ನು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಜೀವಿತದ ಕಾಲಾವಧಿಗೆ ನಿಷ್ಕಾರಣವಾಗಿ ಸೀಮಿತಗೊಳಿಸುತ್ತಾರೆ. ಆದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಹೇಳಿರುವುದರ ಉದ್ದೇಶ "ನನ್ನ ನುಬುವ್ವತಿನ ಕಾಲಾವಧಿ ಖಿಯಾಮತ್ ತನಕ ಇದೆ. ಆದುದರಿಂದ ಈ ಕಾಲಾವಧಿಯನ್ನು ಕುಂಠಿತಗೊಳಿಸುವಂತಹ ಅಥವಾ ಅದನ್ನು ಕೊನೆಗೊಳಿಸುವ ಒಬ್ಬ ಪ್ರವಾದಿ ಬರಲಿಕ್ಕಿಲ್ಲ" ಎಂದಾಗಿದೆ.

ಸ್ನೇಹಿತರೇ, ಬಂಧುಗಳೇ, ನೀವು ಯೋಚಿಸಿರಿ. ಬಅ್‌ದ್ ಎಂಬ ಪದವನ್ನು ಪ್ರಯೋಗಿಸಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಹೇಳಲು ಉದ್ದೇಶಿಸಿದುದು, "ನನ್ನ ನುಬುವ್ವತಿನ ಕಾಲಾವಧಿಯನ್ನು ಕೊನೆಗೊಳಿಸುವ ಮತ್ತು ನನ್ನ ಶರೀಅತನ್ನು ರದ್ದುಗೊಳಿಸುವ ಪ್ರವಾದಿ ಖಂಡಿತವಾಗಿಯೂ ಬರಲಿಕ್ಕಿಲ್ಲ" ಎಂದಾಗಿದೆ.

ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ನುಬುವ್ವತಿನ ಕಾಲಾವಧಿ ಖಿಯಾಮತ್ ತನಕ ವ್ಯಾಪಿಸಿದೆ. ಅದು ಎಂದೂ ಕೊನೆಗೊಳ್ಳಲಾರದು.

ಲಾ ನಬಿಯ್ಯ ಬಅ್‌ದೀ ಎಂಬ ಹದೀಸಿನಲ್ಲಿ ಮೇಲಿನ ವಿವರಣೆ ಸೂಕ್ಷ್ಮವಾಗಿ ಅಡಕವಾಗಿದೆ. ಆದರೆ ಈಗಿನ ಕಾಲದ ಸಮೀಪ ದೃಷ್ಟಿ ಹೊಂದಿದ ಬಾಹ್ಯಾಚಾರಿಗಳಾದ ಜನರು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಶಾರೀರಿಕ ಜೀವಿತಕ್ಕೆ ಈ ಕಾಲಾವಧಿಯನ್ನು ಸೀಮಿತಗೊಳಿಸಿರುತ್ತಾರೆ ಮತ್ತು ಅವರ ಉನ್ನತ ಪದವಿಗೆ ಕುಂದುಂಟು ಮಾಡಿದ್ದಾರೆ.

ನಾವು "ಲಾ ನಬಿಯ್ಯ ಬಅ್‌ದೀ" ಎಂಬ ಹದೀಸನ್ನು ಹೃತ್ಪೂರ್ವಕವಾಗಿ ನಂಬುತ್ತೇವೆ. ನಮ್ಮ ಯಜಮಾನರಾದ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ನಂತರ ಯಾವುದೇ ಪ್ರವಾದಿ ಇಲ್ಲ ಎಂದು ನಾವು ಘೋಷಿಸುತ್ತೇವೆ. ಆದರೆ ಇದರ ಅರ್ಥ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಒರತೆಗಳ ನೀರು ಒಣಗಿ ಹೋಗಿದೆ ಎಂದಲ್ಲ. ಅದರ ಅರ್ಥ ಅವರ ನುಬುವ್ವತ್ ಖಿಯಾಮತ್ ತನಕ ಹಬ್ಬಿದೆ ಎಂದಾಗಿದೆ. ಇನ್ನು ಮುಂದೆ ಬರುವವರು ಅವರ ನುಬುವ್ವತಿನ ಹೊದಿಕೆಯನ್ನು ತಮ್ಮ ಮೇಲೆ ಸುತ್ತಿಕೊಂಡು ಬರುವರು. ಹಾಗೆ ಬರುವವರ ನುಬುವ್ವತ್ ಅವರ ನುಬುವ್ವತಿನ ಒಳಗೆ ಇರುವುದು. ಅದು ಅದರ ಬಅ್‌ದ್ ಅಥವಾ ಹೊರಗೆ ಇರಲಾರದು. ಹಝ್ರತ್ ಈಸಾ ಅಲೈಹಿಸ್ಸಲಾಮರಿಗಾಗಲೀ ಬೇರೆ ಯಾರಿಗಾಗಲೀ ಖಿಯಾಮತ್‌ಗೆ ಮೊದಲು ಆಗಮಿಸಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ನುಬುವ್ವತಿನ ಕಾಲ ಘಟ್ಟವನ್ನು ಕಡಿದು ಹಾಕುವ ಮತ್ತು ಅವರ ಖಿತ್‌ಮೆ ನುಬುವ್ವತಿನ ಮುದ್ರೆಯನ್ನು ಒಡೆದು

ನುಬುವ್ವತಿನ ಪೀಠವನ್ನೇರುವ ಅಧಿಕಾರವಿರುವುದಿಲ್ಲ. ನಮ್ಮ ಯಜಮಾನರಾದ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮೊದಲಿನ ಕಾಲಘಟ್ಟದವರಿಗೂ ಅಂತಿಮ ಕಾಲಘಟ್ಟದವರಿಗೂ ನಾಯಕರಾಗಿದ್ದಾರೆ. ಅವರು ಮನುಷ್ಯ ಕುಲದ ನೇತಾರರಾಗಿದ್ದಾರೆ. ಅವರಿಗಿಂತ ಮೊದಲು ಆಗಮಿಸಿದ ಪ್ರವಾದಿಗಳು ಅವರ ಆಗಮನಕ್ಕಾಗಿ ಸಿದ್ಧತೆಗಳನ್ನು ಮಾಡಲು ಬಂದರು. ಈ ಬಗ್ಗೆ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಹೀಗೆ ಹೇಳಿದ್ದಾರೆ:

كُنْتُ نبيًّا وآدم بين الماء والطين

"ಹಝ್‌ರತ್ ಆದಮ್ ಅಲೈಹಿಸ್ಸಲಾಮರ ಸೃಷ್ಟಿಗೆ ಮೊದಲೇ ನಾನು ಪ್ರವಾದಿಯಾಗಿದ್ದೆನು."

ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ನಂತರ ಬರುವವರು ಅವರ ಸೇವಕರಾಗಿ ಅವರ ನೆರಳಾಗಿ ಬರುವರು. ಇದೇ "ಖಾತಮುನ್ನಬಿಯ್ಯೀನ್" ಎಂಬ ಪವಿತ್ರ ಖುರ್‌ಆನ್ ವಚನ ಮತ್ತು "ಲಾ ನಬಿಯ್ಯಬಅ್‌ದೀ" ಎಂಬ ಹದೀಸ್ - ಇವುಗಳ ನಿಜವಾದ ವ್ಯಾಖ್ಯಾನವಾಗಿದೆ. ಆದರೆ ಈ ಕಾಲದ ಬಾಹ್ಯ ಚಿಂತಕರು ಈ ಮಹೋನ್ನತ ಸತ್ಯವನ್ನು ಕೈ ಬಿಟ್ಟು ಅಪ್ರಸ್ತುತವಾದ ಸಂಗತಿಗಳಲ್ಲಿ ಸಿಲುಕಿರುವರೆಂಬುದು ಖೇದಕರವಾಗಿದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಲಾ ನಬಿಯ್ಯ ಬಅ್‌ದೀ ಎಂಬ ಹದೀಸು ನಿಸ್ಸಂಶಯವಾಗಿಯೂ ಸತ್ಯ ಹದೀಸೇ ಆಗಿದೆ. ನಾವು ಅದನ್ನು ನಂಬುತ್ತೇವೆ. ಆದರೆ ಆ ಹದೀಸಿನ ಅರ್ಥ ಹೀಗೆ ಮಾತ್ರ ಆಗಿದೆ:

ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಆ ಹದೀಸಿನ ಮೂಲಕ ಈ ಕೆಳಗಿನ ಎರಡು ಸಂಗತಿಗಳನ್ನು ಉದ್ದೇಶಿಸಿದ್ದರು-

1) ನಾನು ತಂದ ಶರೀಅತ್ ಶಾಶ್ವತವಾಗಿ ನೆಲೆ ನಿಲ್ಲುವುದಾಗಿದೆ. ಆದುದರಿಂದ ನನ್ನ ಶರೀಅತನ್ನು ಬಿಟ್ಟು ಮತ್ತು ಅದನ್ನು ರದ್ದುಗೊಳಿಸಿ ಹೊಸದಾಗಿ ಶರೀಅತನ್ನು ತರುವ ಯಾವ ಪ್ರವಾದಿಯೂ ಬರಲು ಸಾಧ್ಯವಿಲ್ಲ.

2) ನನ್ನ ನುಬುವ್ವತಿನ ಕಾಲಘಟ್ಟವನ್ನು ಕೊನೆಗೊಳಿಸಿ ಹೊಸ ನುಬುವ್ವತಿನ ಕಾಲಘಟ್ಟವನ್ನು ಪ್ರಾರಂಭಿಸುವಂತಹ ಯಾವುದೇ ಪ್ರವಾದಿ ಬರಲಿಕ್ಕಿಲ್ಲ. ಬರಲಿರುವ ಪ್ರವಾದಿ ನನ್ನ ಶಾಖೆಯ ರೂಪದಲ್ಲಿ ಆಗಮಿಸುವರು. ನನ್ನ ನುಬುವ್ವತ್‌ನಿಂದಲೇ ಅವರು ಅನುಗ್ರಹ ಪಡೆಯುವರು ಆದುದರಿಂದ ಬರಲಿರುವ ಪ್ರವಾದಿಯ ನುಬುವ್ವತ್ ನನ್ನ ನುಬುವ್ವತಿನ ಒಳಗೆ ಇರುವುದು; ಹೊರಗೆ ಇರಲಾರದು.

## ಉಮ್ಮುಲ್ ಮೂಮಿನೀನ್ ಹಝ್‌ರತ್ ಆಯಿಶಾ ರಝಿಯಲ್ಲಾಹು ಅನ್‌ಹಾರವರ ನಿರ್ಣಾಯಕ ಹೇಳಿಕೆ

ಮೇಲೆ ಬರೆಯಲಾದ ನಮ್ಮ ಅರ್ಥ ವಿವರಣೆಯನ್ನು ಮುಸ್ಲಿಮ್ ಸಮುದಾಯದ ದೊಡ್ಡ ದೊಡ್ಡ ವಿದ್ವಾಂಸರು ಮತ್ತು ಸಂತರು ವಿವಿಧ ಕಾಲಗಳಲ್ಲಿ ಅನುಮೋದಿಸುತ್ತಾ ಇದ್ದರು. ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಪ್ರಿಯ ಪತ್ನಿ ಹಝ್‌ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ಈ ಬಗ್ಗೆ ಹೀಗೆ ಹೇಳಿದರು:

قُولُوا إِنَّهُ خَاتَمُ الأَنبياء ولا تقولوا لا نبي بعده

(تكملہ مجمع البحار صفحہ ۸۵ و درمنثور جلد ۵)

"ಖೂಲೂ ಇನ್ನಹು ಖಾತಮುನ್ನಬಿಯ್ಯೀನ್ ವಲಾ ತಖೂಲೂ ಲಾ ನಬಿಯ್ಯ ಬಅ್‌ದಹು".

ಅರ್ಥ : (ಓ ಜನರೇ, ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಕುರಿತು) "ಅವರು ಖಾತಮುನ್ನಬಿಯ್ಯೀನ್ ಎಂದು ಹೇಳಿರಿ. ಆದರೆ ಅವರ ನಂತರ ಪ್ರವಾದಿ ಇಲ್ಲ ಎಂದು ಹೇಳಬೇಡಿರಿ".

(ತಕ್‌ಮಿಲ ಮಜ್‌ಮವುಲ್ ಬಿಹಾರ್-ಪುಟ 85, ದುರ್ರೆಮನ್‌ಸೂರ್ ಸಂಪುಟ - 5)

ನಮ್ಮ ಪರಿಶುದ್ಧ ಮಾತೆ ಎಷ್ಟು ದೂರಾಲೋಚನೆ ಹೊಂದಿದ್ದರು! ನೋಡಿರಿ, ಇಂದಿನ ಕಾಲದ ಮೌಲವಿಗಳಿಗೆ ಈ ಯೋಚನೆಯ ಸಮೀಪ ಸಹ ಹೋಗಲು ಸಾಧ್ಯವಾಗಿಲ್ಲ. ಹಝ್‌ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ಮೇಲಿನಂತೆ ಹೇಳಿದುದರ ಉದ್ದೇಶವೇನೆಂದರೆ: ಆತುರ ಪಡುವ ಜನರು ತಪ್ಪು ಮಾಡಲು ಸಾಧ್ಯವಿದೆ. ಅವರಿಗೆ ಹದೀಸಿನ ತಳದ ತನಕ ತಲಪಲು ಸಾಧ್ಯವಾಗದ ಕಾರಣ ಅವರು ಸಂಶಯಪಡಬಹುದು. ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಆಗಮನದ ನಂತರ ಪ್ರಾಯಶಃ ನುಬುವ್ವತಿನ ಬಾಗಿಲು ಸಂಪೂರ್ಣವಾಗಿ ಮುಚ್ಚಲ್ಪಟ್ಟಿದೆ ಎಂದು ಅವರು ಶಂಕಿಸಬಹುದು. ಆದುದರಿಂದ ಈ ರೀತಿಯ ತಪ್ಪು ಗ್ರಹಿಕೆಗೆ ಒಳಗಾಗದಂತೆ "ಲಾ ನಬಿಯ್ಯ ಬಅ್‌ದೀ " ಎಂಬ ಹದೀಸಿಗಿಂತ "ಖಾತ ಮುನ್ನಬಿಯ್ಯೀನ್" ಎಂಬ ಪವಿತ್ರ ಖುರ್‌ಆನ್ ವಚನದ ಕುರಿತು ಹೆಚ್ಚು ಗಮನ ಕೊಡಬೇಕು. ಏಕೆಂದರೆ ಪವಿತ್ರ ಖುರ್‌ಆನಿನ ಆ ವಚನದಲ್ಲಿ ಎಲ್ಲಾ ವಾಸ್ತವಿಕ ಸಂಗತಿಗಳು ಸಂಕ್ಷಿಪ್ತವಾಗಿ ವಿವರಿಸಲ್ಪಟ್ಟಿವೆ.

"ಲಾ ನಬಿಯ್ಯ ಬಅ್‌ದೀ" ಎಂಬ ಹದೀಸಿಗೆ ಎರಡೇ ಎರಡು ಅರ್ಥಗಳು ಇವೆ. ಒಂದು ಅರ್ಥ ನಮ್ಮ ವಿರೋಧಿಗಳು ಹೇಳುವ ಅರ್ಥ. ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಆಗಮನದ ನಂತರ ಎಲ್ಲಾ ವಿಧಗಳ ನುಬುವ್ವತಿನ ಬಾಗಿಲು ಸಂಪೂರ್ಣವಾಗಿ ಮುಚ್ಚಲ್ಪಟ್ಟಿದೆ ಎಂದು ಈ ಅರ್ಥದ ಸಾರವಾಗಿದೆ. ಇನ್ನೊಂದು ಅರ್ಥ ನಾವು ಹೇಳುವುದಾಗಿದೆ. ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ನಂತರ ಅವರ ನುಬುವ್ವತಿನ ಕಾಲಘಟ್ಟವನ್ನು ಕೊನೆಗೊಳಿಸುವ ಪ್ರವಾದಿ ಆಗಮಿಸಲಿಕ್ಕಿಲ್ಲ. ಆದರೆ ಅವರ ಶಿಷ್ಯರಾಗಿ, ಅವರ ಅಂಗೀಕಾರದ ಮುದ್ರೆ ಗಳಿಸಿ, ಅವರ ನೆರಳಿನ ರೂಪದಲ್ಲಿ ಅವರ ಉಮ್ಮತ್‌ಗೆ ಸೇರಿದ ಉಮ್ಮತೀ ನಬಿ ಬರಬಹುದು. ಇದೇ ವಿಷಯ ಖಾತಮುನ್ನಬಿಯ್ಯೀನ್ ಎಂಬ ಪವಿತ್ರ ಖುರ್‌ಆನ್ ವಚನದಲ್ಲಿ ಅಡಕವಾಗಿದೆ. ಇದರ ಬಗ್ಗೆಯೇ ನಾವು ಚರ್ಚಿಸುತ್ತಾ ಬಂದಿದ್ದೇವೆ. ನೀವು ನೋಡಿರಿ, ವಾತ್ಸಲ್ಯ ಭರಿತರಾದ ನಮ್ಮ ತಾಯಿ ಹಝ್‌ರತ್‌ ಆಯಿಶಾ ರಝಿಯಲ್ಲಾಹು ಅನ್‌ಹಾ ಎಷ್ಟು ಸ್ಪಷ್ಟವಾಗಿ, ಎಷ್ಟು ಸೂಕ್ಷ್ಮವಾಗಿ ನಮ್ಮ ಅರ್ಥವನ್ನು ಅಂಗೀಕರಿಸುತ್ತಾ ಹೇಳುತ್ತಾರೆ: "ನೀವು ಲಾ ನಬಿಯ್ಯ ಬಅ್‌ದೀ ಎಂಬ ಹದೀಸಿನಿಂದ ತಪ್ಪು ಗ್ರಹಿಕೆಗೆ ಪಾತ್ರರಾಗಬಹುದು. ಆದುದರಿಂದ ನೀವು ಖಾತಮುನ್ನಬಿಯ್ಯೀನ್ ಎಂಬ ಪವಿತ್ರ ಖುರ್‌ಆನ್ ವಚನದ ಅರ್ಥವನ್ನು ಗಮನದಲ್ಲಿ ಇಟ್ಟುಕೊಳ್ಳಿರಿ. ಹೀಗೆ ಮಾಡಿದರೆ ನೀವು ತಪ್ಪು ಗ್ರಹಿಕೆಗೆ ಒಳಗಾಗಲಾರಿರಿ".

"ಖಾತಮುನ್ನಬಿಯ್ಯೀನ್ " ಎಂಬ ಪದದ ಅರ್ಥವೇನು? ಅದರ

ಅರ್ಥ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ " ಪ್ರವಾದಿಗಳ ಮುದ್ರೆ" ಎಂದಾಗಿದೆ. ಅವರ ಆಗಮನದ ನಂತರ ಹೊಸ ಶರೀಅತ್ ತರುವ ಸ್ವತಂತ್ರ ಪ್ರವಾದಿ ಬರಲು ಸಾಧ್ಯವಿಲ್ಲ. ಏಕೆಂದರೆ ಅದರಿಂದ ಖತಮುನ್ನುಬುವ್ವತಿನ ಮುದ್ರೆಗೆ ಭಂಗ ಉಂಟಾಗುತ್ತದೆ. ಆದರೆ ನೆರಳಿನ ರೂಪದ ನಬಿ (ಝಿಲ್ಲೀ ನಬಿ) ಮತ್ತು ಉಮ್ಮತೀ ನಬಿ ಬರಬಹುದು. ಅಂತಹ ಪ್ರವಾದಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಪ್ರಕಾಶದಿಂದ ಪ್ರಕಾಶ ಪಡೆಯುವವರು ಮತ್ತು ಅವರಿಗೆ ಲಭಿಸಿದ ಅನುಗ್ರಹದಿಂದ ಅನುಗ್ರಹ ಪಡೆಯುವವರು. ಇಂತಹ ನುಬುವ್ವತ್ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ನಂಬುವ್ವತಿಗೆ ಅಧೀನವಾದುದು ಮತ್ತು ಅವರದೇ ಒಂದು ಭಾಗವಾಗಿ ಇರುವುದು.

ನಾನು ಬಹಳ ಆಶ್ಚರ್ಯ ಚಕಿತನಾಗಿದ್ದೇನೆ. ನನ್ನ ಆಶ್ಚರ್ಯಕ್ಕೆ ಮಿತಿಯೇ ಇಲ್ಲ. ಆ ಗೌರವಾನ್ವಿತ ಮಹಿಳೆ, ಸತ್ಯವಿಶ್ವಾಸಿಗಳ ಮಾತೆಯಾದ ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾರವರ ಯೋಚನೆ ಎಷ್ಟು ಆಳವಾಗಿದೆ ಎಂದು ನೋಡಿರಿ. ಅವರು ಬರಲಿದ್ದ ಅಪಾಯವನ್ನು ಹದಿನಾಲ್ಕು ನೂರು ವರ್ಷಗಳ ಮೊದಲೇ ಅಂದಾಜು ಮಾಡಿ ಹೇಳಿದರು: "ಲಾ ನಬಿಯ್ಯ ಬಅ್‌ದೀ" ಎಂಬ ಹದೀಸಿಗೆ ಖಾತಮುನ್ನಬಿಯ್ಯೀನ್ ಎಂಬ ಪವಿತ್ರ ಖುರ್‌ಆನ್ ವಚನಕ್ಕೆ ವಿರುದ್ಧವಾದ ಅರ್ಥ ಹೇಳಬೇಡಿರಿ. ಆ ವಚನಕ್ಕೆ ಹೊಂದಾಣಿಕೆಯಾಗುವ ಅರ್ಥ ಹೇಳಿರಿ." ಈ ರೀತಿ ಅವರು ಖಾತಮುನ್ನ ಬಿಯ್ಯೀನ್ ವಚನವನ್ನು ವ್ಯಾಖ್ಯಾನ ಸಹ ಮಾಡಿದರು. ಈ ವಚನ ನುಬುವ್ವತನ್ನು ಕೊನೆಗೊಳಿಸುವುದಿಲ್ಲ. ಬದಲು, ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಅಂಗೀಕಾರದ ಮುದ್ರೆಯೊಂದಿಗೆ, ಅವರ ಮೂಲಕ ಅಲ್ಲಾಹನ ಅನುಗ್ರಹಗಳು ಜಾರಿಯಾಗುವುದರ ಕುರಿತು ಅದರಲ್ಲಿ ಪ್ರಸ್ತಾಪಿಸಲಾಗಿದೆ.

## ಹಝ್ರತ್ ಇಮಾಮ್ ಶಿಅರಾನಿಯವರ ವಿವರಣೆ

ಹಝ್ರತ್ ಇಮಾಮ್ ಶಿಅರಾನಿ (ಮರಣ: ಹಿಜರಿ 976) ಹೀಗೆ ಹೇಳುತ್ತಾರೆ:

قوله صلى الله عليه وسلم فلا نبي بعدي ولا رسول
المراد به لا مشرع بعدي - (اليواقيت والجواهر جلد ۲ صفحہ ۲۷)

"ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ 'ನನ್ನ ಅನಂತರ ಯಾವುದೇ ನಬಿ ಇಲ್ಲ, ರಸೂಲ್ ಇಲ್ಲ' ಎಂದು ಹೇಳಿದುದರ ಉದ್ದೇಶ 'ನನ್ನ ಅನಂತರ ಹೊಸ ಶರೀಅತ್ ತರುವ ಪ್ರವಾದಿ ಬರಲಿಕ್ಕಿಲ್ಲ' ಎಂದು ಮಾತ್ರವಾಗಿದೆ."

(ಅಲ್ ಯವಾಖೀತು ವಲ್ ಜವಾಹಿರ್ - ಸಂಪುಟ 2 ಪುಟ 27)

ಇಮಾಮ್ ಶಿಅರಾನಿಯವರ ವಿವರಣೆ ಬಹಳ ಸ್ಪಷ್ಟವಾಗಿದೆ. ಅದರ ಬಗ್ಗೆ ಬುದ್ಧಿಶಾಲಿಯಾದ ಯಾರೂ ಒಂದು ಕ್ಷಣ ಸಹ ಸಂಶಯಪಡಲಾರ. ಆದರೆ ಯಾರಾದರೂ ಕುತರ್ಕಿಯಾದ ವ್ಯಕ್ತಿ ಇಮಾಮ್ ಶಿಅರಾನಿಯವರಿಗೆ ನುಬುವ್ವತ್ ಬಗ್ಗೆ ವೈಯಕ್ತಿಕವಾಗಿ ಹೀಗೆ ಅಭಿಪ್ರಾಯ ಇತ್ತು, ಹಾಗೆ ಅಭಿಪ್ರಾಯ ಇತ್ತೆಂದು ವಾದಿಸಿ ನಮ್ಮನ್ನು ಹೆಚ್ಚಿನ ವಾಗ್ವಾದಕ್ಕೆ ಗುರಿಪಡಿಸುವುದಾದರೆ ನಮಗೆ ಹೇಳಲಿಕ್ಕಿರುವುದು ಇಷ್ಟೇ: ಪ್ರವಾದಿ ಬರುವ ಕುರಿತು ಹಝ್ರತ್ ಇಮಾಮ್ ಶಿಅರಾನಿಗೆ ವೈಯಕ್ತಿಕವಾಗಿ ಯಾವ ಅಭಿಪ್ರಾಯ ಇದ್ದಿತೆಂಬ ವಿಷಯದ ಕುರಿತು ಇಲ್ಲಿ ಚರ್ಚೆ ಇಲ್ಲ. ನಮ್ಮ ಉದ್ದೇಶ - ಲಾ ನಬಿಯ್ಯ ಬಅ್‌ದೀ ಎಂಬ ಹದೀಸಿಗೆ ಹಝ್ರತ್ ಇಮಾಮ್ ಶಿಅರಾನಿ ನೀಡಿದ ಅರ್ಥ ಏನೆಂಬುದು ಮಾತ್ರ ಇಲ್ಲಿ ಚರ್ಚಾ ವಿಷಯವಾಗಿದೆ.

ಹಝ್ರತ್ ಮುಲ್ಲಾ ಅಲಿ ಖಾರಿಯವರ ಅಭಿಪ್ರಾಯದ ಕುರಿತು ನಾವು ಈ ಮೊದಲು ಹೀಗೆಯೇ ಹೇಳಿದ್ದೇವೆ.

ಹಝ್ರತ್ ಇಮಾಮ್ ಶಿಅರಾನಿ "ಲಾ ನಬಿಯ್ಯ ಬಅ್‌ದೀ" ಎಂಬ ಹದೀಸಿಗೆ ಅರ್ಥ ಹೇಳಿದುದು "ಲಾ ಮುಶರ್ರಿಅ ಬಅ್‌ದಹು" ಅಂದರೆ, "ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ನಂತರ ಹೊಸ ಶರೀಅತ್ ತರುವ ಪ್ರವಾದಿ ಬರಲಿಕ್ಕಿಲ್ಲ" ಎಂದಾಗಿದೆ. ಆದುದರಿಂದ ಚರ್ಚೆಗೆ ಸಂಬಂಧಿಸದ ವಿಷಯಗಳ ಕಡೆ ಗಮನ ಸೆಳೆದು ಜನರನ್ನು ವಂಚಿಸಬೇಡಿರಿ.

## ಪ್ರತಿಯೊಬ್ಬ ಪ್ರವಾದಿ ಹೊಸ ಶರೀಅತ್ ತರಬೇಕಾದುದು ಆವಶ್ಯಕವಾಗಿಲ್ಲ

ಹೊಸ ಶರೀಅತ್ ತರುವವರೇ ನಬಿಯಾಗಿರುತ್ತಾರೆ ಎಂದು ಇಮಾಮ್ ಶಿಅರಾನಿ ಭಾವಿಸುತ್ತಿದ್ದರು ಎಂದು ನಾವು ಊಹಿಸುವುದಾದರೆ (ಇದೊಂದು ಊಹೆ ಮಾತ್ರ) ಈ ಭಾವನೆ ಸರಿಯಾದುದಲ್ಲ. ಏಕೆಂದರೆ ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ:

وَلَقَدْ آتَيْنَا مُوسَى الْكِتَابَ وَقَفَّيْنَا مِن بَعْدِهِ بِالرُّسُلِ

" ನಾವು ಮೂಸಾ ಪ್ರವಾದಿಯ ನಂತರ ಒಬ್ಬರ ಹಿಂದೆ ಇನ್ನೊಬ್ಬರಂತೆ ಪ್ರವಾದಿಗಳನ್ನು ಕಳುಹಿಸಿದೆವು."

(ಸೂರತುಲ್ ಬಖರ : 88)

ಪುನಃ ಅಲ್ಲಾಹನು ಹೀಗೆ ಹೇಳುತ್ತಾನೆ:

إِنَّا أَنزَلْنَا التَّوْرَاةَ فِيهَا هُدًى وَنُورٌ يَحْكُمُ بِهَا
النَّبِيُّونَ الَّذِينَ أَسْلَمُوا لِلَّذِينَ هَادُوا۔

"ನಾವು ತೌರಾತನ್ನು ಅವತೀರ್ಣಗೊಳಿಸಿದೆವು. ಅದರಲ್ಲಿ ಮಾರ್ಗದರ್ಶನ ಮತ್ತು ಪ್ರಕಾಶವಿದ್ದಿತು. ಆಜ್ಞೆಗಳ ಪಾಲಕರಾದ ಪ್ರವಾದಿಗಳು ಯಹೂದಿಯರಿಗಾಗಿ ತಮ್ಮ ಎಲ್ಲಾ ತೀರ್ಮಾನಗಳನ್ನು ಅದಕ್ಕೆ (ತೌರಾತಿಗೆ) ಅನುಸಾರವಾಗಿ ಮಾಡುತ್ತಿದ್ದರು."

(ಸೂರತುಲ್ ಮಾಇದ :45)

ಇದು ಸ್ಪಷ್ಟವಾದ ವಚನವಾಗಿದೆ. ಇದರ ಅರ್ಥದ ಕುರಿತು ಯಾವುದೇ ಸಂಶಯಕ್ಕೆ ಆಸ್ಪದವಿರುವುದಿಲ್ಲ. ಪವಿತ್ರ ಖುರ್‌ಆನಿನ ಇತರ ಅನೇಕ ವಚನಗಳು ಸಹ ಈ ವಚನವನ್ನು ಪುಷ್ಟೀಕರಿಸುತ್ತವೆ. ಹದೀಸುಗಳಿಂದಲೂ ಇದು ಸಾಬೀತಾಗುತ್ತದೆ. ಒಂದು ಹದೀಸು ಹೀಗೆ ಇದೆ:

"ಲೋಕದಲ್ಲಿ ಒಂದು ಲಕ್ಷದ ಇಪ್ಪತ್ತನಾಲ್ಕು ಸಾವಿರ ಪ್ರವಾದಿಗಳು ಆಗಮಿಸಿದ್ದರು. ಶರೀಅತ್ ತಂದವರು ಅವರ ಪೈಕಿ ಮುನ್ನೂರ ಹದಿನೈದು ಪ್ರವಾದಿಗಳು ಮಾತ್ರ. "

(ಮುಸ್‌ನದ್ ಅಹ್ಮದ್ ಮತ್ತು ಮಿರ್‌ಖಾತ್ ಶರಹ್ ಮಿಶ್ಕಾತ್

ಸಂಪುಟ 5 ಪುಟ 352).

ವಾಸ್ತವಿಕ ಸಾಕ್ಷ್ಯಗಳು ಇದೇ ಮಾತನ್ನು ಸಾಬೀತುಗೊಳಿಸುತ್ತವೆ. ಲೋಕದ ಚರಿತ್ರೆಯನ್ನು ಅಧ್ಯಯನ ಮಾಡಿದರೆ ಶರೀಅತ್ ಲಭಿಸಿರದ ಅನೇಕ ಪ್ರವಾದಿಗಳ ಕುರಿತು ತಿಳಿಯಬಹುದಾಗಿದೆ. ಅನೇಕ ಪ್ರವಾದಿಗಳು ತಮಗಿಂತ ಮೊದಲು ಆಗಮಿಸಿದ ಪ್ರವಾದಿಗಳು ತಂದಂತಹ ಶರೀಅತಿನ ಸೇವೆಗಾಗಿ ಆಗಮಿಸಿದ್ದರು. ಜನರ ವಿಶ್ವಾಸ ಮತ್ತು ಆಚಾರಗಳ ಪರಿಷ್ಕರಣೆಗಾಗಿ ಅವರು ಆಗಮಿಸಿದ್ದರು. ಹಝ್ರತ್ ಮೂಸಾ ಅಲೈಹಿಸ್ಸಲಾಮರ ಆಗಮನದ ನಂತರ ಹಝ್ರತ್ ದಾವೂದ್ ಅಲೈಹಿಸ್ಸಲಾಮ್, ಹಝ್ರತ್ ಸುಲೈಮಾನ್ ಅಲೈಹಿಸ್ಸಲಾಮ್, ಹಝ್ರತ್ ಝಕರಿಯ್ಯ ಅಲೈಹಿಸ್ಸಲಾಮ್ ಮತ್ತು ಹಝ್ರತ್ ಯಹ್‌ಯಾ ಅಲೈಹಿಸ್ಸಲಾಮ್ ಕಳುಹಿಸಲ್ಪಟ್ಟರು.

ಸಾಮಾನ್ಯ ಬುದ್ಧಿಗೆ ಸಹ ಇದೇ ಮಾತು ಸರಿ ಎಂದು ತೋರುತ್ತದೆ. ಪ್ರವಾದಿಗಳನ್ನು ಕಳುಹಿಸುವುದರ ಮೂಲಕ ಅಲ್ಲಾಹನು ಮೂಲತಃ ಉದ್ದೇಶಿಸುವುದು ಜನರ ಸುಧಾರಣೆಯಾಗಿದೆ. ಇದು ಹೊಸ ಶರೀಅತ್ ಅವತೀರ್ಣ ಮಾಡುವ ಮೂಲಕ ಅಥವಾ ಹಳೆಯ ಶರೀಅತನ್ನು ನವೀಕರಿಸುವ ಮೂಲಕ ಸಂಭವಿಸುತ್ತದೆ.

ಪವಿತ್ರ ಖುರ್‌ಆನ್, ಹದೀಸ್‌ಗಳು, ಚರಿತ್ರೆ ಮತ್ತು ಬುದ್ಧಿಶಕ್ತಿ ಇವುಗಳ ಐಕ್ಯಮತ್ಯದ ಸಾಕ್ಷ್ಯವೇನೆಂದರೆ - ಪ್ರತಿಯೊಬ್ಬ ನಬಿ ಶರೀಅತ್ ತರುವುದು ಆವಶ್ಯಕ ಎಂದು ಇಮಾಮ್ ಶಿಅರಾನಿ ಆಗಲೀ ಬೇರೆ ಯಾವ ಮಹಾನುಭವರಾಗಲೀ ಭಾವಿಸಿರಲಾರರು. ನಮ್ಮ ಅಭಿಪ್ರಾಯವನ್ನೇ ಇಮಾಮ್ ಶಿಅರಾನಿ ಅಂಗೀಕರಿಸಿರುವರೆಂದು ನಾವು ಭಾವಿಸುತ್ತೇವೆ.

ಒಟ್ಟಾರೆ ಹೇಳುವುದಾದರೆ ಲಾ ನಬಿಯ್ಯ ಬಅ್‌ದೀ ಎಂಬ ಹದೀಸನ್ನು ನಾವು ಸತ್ಯವೆಂದು ಅಂಗೀಕರಿಸುತ್ತೇವೆ. ಆದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ನಂತರ ನುಬುವ್ವತಿನ ಶೃಂಖಲೆ ಸಂಪೂರ್ಣವಾಗಿ ಮುಗಿತಾಯವಾಗಿದೆ ಎಂದು ಈ ಹದೀಸಿನ ಅರ್ಥ ಖಂಡಿತವಾಗಿಯೂ ಅಲ್ಲ. ಈ ಹದೀಸಿನ ಅರ್ಥ ಇಷ್ಟು ಮಾತ್ರವಾಗಿದೆ: ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನುಬುವ್ವತಿನ ವ್ಯಾಪ್ತಿ ಖಿಯಾಮತ್ ತನಕ ಇದೆ. ಅವರ ಶರೀಅತನ್ನು ರದ್ದುಗೊಳಿಸುವ ಯಾವುದೇ ಪ್ರವಾದಿ ಬರಲು ಸಾಧ್ಯವಿಲ್ಲ. ಅವರ ಉಮ್ಮತ್‌ಗೆ (ಸಮುದಾಯಕ್ಕೆ) ಸೇರದ ಪ್ರವಾದಿ ಸಹ ಬರಲಿಕ್ಕಿಲ್ಲ. ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾರವರು ಸ್ಪಷ್ಟಪಡಿಸಿದಂತೆ ಖಾತಮುನ್ನಬಿಯ್ಯೀನ್ ಆಯತ್ ಪ್ರಕಾರ ಝಿಲ್ಲೀ ಮತ್ತು ಉಮ್ಮತೀ ಪ್ರವಾದಿ ಬರುವರು. ಅಂತಹ ಪ್ರವಾದಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುದ್ರೆಯನ್ನು ಪಡೆದು ನುಬುವ್ವತಿನ ಸ್ಥಾನಕ್ಕೆ ತಲಪುವರು.

## "ಇನ್ನೀ ಆಖಿರುಲ್ ಅಂಬಿಯಾ" ಎಂಬ ಹದೀಸಿನ ವಿವರಣೆ

ನಮ್ಮ ವಿರೋಧಿಗಳು ಸೂಚಿಸುವ ಇನ್ನೊಂದು ಹದೀಸು "ಇನ್ನೀ ಆಖಿರುಲ್ ಅಂಬಿಯಾ" (ನಾನು ಅಂತಿಮ ಪ್ರವಾದಿ) ಎಂದು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಹೇಳಿದರು ಎಂದಾಗಿದೆ. ಈ ಹದೀಸನ್ನು ಉಲ್ಲೇಖಿಸಿ ಹೀಗೆ ಹೇಳಲಾಗುತ್ತದೆ:

"ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಸ್ವತಃ ತೀರ್ಪು ಹೇಳಿದ್ದಾರೆ - 'ನಾನು ಅಂತಿಮ ಪ್ರವಾದಿ' ಎಂದು. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ತೀರ್ಪಿನ ನಂತರ ಬೇರೆ ಪ್ರಶ್ನೆಗಳೇನೂ ಇರುವುದಿಲ್ಲ."

ಇದಕ್ಕೆ ನಮ್ಮ ಉತ್ತರವೇನೆಂದರೆ - ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ನುಬುವ್ವತಿನ ಕಾಲಘಟ್ಟ ಮುಗಿತಾಯವಾಗಲಾರದು ಎಂದೂ ಅದು ಮುಗಿತಾಯವಾಗಿ ಅನಂತರ ಯಾವ ಪ್ರವಾದಿಯೂ ಬರಲಿಕ್ಕಿಲ್ಲ ಎಂದೂ ನಾವು ನಂಬುತ್ತೇವೆ. ಆದುದರಿಂದ ವಾಸ್ತವಿಕವಾಗಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ್‌ವರೇ ಆಖಿರೀ ನಬಿ ಎಂದು ನಾವು ನಂಬುತ್ತೇವೆ. ನಾವು ಎಂದೂ ಈ ಸತ್ಯವನ್ನು ನಿರಾಕರಿಸಿಲ್ಲ. ಆದರೆ ನಮ್ಮ ವಿರೋಧಿಗಳು ನಮ್ಮ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳಲು ಯತ್ನಿಸದೆ ಮತ್ತು ಕೆಲವು ಸಾರಿ ಉದ್ದೇಶಪೂರ್ವಕವಾಗಿ ನಮ್ಮ ಮೇಲೆ ಅಪವಾದ ಹೊರಿಸುತ್ತಾರೆ. ನಾವು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರನ್ನು ಆಖಿರೀ ನಬಿ (ಅಂತಿಮ ಪ್ರವಾದಿ) ಎಂದು ನಂಬುವುದಿಲ್ಲ ಎಂದು ನಮ್ಮ ಮೇಲೆ ಸುಳ್ಳು ಆರೋಪ ಹೊರಿಸುತ್ತಾರೆ. ಯಾವ ಅರ್ಥದಲ್ಲಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರು ತಮ್ಮನ್ನು ಆಖಿರೀ ನಬಿ ಎಂದು ಹೇಳಿರುವರೋ ಅದೇ ಅರ್ಥದಲ್ಲಿ ನಾವು ಅವರನ್ನು ನಿಸ್ಸಂಶಯವಾಗಿಯೂ ಆಖಿರೀ ನಬಿ ಎಂದು ದೃಢವಾಗಿ ನಂಬುತ್ತೇವೆ.

ಲಅನತುಲ್ಲಾಹಿ ಅಲಾ ಮನ್ ಕಝಬ

(ಸುಳ್ಳು ಹೇಳುವವನ ಮೇಲೆ ಅಲ್ಲಾಹನ ಶಾಪ ಎರಗಲಿ)

## ಮೂರು ವಿಧಗಳ ಪ್ರವಾದಿಗಳು

ನಾವು ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರನ್ನು ಯಾವ ರೀತಿಯ ನಬಿ ಎಂದು ನಂಬುತ್ತೇವೆ ಎಂಬುದರ ಕುರಿತು ಸಮಾಧಾನಚಿತ್ತರಾಗಿ ಯೋಚಿಸದ ಕಾರಣದಿಂದ ಮೇಲೆ ವಿವರಿಸಿದಂತಹ ಆಕ್ಷೇಪಗಳು ತಲೆದೋರುತ್ತವೆ. ನಬಿ ಎಂಬ ಶಬ್ದ ಕೇಳಿದ ಕೂಡಲೇ ಈ ಜನರು ಬೊಬ್ಬೆ ಹೊಡೆಯುತ್ತಾರೆ. "ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಖತ್‌ಮೆ ನುಬುವ್ವತ್‌ಗೆ ಭಂಗ ಉಂಟಾಗಿದೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಸ್ಥಾನದಲ್ಲಿ ಬೇರೆ ಒಬ್ಬ ವ್ಯಕ್ತಿಯನ್ನು ಆಖಿರೀ ನಬಿ ಎಂದು ಹೇಳುತ್ತಿದ್ದಾರೆ" ಎಂದೆಲ್ಲಾ ಈ ಜನರು ಪ್ರಚಾರ ಮಾಡುತ್ತಾರೆ.

ತಪ್ಪು ಭಾವನೆ ಹೊಂದಿರುವ ನಮ್ಮ ಈ ಮಿತ್ರರು ಸ್ವಲ್ಪ ಹೊತ್ತು ಸಹನೆದೋರಿ ತಮ್ಮ ಹೃದಯಗಳನ್ನು ಶುದ್ಧೀಕರಿಸಿ ನುಬುವ್ವತ್ ಎಂದರೇನು? ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಮುಚ್ಚಿದ ಕಾಲುವೆ ಯಾವುದು? ಅವರು ತೆರೆದ ಕಾಲುವೆ ಯಾವುದು? ಎಂದು ಸ್ವಲ್ಪ ಹೊತ್ತು ಯೋಚಿಸುತ್ತಿದ್ದರೆ ಎಷ್ಟು ಚೆನ್ನಾಗಿತ್ತು!

ನಮ್ಮ ಓದುಗರು ಮರೆತು ಬಿಟ್ಟಿದ್ದರೆ ನಾನು ಪವಿತ್ರ ಖುರ್‌ಆನ್, ಹದೀಸುಗಳು ಮತ್ತು ಚರಿತ್ರೆಯ ಸಹಾಯದಿಂದ ನುಬುವ್ವತ್ ಮೂರು ರೀತಿಗಳಲ್ಲಿ ಇವೆ ಎಂದು ವಿವರಿಸಲು ಇಚ್ಛಿಸುತ್ತೇನೆ.

1. **ತಶ್‌ರೀಈ ನುಬುವ್ವತ್ :** ಶರೀಅತ್ ತರುವ ನುಬುವ್ವತ್. ಹೊಸ ಶರೀಅತ್‌ನೊಂದಿಗೆ ಹೊಸ ಕಾಲಘಟ್ಟ ಆರಂಭವಾಗುತ್ತದೆ. ಹಝ್ರತ್ ಮೂಸಾ ಅಲೈಹಿ ಸ್ಸಲಾಮ್ ಶರೀಅತ್ ತಂದ ಪ್ರವಾದಿ ಆಗಿದ್ದರು. ತೌರಾತ್ ಅವರಿಗೆ ಅವತೀರ್ಣಗೊಂಡ ಶರೀಅತ್ ಆಗಿತ್ತು. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಸಹ ಶರೀಅತ್ ತಂದ ಪ್ರವಾದಿ ಆಗಿದ್ದರು. ಶಾಶ್ವತ ಶರೀಅತ್ ಆಗಿರುವ ಪವಿತ್ರ ಖುರ್‌ಆನ್ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರಿಗೆ ಅವತೀರ್ಣಗೊಂಡಿತು. ಇಂತಹ ನುಬುವ್ವತ್ ಮುಸ್ತಖಿಲ್ ಅಥವಾ ಸ್ವತಂತ್ರವಾಗಿರುತ್ತದೆ. ಇಂತಹ ಪ್ರವಾದಿಗಳಿಗೆ ಹೊಸ ಶರೀಅತ್ ಅವತೀರ್ಣವಾಗುತ್ತದೆ. ಅವರು ತಮಗಿಂತ ಮೊದಲಿನ ಪ್ರವಾದಿಯನ್ನು ಅನುಸರಿಸದೆ ನೇರವಾಗಿ ಪ್ರವಾದಿತ್ವವನ್ನು ಗಳಿಸುತ್ತಾರೆ. ಇದೇ ಕಾರಣದಿಂದ ಇಂತಹ ನುಬುವ್ವತನ್ನು ಹಖೀಖೀ ನುಬುವ್ವತ್ ಎಂದು ಸಹ ಕರೆಯುತ್ತಾರೆ.

2. **ಗೈರ್ ತಶ್‌ರೀಈ ನುಬುವ್ವತ್ :** ಶರೀಅತ್ ಇಲ್ಲದ ಮುಸ್ತಖಿಲ್ (ಸ್ವತಂತ್ರ) ನುಬುವ್ವತ್. ಇಂತಹ ಪ್ರವಾದಿಗಳಿಗೆ ಹೊಸ ಶರೀಅತ್ ಅವತೀರ್ಣವಾಗಿರುವುದಿಲ್ಲ. ಆದರೆ ಇಂತಹ ಪ್ರವಾದಿಗಳು ತಮಗಿಂತ ಮೊದಲು ಆಗಮಿಸಿದ ಪ್ರವಾದಿಯನ್ನು ಅನುಸರಿಸದೆ ನೇರವಾಗಿ ನುಬುವ್ವತ್ ಪದವಿ ಗಳಿಸುತ್ತಾರೆ. ಇದೇ ಕಾರಣದಿಂದ ಈ ನುಬುವ್ವತನ್ನು ಮುಸ್ತಖಿಲ್ (ಸ್ವತಂತ್ರ) ನುಬುವ್ವತ್ ಎಂದು ಹೇಳುತ್ತಾರೆ. ಈ ನುಬುವ್ವತ್‌ಗೆ ಉದಾಹರಣೆ: ಹಝ್ರತ್ ಮೂಸಾ ಅಲೈಹಿಸ್ಸಲಾಮರ ನಂತರ ಹಝ್ರತ್ ದಾವೂದ್ (ಅ), ಹಝ್ರತ್ ಸುಲೈ ಮಾನ್(ಅ), ಹಝ್ರತ್ ಯಹ್‌ಯಾ (ಅ), ಹಝ್ರತ್ ಝಕರಿಯ್ಯಾ(ಅ) ಮತ್ತು ಹಝ್ರತ್ ಈಸಾ ಅಲೈಹಿಸ್ಸಲಾಮ್. ಈ ಪ್ರವಾದಿಗಳು ಹಝ್ರತ್ ಮೂಸಾ ಅಲೈಹಿಸ್ಸಲಾಮರ ಶರೀಅತ್‌ಗೆ ಅಧೀನರಾಗಿದ್ದರು. ಆದರೆ ಅವರಿಗೆ ಹಝ್ರತ್ ಮೂಸಾ ಅಲೈಹಿಸ್ಸಲಾಮ್‌ರನ್ನು ಅನುಸರಿಸಿದ ಅನುಗ್ರಹದ ಮೂಲಕ ಪ್ರವಾದಿತ್ವ ಲಭಿಸಿದುದಾಗಿರಲಿಲ್ಲ. ಅವರಿಗೆ ಪ್ರವಾದಿತ್ವವು ಸ್ವತಂತ್ರ ರೂಪದಲ್ಲಿ ಲಭಿಸಿತ್ತು. ಅನಂತರ ಅಲ್ಲಾಹನಿಂದ ಅವರನ್ನು ತೌರಾತಿನ ಸೇವೆಗಾಗಿ ನೇಮಿಸಲಾಯಿತು.

3. **ಗೈರ್ ತಶ್‌ರೀಈ, ಗೈರ್ ಮುಸ್ತಖಿಲ್ ನುಬುವ್ವತ್ :** ಇದನ್ನು ಝಿಲ್ಲೀ ನುಬುವ್ವತ್ ಎಂದೂ ಹೇಳುತ್ತಾರೆ. ಇಂತಹ ನುಬುವ್ವತ್ ಅದಕ್ಕಿಂತ ಮೊದಲು ಬಂದ ಪ್ರವಾದಿಯನ್ನು ಅನುಸರಿಸುವ ಮೂಲಕ ಲಭಿಸುತ್ತದೆ. ಮೊದಲು ಬಂದ ತಶ್‌ರೀಈ ಪ್ರವಾದಿಯ ಶಿಷ್ಯತ್ವವನ್ನು ಪಡೆಯುವ ಮೂಲಕ ಅವರ ಝಿಲ್ಲ್ ಅಥವಾ ನೆರಳಿನ ರೂಪದಲ್ಲಿ ಅನುಗ್ರಹ ಪಡೆದು ಈ ಪ್ರವಾದಿತ್ವ ಲಭಿಸುತ್ತದೆ. ಇಂತಹ ನುಬುವ್ವತ್ ಅದಕ್ಕಿಂತ ಮೊದಲು ಆಗಮಿಸಿದ ತಶ್‌ರೀಈ ಪ್ರವಾದಿಯ ನುಬುವ್ವತಿನ ಭಾಗವೇ ಆಗಿರುತ್ತದೆ. ಇಂತಹ ಪ್ರವಾದಿಯನ್ನು "ಉಮ್ಮತೀ ನಬಿ" ಎಂದು ಕರೆಯುತ್ತಾರೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಗಮನದ ನಂತರ ಮಾತ್ರ ಇಂತಹ ನುಬುವ್ವತ್ ಪ್ರಕಟಗೊಂಡಿತು. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗಿಂತ ಮೊದಲು ಆಗಮಿಸಿದ ಯಾವುದೇ ಪ್ರವಾದಿ ಇಂತಹ ಮಹತ್ವಪೂರ್ಣ ಸ್ಥಾನ ಪಡೆದಿರಲಿಲ್ಲ. ಪವಿತ್ರ ಖುರ್‌ಆನ್‌ಗೆ ಮುಂಚಿತವಾಗಿ ಅವತೀರ್ಣವಾದ ಯಾವುದೇ ಶರೀಅತ್‌ಗೆ ಇಂತಹ ವೈಭವ ಲಭಿಸಿರಲಿಲ್ಲ. ಒಂದು ಶರೀಅತನ್ನು ಅನುಸರಿಸುವ ಮೂಲಕ ನುಬುವ್ವತಿಗೆ ತಲಪಿಸಲು ಯಾವುದೇ ಶರೀಅತ್ ಅರ್ಹತೆ ಪಡೆದಿರಲಿಲ್ಲ.

## ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಅಂತಿಮ ಪ್ರವಾದಿಯೇ ಆಗಿದ್ದಾರೆ.

ನಾವು ಇದರ ಮೊದಲು ಪದೇ ಪದೇ ವಿವರಿಸಿದ ವಿಷಯಗಳಿಂದ ಒಂದು ಸಂಗತಿ ಸ್ಪಷ್ಟವಾಗುತ್ತದೆ. ಏನೆಂದರೆ, ಶರೀಅತ್ ಹೊಂದಿದ ತಶ್‌ರೀಈ ನುಬುವ್ವತ್ ಮತ್ತು ಸ್ವತಂತ್ರವಾದ ಮುಸ್ತಖಿಲ್ ನುಬುವ್ವತ್ - ಈ ಎರಡು ವಿಧಗಳ ನುಬುವ್ವತ್ ಸಂಪೂರ್ಣವಾಗಿ ಕೊನೆಗೊಂಡಿದೆ. ಈ ಬಗ್ಗೆ ಯಾರಿಗೂ ಯಾವ ಆಕ್ಷೇಪವೂ ಇರಲು ಸಾಧ್ಯವಿಲ್ಲ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ನಂತರ ಯಾವುದೇ ಶರೀಅತ್ ತರುವ ತಶ್‌ರೀಈ ನಬಿ ಬರಲಿಕ್ಕಿಲ್ಲವೆಂದು ಮತ್ತು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರನ್ನು ಅನುಸರಿಸದೆ ಸ್ವತಂತ್ರವಾಗಿ ಯಾರಿಗೂ ನುಬುವ್ವತ್ ದೊರಕಲಾರದು ಎಂದು ಎಲ್ಲಾ ಜನರು ಒಮ್ಮತಾಭಿಪ್ರಾಯ ಹೊಂದಿರುತ್ತಾರೆ. ಈ ಅರ್ಥದಲ್ಲಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಆಖಿರೀ ನಬಿ (ಅಂತಿಮ ಪ್ರವಾದಿ) ಆಗಿರುತ್ತಾರೆ. ಇನ್ನು ಉಳಿದಿರುವುದು ಮೂರನೆಯ ರೀತಿಯ ನುಬುವ್ವತಿನ ಪ್ರಶ್ನೆಯಾಗಿದೆ - ಇದು ನೆರಳಿನ ರೂಪದ ನುಬುವ್ವತ್ ಅಥವಾ ಝಿಲ್ಲೀ ನುಬುವ್ವತ್. ಈ ಬಗ್ಗೆ ಯಾರಾದರೂ ಸ್ವಲ್ಪ ಹೊತ್ತು ಚಿಂತಿಸಿದರೆ ಹೀಗೆ ಮನವರಿಕೆ ಮಾಡಬಹುದು: ಈ ರೀತಿಯ ಪ್ರವಾದಿ ಆಗಮಿಸಿದರೂ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರು ಆಖಿರೀ ನಬಿಯಾಗಿಯೇ ಇರುತ್ತಾರೆ. ಏಕೆಂದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರನ್ನು ಅನುಸರಿಸಿ ಅವರಿಗೆ ದೊರೆತ ಆಧ್ಯಾತ್ಮಿಕ ಅನುಗ್ರಹಗಳಿಂದ ನುಬುವ್ವತ್ ಪಡೆಯುವ ಮಹಾನುಭಾವರು ಅವರ ಶಾಖೆಯೇ ಅವರ ಭಾಗವೇ ಆಗಿರುತ್ತಾರೆ. ಅಂತಹ ಮಹಾನುಭಾವರು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರಿಂದ ಬೇರ್ಪಟ್ಟವರಾಗಿರುವುದಿಲ್ಲ. ಅಂತಹ ಮಹಾನುಭಾವರ ಅಸ್ತಿತ್ವ, ಸೂರ್ಯನ ಕಿರಣಗಳನ್ನು ಪ್ರತಿಬಿಂಬಿಸುವ ಪೂರ್ಣಿಮೆಯ ರಾತ್ರಿಯ ಚಂದ್ರನಂತಹ ಒಂದು ಕನ್ನಡಿಯಂತಿದೆ. ಇದಕ್ಕಿಂತಲೂ ಹೆಚ್ಚೇನೂ ಇಲ್ಲ. ಈ ರೀತಿಯಲ್ಲಿಯೂ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಆಖಿರೀ ನಬಿಯೇ ಆಗಿರುತ್ತಾರೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಪ್ರಕಾಶದಿಂದ ಪ್ರಕಾಶ ಪಡೆದು ಬೆಳಕನ್ನು ನೀಡುತ್ತಿರುವವರು ಕೇವಲ ಪ್ರತಿಬಿಂಬವಾಗಿರುತ್ತಾರಲ್ಲದೆ ಮೂಲ ಬಿಂಬವಾಗಿರುವುದಿಲ್ಲ.

ಈ ಉದಾಹರಣೆಯನ್ನು ಈ ಕೆಳಗಿನಂತೆಯೂ ಮನವರಿಕೆ ಮಾಡಿಕೊಳ್ಳಬಹುದು. ಒಬ್ಬ ವ್ಯಕ್ತಿ ಒಂದು ತೋಟವನ್ನು ಮಾಡಿದನು. ಅದರಲ್ಲಿ ವಿವಿಧ ಮರ ಗಿಡಗಳನ್ನು ನೆಡಲಾಯಿತು. ಆ ತೋಟದಲ್ಲಿ ಕೊನೆಯದಾಗಿ ಎಲ್ಲದಕ್ಕಿಂತ ಉನ್ನತವೂ ಎಲ್ಲದಕ್ಕಿಂತ ಶ್ರೇಷ್ಠವೂ ಎಲ್ಲದಕ್ಕಿಂತ ದೊಡ್ಡದೂ ಎಲ್ಲದಕ್ಕಿಂತ ಹೆಚ್ಚು ಫಲಭರಿತವೂ ಆಗಿರುವ ಒಂದು ಮರವನ್ನು ನೆಡಲಾಯಿತು. ಒಂದು ಕಾಲಾವಧಿಯ ನಂತರ ಈ ಕೊನೆಯದಾಗಿ ನೆಟ್ಟ ಬೃಹತ್ ವೃಕ್ಷದ ಬೇರಿನಿಂದ ಅದರದೇ ಒಂದು ಶಾಖೆ

ಹುಟ್ಟಿ ಬೆಳೆಯಿತು. ಅದು ಆ ಬೃಹತ್ ವೃಕ್ಷದ ಭಾಗವೂ ಅದರ ಮರಿಯೂ ಆಗಿತ್ತು. ಈ ಗಿಡ ಹುಟ್ಟಿದುದರಿಂದ ಆ ಮರವು ಕೊನೆಯದಾಗಿ ನೆಟ್ಟದ್ದು ಎಂಬ ಅದರ ಸ್ಥಾನಕ್ಕೆ ಭಂಗವುಂಟಾಗುವುದೇ? ಖಂಡಿತವಾಗಿಯೂ ಇಲ್ಲ. ಈ ಹೊಸ ಗಿಡ ಮೊಳಕೆ ಬಂದಿದ್ದರೂ ಆ ದೊಡ್ಡ ವೃಕ್ಷವೇ ಕೊನೆಯದಾಗಿ, ಅಂತಿಮವಾಗಿ ನೆಟ್ಟ ಮರವೆಂಬ ಖ್ಯಾತಿಯನ್ನು ಉಳಿಸಿಕೊಳ್ಳುವುದು. ನಮ್ಮ ವಿರೋಧಿಗಳು ಈ ವಿಷಯದ ಕುರಿತು ಸ್ವಲ್ಪ ಗಮನಹರಿಸಿ ಚಿಂತಿಸಿದರೆ ಅವರಿಗೆ ಈ ಸಂಗತಿ ಮನವರಿಕೆ ಆಗುವುದೆಂದೂ ಅವರು ತಮ್ಮ ಕುತರ್ಕಗಳಿಂದ ಉಂಟುಮಾಡಿದ ಗೊಂದಲವನ್ನು ಪರಿಹರಿಸಿಕೊಳ್ಳುವರೆಂದೂ ಅವರಿಗೆ ಈ ವಿಷಯವು ಮಧ್ಯಾಹ್ನದ ಸೂರ್ಯನ ಹಾಗೆ ಸ್ಪಷ್ಟವಾಗಿ ಗೋಚರವಾಗುವುದೆಂದೂ ಯಾವುದೇ ಸಂಶಯ ಬಾಕಿಯಾಗಿ ಉಳಿಯದೆಂದೂ ನಾನು ದೃಢವಾಗಿ ನಂಬುತ್ತೇನೆ.

## ಆಖೈರಿ ನಬಿ ಮತ್ತು ಆಖೈರಿ ಮಸ್‌ಜಿದ್

ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರು "ನಾನು ಆಖೈರಿ ನಬಿ" ಎಂದು ಹೇಳಿದ ಹದೀಸನ್ನು ಸ್ಪಷ್ಟವಾಗಿ ವಿವರಿಸಿದ್ದಾರೆ. ಆ ವಿವರಣೆ ಇರುವಾಗ ನಾವು ಈ ಬಗ್ಗೆ ಹೆಚ್ಚಿನ ವಿವರಣೆ ನೀಡಬೇಕಾಗಿಲ್ಲ.

"ಇನ್ನೀ ಆಖಿರುಲ್ ಅಂಬಿಯಾ" ( ನಾನು ಅಂತಿಮ ಪ್ರವಾದಿ ಆಗಿದ್ದೇನೆ) ಎಂಬ ಹದೀಸು ಪರಿಪೂರ್ಣವಾದ ರೂಪದಲ್ಲಿ "ಸಹೀಹ್ ಮುಸ್ಲಿಮ್"ನಲ್ಲಿ ವರದಿಯಾಗಿದೆ. ಸಹೀಹ್ ಮುಸ್ಲಿಮ್ ಗ್ರಂಥದಲ್ಲಿ ಈ ಹದೀಸನ್ನು ಈ ಕೆಳಗಿನಂತೆ ಬರೆಯಲಾಗಿದೆ:

ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಹೀಗೆ ಹೇಳಿದರು:

إنّی اٰخر الانبیّاء وانّ مسجدی اٰخر المساجد

(صحیح مسلم باب فضل الصلوٰۃ فی مسجد المدینۃ)

**"ನಾನು ಆಖೈರಿ ನಬಿಯಾಗಿದ್ದೇನೆ. ನನ್ನ ಈ (ಮದೀನದ) ಮಸ್‌ಜಿದ್ ಆಖೈರಿ ಮಸ್‌ಜಿದ್ ಆಗಿದೆ."**

(ಸಹೀಹ್ ಮುಸ್ಲಿಮ್)

ನಮ್ಮ ಪರಿಶುದ್ಧ ಪೈಗಂಬರರಿಗೆ ಸಹಸ್ರ ಸಹಸ್ರ ದರೂದ್ ಪ್ರಾರ್ಥನೆಗಳನ್ನು ಅರ್ಪಿಸೋಣ. ಪ್ರತಿಯೊಂದು ಅಂಧಕಾರದ ಮೂಲೆಯಲ್ಲಿ ಹಝ್ರತ್ ಪೈಗಂಬರರು ಒಂದು ಬೆಳಕಿನ ದೀಪವನ್ನು ಇರಿಸಿರುತ್ತಾರೆ. ನಾವು ಮುಗ್ಗರಿಸಿ ಬೀಳಬಹುದಾದ ಪ್ರತಿಯೊಂದು ಹೊಂಡದಿಂದ ಅವರು ನಮ್ಮನ್ನು ಬೀಳುವುದರಿಂದ ರಕ್ಷಿಸಿ ನಾವು ನೇರವಾದ ಮಾರ್ಗವನ್ನು ಅವಲಂಬಿಸುವಂತೆ ಮಾಡಿರುವರು. **"ಇನ್ನೀ ಆಖಿರುಲ್ ಅಂಬಿಯಾ"** ಎಂಬ ಹದೀಸಿನ ಬಗ್ಗೆ ಕೆಲವು ಆತುರ ಪಡುವ ಸಮೀಪದೃಷ್ಟಿಯ ಜನರು ತಪ್ಪು ಗ್ರಹಿಕೆಗಳನ್ನು ಮಾಡಬಹುದಾಗಿದೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ರವರು "ಇನ್ನೀ ಆಖಿರುಲ್ ಅಂಬಿಯಾ" (ನಾನು ಅಂತಿಮ ಪ್ರವಾದಿ ಯಾಗಿದ್ದೇನೆ) ಎಂದು ಹೇಳಿದುದರಿಂದ ಪ್ರಾಯಶಃ ಅವರ ಅನಂತರ ಅವರ ಶಿಷ್ಯನಾಗಿರುವಂತಹ ಪ್ರವಾದಿ ಸಹ ಬರಲಾರರು ಎಂಬ ತಪ್ಪುಗ್ರಹಿಕೆ ಉಂಟಾಗುವ ಸಾಧ್ಯತೆಯ ನಿವಾರಣೆಗಾಗಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರು ಆ ತಪ್ಪು ಗ್ರಹಿಕೆಗೆ ಸಾಧ್ಯತೆ ಇರುವಲ್ಲಿ ಕೂಡಲೇ ಒಂದು ಪ್ರಕಾಶಮಾನವಾದ ಬೆಳಕನ್ನು ಇರಿಸಿ ತನ್ನ ಸಮುದಾಯವನ್ನು ಎಚ್ಚರಿಸಿರುವರು. " ಮದೀನದ ನನ್ನ ಈ ಮಸ್‌ಜಿದ್ ಹೇಗೆ ಆಖೈರಿ ಮಸ್‌ಜಿದ್ ಆಗಿದೆಯೋ ಅದೇ ಅರ್ಥದಲ್ಲಿ ನಾನು ಆಖೈರಿ ನಬಿ ಆಗಿರುವೆನು" ಎಂದು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಹೇಳಿರುವರು. ಮದೀನದ ಮಸ್‌ಜಿದ್ ಆಖೈರಿ ಮಸ್‌ಜಿದ್ (ಅಂತಿಮ ಮಸ್‌ಜಿದ್) ಆಗಿರುವುದರಿಂದ ಇನ್ನು ಮುಂದೆ ಲೋಕದಲ್ಲಿ ಯಾವ ಮಸ್‌ಜಿದ್ ಕೂಡ ನಿರ್ಮಿಸಲ್ಪಡಲಾರದು ಎಂದು ಈ ಹದೀಸಿನ ಅರ್ಥ ಖಂಡಿತ ಅಲ್ಲ. ಈ ಹದೀಸಿನ ಅರ್ಥ "ನನ್ನ ಮಸ್‌ಜಿದ್‌ಗೆ ವಿರುದ್ಧವಾಗಿ ಯಾವ ಮಸ್‌ಜಿದ್ ಕೂಡ ನಿರ್ಮಿಸಲ್ಪಡಲಾರದು. ಇನ್ನು ಮುಂದೆ ನಿರ್ಮಿಸಲ್ಪಡುವ ಮಸ್‌ಜಿದ್ ನನ್ನ ಮಸ್‌ಜಿದ್‌ಗೆ ಅಧೀನವಾಗಿ, ಅದರ ಪ್ರತಿರೂಪವಾಗಿ, ಅದರ ನೆರಳಿನ ರೂಪದಲ್ಲಿ ಇರುವುದು. ಏಕೆಂದರೆ ನನ್ನ ಶರೀಅತ್ ಶಾಶ್ವತವಾಗಿದೆ. ಇನ್ನು ಮುಂದೆ ಹೊಸ ಶರೀಅತ್ ಇಲ್ಲ " ಎಂದಾಗಿದೆ.

"ಇನ್ನೀ ಆಖಿರುಲ್ ಅಂಬಿಯಾ" ಎಂಬ ಹದೀಸಿನ ಅರ್ಥ ಸಹ ಇದೇ ಪ್ರಕಾರವಾಗಿದೆ. "ನನ್ನ ಅನಂತರ ನನ್ನಿಂದ ಸ್ವತಂತ್ರನಾಗಿ ನುಬುವ್ವತ್ ಪಡೆಯುವ ಪ್ರವಾದಿ ಆಗಮಿಸಲಿಕ್ಕಿಲ್ಲ. ಪ್ರವಾದಿ ಬರುವುದಾದರೆ ನನ್ನ ಶಿಷ್ಯರಾಗಿ, ನನಗೆ ಅಧೀನರಾಗಿ, ನನ್ನ ನೆರಳಾಗಿ ಬರುವರು" ಎಂದು.

ಅಲ್ಲಾಹನಿಗೆ ಸ್ತುತಿ. ಇದು ಎಷ್ಟು ಭವ್ಯ ನುಡಿಯಾಗಿದೆ! ನಮ್ಮ ಯಜಮಾನರಾದ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ದೂರದೃಷ್ಟಿ ಎಷ್ಟರ ತನಕ ತಲಪಿದೆ ಎಂದು ನೋಡಿರಿ. "ಇನ್ನೀ ಆಖಿರುಲ್ ಅಂಬಿಯಾ" ಎಂಬ ವಾಕ್ಯದಲ್ಲಿ ಯಾವ ತಪ್ಪು ಗ್ರಹಿಕೆಯ ಸಾಧ್ಯತೆಯ ಅಪಾಯವು ರಹಸ್ಯವಾಗಿ ಇದ್ದಿತೋ ಅದನ್ನು ಮನವರಿಕೆ ಮಾಡಿಕೊಂಡು ಕೂಡಲೇ ಮುಂದಿನ ವಾಕ್ಯದಿಂದ ಅದನ್ನು ದೂರ ಸರಿಸಿರುವರು.

"ಮದೀನದ ನನ್ನ ಈ ಮಸ್‌ಜಿದ್ ಕೊನೆಯ ಮಸ್‌ಜಿದ್ ಆಗಿರುವ ಹಾಗೆಯೇ ನಾನು ಸಹ ಕೊನೆಯ ನಬಿ ಆಗಿರುವೆನು" ಎಂದು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಹೇಳಿದರು.

ಸ್ನೇಹಿತರೇ, ಬಂಧುಗಳೇ, ಅಲ್ಲಾಹನು ನಿಮ್ಮ ಕಣ್ಣುಗಳನ್ನು ತೆರೆಯಲಿ. ನೀವು ಯೋಚಿಸಿರಿ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಮದೀನದಲ್ಲಿ ಮಸ್‌ಜಿದನ್ನು ನಿರ್ಮಿಸಿದ ನಂತರ ಮುಸ್ಲಿಮ್ ದೇಶಗಳಲ್ಲಿ ಲಕ್ಷಗಟ್ಟಲೆ ಅಲ್ಲ ಕೋಟಿಗಟ್ಟಲೆ ಮಸ್‌ಜಿದ್‌ಗಳು ನಿರ್ಮಿಸಲ್ಪಟ್ಟರೂ **"ಇನ್ನ ಮಸ್‌ಜಿದೀ ಆಖಿರುಲ್ ಮಸಾಜಿದ್" (ನನ್ನ ಮಸ್‌ಜಿದ್ ಅಂತಿಮ ಮಸ್‌ಜಿದ್ ಆಗಿದೆ)** ಎಂಬ ವಾಕ್ಯದ ಅರ್ಥ ಚ್ಯುತಿಗೊಳ್ಳದೆ ಇರುವುದಾದರೆ, ಅದರಲ್ಲಿ ಯಾವುದೇ ಅರ್ಥವ್ಯತ್ಯಾಸ ಉಂಟಾಗುವುದಿಲ್ಲವಾದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಸಮುದಾಯದಲ್ಲಿ ಅವರ ಯಾರಾದರೊಬ್ಬ ಸೇವಕನು ಮತ್ತು ಶಿಷ್ಯನು ಅವರನ್ನು ಅನುಸರಿಸಿ ಅವರ ದಾಸ್ಯವನ್ನು ಅಂಗೀಕರಿಸಿ ಅವರ ನೆರಳಾಗಿ ನುಬುವ್ವತ್ ಪಡೆಯುವುದಾದರೆ ಅದು "ಇನ್ನೀ ಆಖಿರುಲ್ ಅಂಬಿಯಾ" ಎಂಬ ನುಡಿಗೆ ವಿರುದ್ಧವಾದುದು ಎಂದು ಹೇಳಲು

ಹೇಗೆ ಸಾಧ್ಯ? ನೀವು ಒಪ್ಪಿರಿ ಅಥವಾ ಒಪ್ಪದಿರಿ. ಇಂತಹ ಸ್ಥಿತಿಯಲ್ಲಿ ಸಹ ನಮ್ಮ ಯಜಮಾನರಾದ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರೇ ಆಖೈರಿ ನಬಿಯಾಗಿರುತ್ತಾರೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರು ಕೊನೆಯ ನಬಿ ಎಂಬುದಕ್ಕೆ ವಿರುದ್ಧವಾಗಿರುವ ತಶ್‌ರೀಈ ನುಬುವ್ವತ್ (ಶರೀಅತ್ ಹೊಂದಿದ ನುಬುವ್ವತ್) ಮತ್ತು ಮುಸ್ತಖಿಲ್ ನುಬುವ್ವತ್ (ಸ್ವತಂತ್ರ ನುಬುವ್ವತ್) ಸಂಪೂರ್ಣವಾಗಿ ಅಂತ್ಯವಾಗಿದೆ. ಆದರೆ ಯಾವ ನುಬುವ್ವತಿನ ಬಾಗಿಲು ತೆರೆದಿದೆಯೋ ಆ ಝಿಲ್ಲೀ ನುಬುವ್ವತಿನ ಕಾರಣದಿಂದ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರು ಅಂತಿಮ ನಬಿಯಾಗಿರುವ ಸ್ಥಾನಕ್ಕೆ ಯಾವುದೇ ಕುಂದು ಉಂಟಾಗುವುದಿಲ್ಲ. ಇತರ ಮುಸ್ಲಿಮರು ಈ ಸೂಕ್ಷ್ಮ ಅಂಶವನ್ನು ತಿಳಿದುಕೊಳ್ಳುತ್ತಿದ್ದರೆ ಎಷ್ಟು ಚೆನ್ನಾಗಿತ್ತು!

### ಆಖಿರ್ (ಅಂತಿಮ) ಎಂಬುದರ ಇನ್ನೊಂದು ಅರ್ಥ ಪರಿಪೂರ್ಣವಾದುದು ಎಂದು

ಅರಬಿ ಭಾಷೆಯಲ್ಲಿ ಆಖಿರ್ ಎಂಬ ಪದ ಒಬ್ಬ ವ್ಯಕ್ತಿಯ ಕುರಿತು ಪ್ರಯೋಗಿಸಲ್ಪಟ್ಟಾಗ ಅದರ ಅರ್ಥ ಆ ವ್ಯಕ್ತಿ ಅತ್ಯಂತ ಉತ್ತುಂಗ ಪದವಿ ಪಡೆದವನೆಂದಾಗುತ್ತದೆ. ಪರಿಪೂರ್ಣ ಅರ್ಹತೆ ಪಡೆದವ ಎಂಬ ಅರ್ಥ ಇದಕ್ಕಿದೆ. ಅರಬಿ ಗದ್ಯ ಮತ್ತು ಪದ್ಯ ಸಾಹಿತ್ಯದಲ್ಲಿ ಇಂತಹ ಉದಾಹರಣೆಗಳು ಅನೇಕ ಇವೆ. ನಾವು ಈ ವಿಷಯದಲ್ಲಿ ಇನ್ನೂ ಸವಿಸ್ತಾರವಾಗಿ ಈ ಸಂದರ್ಭದಲ್ಲಿ ಬರೆಯಲು ಇಚ್ಛಿಸುವುದಿಲ್ಲ. ಮಹಾಕವಿ ಡಾಕ್ಟರ್ ಮುಹಮ್ಮದ್ ಇಕ್ಬಾಲ್‌ರವರ ಒಂದು ಪದ್ಯದಿಂದ ಇದಕ್ಕೆ ನಾವು ಒಂದು ಉದಾಹರಣೆ ಕೊಡುತ್ತೇವೆ. ಡಾ| ಇಕ್ಬಾಲ್‌ರವರ ಪದ್ಯಗಳಿಂದಲೂ ಅವರ ದಾರ್ಶನಿಕ ದೃಷ್ಟಿಕೋನಗಳಿಂದಲೂ ಪ್ರಭಾವಿತರಾದ ಜನರು ಈ ಉದಾಹರಣೆಯಿಂದ ನಿಶ್ಚಯವಾಗಿಯೂ ಪ್ರಯೋಜನ ಪಡೆಯುವರು ಎಂದು ಗ್ರಹಿಸುತ್ತೇವೆ.

ಅಲ್ಲಾಮ ಇಕ್ಬಾಲ್ ಹೀಗೆ ಹೇಳುತ್ತಾರೆ:

چل بسا داغ آہ میت اسکی زیب دوش ہے

آخری شاعر جہاں آباد کا خاموش ہے (بانگ درا)

ಈ ಪದ್ಯದಲ್ಲಿ ಮಹಾಕವಿ ದಾಗ್‌ರವರನ್ನು ಇಕ್ಬಾಲ್‌ರವರು "ಆಖಿರೀ ಶಾಯಿರ್" (ಅಂತಿಮ ಕವಿ) ಎಂದು ಕರೆದಿದ್ದಾರೆ. ಇಲ್ಲಿ ಆಖಿರೀ ಶಾಯಿರ್ ಎಂದು ಹೇಳಿದುದರ ಅರ್ಥ ವಾಸ್ತವಿಕವಾಗಿಯೂ ಅಂತಿಮ ಕವಿ, ಕೊನೆಯ ಕವಿ ಎಂದಲ್ಲ, ಏಕೆಂದರೆ ಮಹಾಕವಿ ದಾಗ್‌ರವರ ನಂತರ ಸಹ ಕವಿಗಳ ಶೃಂಖಲೆ ಮುಂದುವರಿಯಿತು. ಮುಂದೆ ಸಹ ಜಾರಿಯಲ್ಲಿರುವುದು. ನಮ್ಮ ದೇಶದ ಸಾಹಿತಿಗಳು ಡಾಕ್ಟರ್ ಇಕ್ಬಾಲ್‌ರವರ ಕುರಿತು ಅವರು ದಾಗ್‌ರವರಿಗಿಂತ ಉತ್ತಮ ಕವಿ ಎಂದು ಭಾವಿಸುತ್ತಾರೆ. ಈ ಪದ್ಯದಲ್ಲಿ ಡಾಕ್ಟರ್ ಇಕ್ಬಾಲ್ ಉದ್ದೇಶಿಸಿರುವುದು, ಹಿಂದಿನ ಕವಿಗಳಲ್ಲಿ ದಾಗ್ ಎಂಬ ಕವಿ ಕಾವ್ಯ ರಚನೆಯಲ್ಲಿ ಅತ್ಯಂತ ನೈಪುಣ್ಯಗಳಿಸಿದ ಪರಿಪೂರ್ಣ ಕವಿಯಾಗಿದ್ದರು ಎಂದಾಗಿದೆ. ಇದೇ ಅರ್ಥದಲ್ಲಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಆಖಿರುಲ್ ಅಂಬಿಯಾ (ಪ್ರವಾದಿಗಳಲ್ಲಿ ಕೊನೆಯವರು) ಆಗಿರುವರು. ಅವರು ನುಬುವ್ವತಿನ ಅನುಗ್ರಹಗಳ ಅತ್ಯಂತ ಮೇಲಿನ ಮಟ್ಟವನ್ನು ತಲುಪಿದ, ಪರಿಪೂರ್ಣ ನುಬುವ್ವತ್ ಪಡೆದ ಮಹಾನುಭಾವರಾಗಿದ್ದರು ಎಂದೇ ಈ ಪದದ ಅರ್ಥವಾಗಿದೆ. ಈ ಅರ್ಥ ಸೂಕ್ಷ್ಮವೂ ಸರಿಯಾದುದೂ ಆಗಿದೆ.

*

## ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ -14

*(14ನೇ ಪುಟದಿಂದ)*

ವಿಧಿಸಿ ಅದನ್ನು ದರಿದ್ರರ ಏಳಿಗೆಗಾಗಿಯೂ ಇತರ ಸಾಮೂಹಿಕ ಆವಶ್ಯಕತೆಗಳಿಗಾಗಿಯೂ ವಿನಿಯೋಗಿಸಲು ಏರ್ಪಾಟು ಮಾಡಲಾಯಿತು. ಕಾರ್ಮಿಕ ವರ್ಗದ ಹಿತಾಸಕ್ತಿಗಳನ್ನು ಕಾಪಾಡಲಾಯಿತು. ನಿರಾಶ್ರಿತರಿಗೂ ದುರ್ಬಲ ವರ್ಗದವರಿಗೂ ಅನಾಥ ಮಕ್ಕಳಿಗೂ ವಿದ್ಯಾಭ್ಯಾಸಕ್ಕೆ ಬೇಕಾದ ವ್ಯವಸ್ಥೆ ಮಾಡಲಾಯಿತು. ಹಣದ ವಹಿವಾಟುಗಳನ್ನೂ ಕೊಡು-ಕೊಳ್ಳುವಿಕೆಯ ಕರಾರು ಒಪ್ಪಂದಗಳನ್ನೂ (ಸಾಲ ಇತ್ಯಾದಿ) ಬರೆದಿಟ್ಟು ಕೊಳ್ಳುವಂತೆ ಜನರನ್ನು ಪ್ರೇರೇಪಿಸಲಾಯಿತು. ಗುಲಾಮರೊಡನೆ ಕಠೋರವಾಗಿ ವರ್ತಿಸುವುದನ್ನು ತಡೆಯಲಾಯಿತು. ಶುಚಿತ್ವ, ಆರೋಗ್ಯ ಸಂರಕ್ಷಣೆ ಇತ್ಯಾದಿ ವಿಷಯಗಳ ಕಡೆಗೆ ಸಾಕಷ್ಟು ಗಮನ ಹರಿಸಲಾಯಿತು. ಸಾರ್ವಜನಿಕ ರಸ್ತೆಗಳನ್ನೂ ಕಾಲುದಾರಿಗಳನ್ನೂ ವಿಶಾಲಗೊಳಿಸಲು ಹಾಗೂ ಸ್ವಚ್ಛಗೊಳಿಸಲು ಆದೇಶ ಹೊರಡಿಸಲಾಯಿತು.

ಒಟ್ಟಿನಲ್ಲಿ, ಒಂದು ಆದರ್ಶ ನಾಗರಿಕ ಜೀವನದ ಎಲ್ಲ ಆವಶ್ಯಕತೆಗಳನ್ನೂ ನೆರವೇರಿಸಲು ಬೇಕಾದ ನಿಯಮಗಳನ್ನು ಮದೀನದಲ್ಲಿ ಜಾರಿಗೊಳಿಸಲಾಯಿತು. ಅದರೊಂದಿಗೇ ಈ ಅಭಿವೃದ್ಧಿ ಕಾರ್ಯಗಳು ನಿಂತು ಹೋಗದಂತೆಯೂ ಅವನ್ನು ಸ್ಥಿರವಾಗಿ ಕಾಯ್ದುಕೊಳ್ಳುವಂತೆಯೂ ಅಗತ್ಯವಾದ ವ್ಯವಸ್ಥೆಯನ್ನು ಸಹ ಕೈಗೊಳ್ಳಲಾಯಿತು. ಹೀಗೆ, ಅನಾಗರಿಕ ಜೀವನ ನಡೆಸುತ್ತಿದ್ದ ಅರಬಿಯರು ಮೊತ್ತಮೊದಲಾಗಿ ಸಭ್ಯರೀತಿಯ ನಾಗರೀಕ ಜೀವನದ ಅನುಭವವನ್ನು ಪಡೆದರು.

ಹಝ್ರತ್ ಮುಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಮದೀನದಲ್ಲಿ ಜಾರಿಗೊಳಿಸಿದ ಆಡಳಿತ ವ್ಯವಸ್ಥೆಯು ಕೇವಲ ಮದೀನದ ಅರಬಿಗಳ ಪ್ರಯೋಜನಕ್ಕಾಗಿ ಮಾತ್ರ ಸೀಮಿತವಾಗಿರಲಿಲ್ಲ. ಅದು ಸಮಸ್ತ ಜಗತ್ತಿಗೂ ಒಂದು ಮಾದರಿಯ ರೂಪದಲ್ಲಿ ಇತ್ತು. ಅದು ಯಾವ ಕಾಲಕ್ಕೂ ಅನ್ವಯಿಸುವಂತಹ ಸಮಸ್ತ ಮಾನವ ಕುಲಕ್ಕೆ ಶಾಂತಿ ಸಮಾಧಾನವನ್ನೂ ಏಳಿಗೆಯನ್ನೂ ಅಭಿವೃದ್ಧಿಯನ್ನೂ ತರುವಂತಹ ಒಂದು ಆಡಳಿತ ಸಂಹಿತೆಯಾಗಿತ್ತು.

ಅತ್ತ ಮಕ್ಕದಲ್ಲಿ ವಿರೋಧಿಗಳು ಇಸ್ಲಾಮಿನ ಈ ಸುವ್ಯವಸ್ಥಿತವಾದ ಪೌರಾಡಳಿತ ಕ್ರಮವನ್ನು ನಾಶಪಡಿಸುವ ಗೂಢಾಲೋಚನೆಯಲ್ಲಿ ಮುಳುಗಿದರು. ಅವರು ಮುಸಲ್ಮಾನರ ವಿರುದ್ಧ ಯುದ್ಧ ಮಾಡಲು ಸರ್ವವಿಧ ಸಿದ್ಧತೆಗಳನ್ನೂ ನಡೆಸುತ್ತಿದ್ದರು. ಅವರ ಈ ಗೂಢಾಲೋಚನೆಯು 'ಬದ್ರ್ ಯುದ್ಧ'ಕ್ಕೆ ನಾಂದಿ ಹಾಕಿತು.

*

ಓದಿದ್ದು...!

# ಮೌಲಾನ ಮೌದೂದಿ ಬಗ್ಗೆ ಪುತ್ರನ ಹೇಳಿಕೆ !

ನವದೆಹಲಿ : ಜಮಾಅತೆ ಇಸ್ಲಾಮಿಯ ಸ್ಥಾಪಕರೂ ಅದರ ಸಿದ್ಧಾಂತಗಳನ್ನು ರೂಪಿಸಿದವರೂ ಆಗಿದ್ದ ಮೌಲಾನ ಅಬುಲ್ ಆಲಾ ಮೌದೂದಿಯ ಪುತ್ರನಾದ ಡಾ| ಹೈದರ್ ಫಾರೂಖ್ ಮೌದೂದಿ ತನ್ನ ಪಿತನ ಕುರಿತು ಹೀಗೆ ಹೇಳಿದರು: ನನ್ನ ತಂದೆಯವರ ನಿಲುವು ಮಾದಕದ್ರವ್ಯ ಮಾರಾಟ ಮಾಡುವ ಒಬ್ಬ ತಿರುಗು ವ್ಯಾಪಾರಿಯದಾಗಿತ್ತು. ಮಾದಕ ದ್ರವ್ಯ ಮಾರುವವನು ಮಿಲಿಯಗಟ್ಟಲೆ ಯುವಕರಿಗೆ ತನ್ನ ಸರಕನ್ನು ಮಾರಾಟಮಾಡುತ್ತಾನಾದರೂ ತನ್ನ ಸ್ವಂತ ಮಕ್ಕಳು ಅದರ ಸಮೀಪ ಸಹ ಸುಳಿಯಬಾರದೆಂದು ಬಯಸುತ್ತಾನೆ. ನವದೆಹಲಿಯ "ಟೈಮ್ಸ್ ಆಫ್ ಇಂಡಿಯಾ"ದಲ್ಲಿ ಸೋಮವಾರದಂದು ಪ್ರಕಟವಾದ, ಭಾರತೀಯ ಪತ್ರಕರ್ತನಿಗೆ ಲಾಹೋರಿನಲ್ಲಿ ನೀಡಿದ ಸಂದರ್ಶನದಲ್ಲಿ ಅವರು ಮೇಲಿನಂತೆ ಹೇಳಿದರು.

ಮತಭ್ರಾಂತ ತೀವ್ರವಾದಿಗಳಾದ ಜಮಾಅತೆ ಇಸ್ಲಾಮಿಯಂತಹ ಪಕ್ಷಗಳು ಕೆಲವೇ ಸ್ಥಾನಗಳಿಗಿಂತ ಹೆಚ್ಚಿಗೆ ಸ್ಥಾನಗಳನ್ನು ನ್ಯಾಶನಲ್ ಅಸೆಂಬ್ಲಿಯಲ್ಲಿ ಗಳಿಸದಂತೆ ಮಾಡಿದುದಕ್ಕೆ ಅವರು ಪಾಕಿಸ್ತಾನಿ ಜನತೆಯನ್ನು ಅಭಿನಂದಿಸಿದರು.

ತನ್ನ ಪಿತನ ಕೆಲಸದ ಕುರಿತು ಪ್ರಶ್ನಿಸಿದಾಗ ಡಾ| ಹೈದರ್ ಮೌದೂದಿ ಹೀಗೆ ಹೇಳಿದರು: "ನನ್ನ ತಂದೆಯವರು ತಾನು ಉಚಿತವಾಗಿ ಹಂಚುತ್ತಿದ್ದ ಮಾದಕ ದ್ರವ್ಯದ ಅಪಾಯಗಳನ್ನು ತಿಳಿದಿದ್ದರು. ನನ್ನ ತಂದೆಯವರ ಮನೋಭಾವ ಹೆರೋಯಿನ್ ಮಾರಾಟಗಾರನ ಮನೋಭಾವದ ಹಾಗಿತ್ತು. ಅವರ ಒಂಭತ್ತು ಮಕ್ಕಳಲ್ಲಿ ಯಾರೊಬ್ಬರೂ ಅವರು ಬರೆದ 80 ಪುಸ್ತಕಗಳಲ್ಲಿ ಯಾವುದನ್ನೂ ಓದಲು ಅವರು ಬಿಡುತ್ತಿರಲಿಲ್ಲ".

ಜಮಾಅತೆ ಇಸ್ಲಾಮಿಯ ಇಂದಿನ ನೇತೃತ್ವವನ್ನು ಹೈದರ್ ಮೌದೂದಿ, "ಹುಚ್ಚರು, ತಲೆಹಿಡುಕರು ಮತ್ತು ವಂಚಕರು" ಎಂದು ವರ್ಣಿಸಿದರು. "ಅವರ ಸ್ವಭಾವ ಗುಣಗಳು ನಮ್ಮನ್ನು ಇಸ್ಲಾಮಿನಿಂದ ಪೂರ್ಣವಾಗಿ ದೂರ ಒಯ್ಯುತ್ತಿತ್ತು" ಎಂದು ಅವರು ಹೇಳಿದರು. ಅವರು ಮುಂದುವರಿಸಿದರು: "ನನ್ನ ತಂದೆಯವರ ಸಮೀಪಕ್ಕೆ ಯಾರು ಬರುತ್ತಿದ್ದರೋ ಅವರನ್ನು ನನ್ನ ತಂದೆಯವರು ಉಪಯೋಗಿಸಿದರು. ಆದರೆ ಅವರ ವೃದ್ಧಾಪ್ಯದಲ್ಲಿ ಅವರಿಗೆ ತನ್ನದೇ ಮದ್ದಿನ ರುಚಿ ಸವಿಯಬೇಕಾಗಿ ಬಂತು. ನನ್ನ ತಂದೆಯವರು ಮರಣಾಸನ್ನರಾಗಿ ಮಲಗಿದ್ದಾಗ ಈ ಮೌಲಾನಗಳು ನನ್ನ ತಂದೆಯವರೊಂದಿಗೆ ಅವರು ಒಂದು ಮಲೀನ ವಸ್ತುವೋ ಎಂಬಂತೆ ವರ್ತಿಸಿದರು."

***(The Nation 27-1-99)***

*ಇಂಗ್ಲೀಷ್‌ನಿಂದ ಭಾಷಾಂತರ*

***(ಕೃಪೆ : Ahmadiyya Gazette, Canada, May 1999)***

# ಜಮಾತೆ ಇಸ್ಲಾಮಿಯ 'ಧರ್ಮ ಸ್ವಾತಂತ್ರ್ಯ' !

ಜಮಾತೆ ಇಸ್ಲಾಮಿ ಅಧಿಕಾರ ಸೂತ್ರವನ್ನು ತನ್ನ ವಶಕ್ಕೆ ತೆಗೆದುಕೊಂಡ ಬಳಿಕ ಶರಿಯತ್ ಸಂವಿಧಾನದ ಸ್ಥಾನ ಪಡೆಯುವುದು. ಆಗ ಇಸ್ಲಾಮನ್ನು ತ್ಯಜಿಸಿ ಅಹ್ಮದಿಯಾ, ಕ್ರಿಶ್ಚನ್ ಮತ್ತು ಹಿಂದುವಾದರೆ ಪಾಕಿಸ್ಥಾನವು ಕಾನೂನಿನ್ವಯ ಆತನನ್ನು ಗಲ್ಲಿಗೇರಿಸಬಹುದು. ಇರಾನ್ ಮತ್ತು ತಾಲಿಬಾನ್ ತಮ್ಮಲ್ಲಿ ಧರ್ಮಭ್ರಷ್ಟರನ್ನು ಇದೇ ರೀತಿ ಮಾಡುತ್ತಾರೆ.

***-ಕಾಜಿ ಹುಸೇನ್ ಅಹ್ಮದ್, ಪಾಕ್ ಜಮಾತೆ ಇಸ್ಲಾಮಿನ ಅಧ್ಯಕ್ಷ, ಸಂದರ್ಶನವೊಂದರಲ್ಲಿ***

***(ಉದಯವಾಣಿ 13-2-2000)***

# ಇಸ್ಲಾಮಿನಲ್ಲಿ ಮಹಿಳೆಯ ಸ್ಥಾನಮಾನ

"ಮಹಿಳೆಯರಿಗೆ ಗೌರವ ಮತ್ತು ಪ್ರಾಧಾನ್ಯತೆಯನ್ನು ನಿಜಕ್ಕೂ ಮಾನ್ಯ ಮಾಡಿರುವ ಏಕೈಕ ಧರ್ಮ ಇಸ್ಲಾಂ ಆಗಿದೆಯೆಂದು ನಾನು ಮನಗಂಡಿದ್ದೇನೆ. ನಾನು ನನ್ನ ಮಾತೃಧರ್ಮವಾದ ಹಿಂದೂ ಧರ್ಮದಲ್ಲಿ ಇದನ್ನು ಕಂಡಿಲ್ಲ."

**- ಖ್ಯಾತ ದ್ವಿಭಾಷಾ ಲೇಖಕಿ ಮತ್ತು ಕವಯತ್ರಿ ಮಾಧವ ಕುಟ್ಟಿ ಅಲಿಯಾಸ್ ಕಮಲದಾಸ್ (ಸುರಯ್ಯಾ) ತಾನು ಇಸ್ಲಾಂ ಧರ್ಮಕ್ಕೆ ಮತಾಂತರಗೊಳ್ಳಲು ನಿರ್ಧರಿಸಿರುವುದನ್ನು ಪ್ರಕಟಿಸುತ್ತಾ**

**(ಉದಯವಾಣಿ 13-12-1999)**

# ಒಂದು ವರ್ಷದಲ್ಲಿ 1 ಕೋಟಿಗೂ ಮಿಕ್ಕ ನವ ಅಹ್ಮದಿಯರು

ಇಸ್ಲಾಮಾಬಾದ್ (ಟಿಲ್‌ಫೋರ್ಡ್, ಲಂಡನ್) : ಕಳೆದ ಒಂದು ವರ್ಷದಲ್ಲಿ ಲೋಕದಾದ್ಯಂತ 1 ಕೋಟಿ 8 ಲಕ್ಷ 20 ಸಾವಿರದ 226 ಮಂದಿ ಹೊಸದಾಗಿ ಅಹ್ಮದಿಯಾ ಜಮಾಅತಿಗೆ ಸೇರಿದ್ದಾರೆಂದು ಅಹ್ಮದಿಯಾ ಖಲೀಫರಾದ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರು ಹೇಳಿದ್ದಾರೆ. ಕಳೆದ ಜುಲಾಯಿ 30ರಿಂದ ಆಗಸ್ಟ್ 1ರ ವರೆಗೆ ಇಲ್ಲಿ ಜರಗಿದ ಬ್ರಿಟನಿನ 34ನೇ ಅಹ್ಮದಿಯಾ ವಾರ್ಷಿಕ ಸಮ್ಮೇಳನದ ದ್ವಿತೀಯ ದಿನದ ತನ್ನ ಭಾಷಣದಲ್ಲಿ ಅವರು ಇದನ್ನು ಬಹಿರಂಗಪಡಿಸಿದರು.

ಲೋಕದಲ್ಲೆಡೆ ವ್ಯಾಪಿಸುತ್ತಿರುವ ಅಹ್ಮದಿಯಾ ಸಂಘಟನೆಯ ಸಾಧನೆಗಳನ್ನು ಅವರು ವಿವರಿಸಿದರು. ಅವರು ಹೇಳಿದರು :

ದೇವಾನುಗ್ರಹದಿಂದ 158 ರಾಷ್ಟ್ರಗಳಲ್ಲಿ ಅಹ್ಮದಿಯಾ ಜಮಾಅತ್ ಸುಸ್ಥಾಪಿತವಾಗಿದೆ. ಕೆನಡಾದಲ್ಲಿ 18,000 ಚದರ ಅಡಿ ವಿಸ್ತೀರ್ಣದ ಕಟ್ಟಡ ಸಹಿತ 5.16 ಎಕ್ರೆ ಸ್ಥಳವನ್ನು ಖರೀದಿಸಲಾಗಿದೆ. ಕಟ್ಟಡದ ಒಂದು ದೊಡ್ಡ ಹಾಲ್‌ನಲ್ಲಿ 1200 ಮಂದಿಗೆ ಪ್ರಾರ್ಥಿಸಲು ಸ್ಥಳಾವಕಾಶವಿದೆ.

ಇಷ್ಟರ ವರೆಗೆ 53 ಭಾಷೆಗಳಲ್ಲಿ ಪವಿತ್ರ ಖುರ್‌ಆನಿನ ಅನುವಾದಗಳು ಪ್ರಕಟಗೊಂಡಿವೆ. ಟಿಕಾಂಬ (ಕೆನ್ಯಾ) ಮತ್ತು ಕನ್ನಡ (ಭಾರತ) ಭಾಷೆಗಳಲ್ಲಿ ಖುರ್‌ಆನ್ ಅನುವಾದಗಳು ಮುದ್ರಣಕ್ಕೆ ಸಿದ್ಧವಾಗಿವೆ. 22 ಭಾಷೆಗಳಲ್ಲಿ ಅನುವಾದ ಕೊನೆಯ ಹಂತದಲ್ಲಿದೆ. ಈ ವರ್ಷ 87 ಭಾಷೆಗಳಲ್ಲಿ ಅಹ್ಮದಿಯಾ ಸಾಹಿತ್ಯಗಳನ್ನು ಪ್ರಕಟಿಸಲಾಗಿದೆ.

ಮುಸ್ಲಿಂ ಟೆಲಿವಿಷನ್ ಅಹ್ಮದಿಯಾ ಇಂಟರ್‌ನ್ಯಾಶನಲ್‌ನಲ್ಲಿ 14 ವಿಭಾಗಗಳಲ್ಲಿ 135 ಸ್ವಯಂ ಸೇವಕರು ದುಡಿಯುತ್ತಿದ್ದಾರೆ. ಈ ವರ್ಷ ಚಿಕ್ಕದೂ ದೊಡ್ಡದೂ ಸೇರಿ 406 ಆಸ್ಪತ್ರೆಗಳನ್ನು ತೆರೆಯಲಾಗಿದೆ.

ಘಾನದಲ್ಲಿ ಈ ವರ್ಷ 129 ಕಡೆಗಳಲ್ಲಿ ಜಮಾಅತ್ ರೂಪುಗೊಂಡಿದೆ. ಅಲ್ಲಿ 130 ಮಸೀದಿಗಳ ಹೆಚ್ಚಳವಾಗಿದೆ. ಐವರಿಕೋಸ್ಟ್‌ನಲ್ಲಿ ಈ ವರ್ಷ 1150 ಹೊಸ ಸ್ಥಳಗಳಲ್ಲಿ ಜಮಾಅತ್ ಸ್ಥಾಪಿಸಲ್ಪಟ್ಟಿದೆ. ಅಲ್ಲಿ ನಮಗೆ 425 ಮಸೀದಿಗಳು ದೊರೆತಿವೆ. ಅಲ್ಲಿ 426 "ಚೀಫ್"ಗಳು ಮತ್ತು 509 ಮಸೀದಿ ಇಮಾಮ್‌ಗಳು ಅಹ್ಮದಿಯತ್ ಸ್ವೀಕರಿಸಿದ್ದಾರೆ. ಬುರ್ಕಿನೋ ಫಾಸೋದಲ್ಲಿ ನಮಗೆ 808 ಮಸೀದಿಗಳು ದೊರೆತಿವೆ. ಅಲ್ಲಿ 260 "ಚೀಫ್"ಗಳು ಮತ್ತು 811 ಇಮಾಮ್‌ಗಳು ಅಹ್ಮದಿಯಾ ಜಮಾಅತಿಗೆ ಸೇರಿದ್ದಾರೆ. ಈ ವರ್ಷ ಡೋರಿ ಎಂಬ ಸ್ಥಳದಲ್ಲಿ ಮಾತ್ರ 6,35,509 ಮಂದಿ ಅಹ್ಮದಿಯತ್ ಸ್ವೀಕರಿಸಿದ್ದಾರೆ.

ಭಾರತದಲ್ಲಿ ಈ ವರ್ಷ 1020 ಕಡೆಗಳಲ್ಲಿ ಜಮಾಅತ್ ಸ್ಥಾಪಿಸಲ್ಪಟ್ಟಿದೆ. 96 ಮಸೀದಿಗಳ ಹೆಚ್ಚಳವಾಗಿದೆ. 83 ಹೊಸ ಪ್ರಚಾರ ಕೇಂದ್ರಗಳನ್ನು ತೆರೆಯಲಾಗಿದೆ. 17,10,344 ಮಂದಿ ಅಹ್ಮದಿಯಾ ಜಮಾಅತಿಗೆ ಸೇರಿದ್ದಾರೆ.

# ಯುರೋಪಿನ ಅತಿ ದೊಡ್ಡ ಮಸೀದಿಗೆ ಶಿಲಾನ್ಯಾಸ

ಕಳೆದ ಅಕ್ಟೋಬರ್ 19 ಮಂಗಳವಾರದಂದು ಅಹ್ಮದಿಯಾ ಜಮಾಅತಿನ ಖಲೀಫರಾದ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರು ಬ್ರಿಟನಿನ ಮೋರ್ಡನ್ (ಸರ್ರೆ) ಎಂಬಲ್ಲಿ, "ಬೈತುಲ್ ಫುತೂಹ್" ಎಂಬ ಮಸೀದಿಗೆ ಅಡಿಗಲ್ಲು ಹಾಕಿದರು. ಅಹ್ಮದಿಯಾ ಜಮಾಅತಿನ ವತಿಯಿಂದ ನಿರ್ಮಿಸಲ್ಪಡುವ ಈ ಮಸೀದಿ ಯುರೋಪಿನ ಅತಿ ದೊಡ್ಡ ಮಸೀದಿಯಾಗುವುದು.

75 ವರ್ಷಗಳಿಗೆ ಮುಂಚೆ 1924ನೇ ಇಸವಿ ಅಕ್ಟೋಬರ್ 19ರಂದು ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫರಾದ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್ ಸಾಹೇಬರು ಲಂಡನಿನಲ್ಲಿ ಬ್ರಿಟನಿನ ಪ್ರಥಮ ಅಹ್ಮದಿಯಾ ಮಸೀದಿ "ಮಸ್ಜಿದ್ ಫಝ್ಲ್" ಗೆ ಶಿಲಾನ್ಯಾಸ ಮಾಡಿದ್ದರು.

2.25 ಮಿಲಿಯನ್ ಪೌಂಡಿಗೆ ಖರೀದಿಸಿದ 5.19 ಎಕ್ರೆ ವಿಸ್ತೀರ್ಣದ ನಿವೇಶನದಲ್ಲಿ ನಿರ್ಮಿಸಲ್ಪಡುವ ಈ ಮಸೀದಿಯಲ್ಲಿ 5000 ಮಂದಿಗೆ ನಮಾಝ್ ಮಾಡುವ ಸೌಕರ್ಯವನ್ನು ಏರ್ಪಡಿಸಲಾಗುವುದು.

ಅಕ್ಟೋಬರ್ 19ರಂದು ಮಧ್ಯಾಹ್ನ ಜರಗಿದ ಸರಳ ಸಮಾರಂಭದಲ್ಲಿ ಹಝ್ರತ್ ಖಲೀಫರು, ಖಾದಿಯಾನಿನ "ಬೈತುಲ್ ಫಿಕ್ರ್" ನಿಂದ ತಂದ ಒಂದು ಇಟ್ಟಿಗೆಯನ್ನು ನಮ್ರತೆಯ ದುಆದೊಂದಿಗೆ ಇಟ್ಟು ಮಸೀದಿಗೆ ಶಿಲಾನ್ಯಾಸ ಮಾಡಿದರು. ಈ ಸಂದರ್ಭದಲ್ಲಿ ಬ್ರಿಟನಿನ ಎಲ್ಲೆಡೆಯ ಜಮಾಅತುಗಳಿಂದ ಬಂದ ಗಣ್ಯರು ಉಪಸ್ಥಿತರಿದ್ದರು.

# ಡಾ| ಅಬ್ದುಸ್ಸಲಾಮರ ಭಾವಚಿತ್ರದ ಅಂಚೆಚೀಟಿ




ಅಹ್ಮದಿಯಾ ಮುಸ್ಲಿಂ ಜಮಾಅತಿನ ಅಭಿಮಾನವಾದ, ನೊಬೆಲ್ ಪ್ರಶಸ್ತಿ ವಿಜೇತ ಡಾ| ಅಬ್ದುಸ್ಸಲಾಂ ಸಾಹೇಬರ ಗೌರವಾರ್ಥ ಪಾಕಿಸ್ಥಾನ ಅಂಚೆ ವಿಭಾಗ ಅಂಚೆಚೀಟಿಯನ್ನು ಹೊರಡಿಸಿದೆ. ಕರಾಚಿಯ 'ಡಾನ್' ದೈನಿಕ (22-11-1998) ಈ ವಾರ್ತೆಯನ್ನು ಪ್ರಕಟಿಸಿದೆ.

1979ರಲ್ಲಿ ಡಾ| ಅಬ್ದುಸ್ಸಲಾಮರಿಗೆ ಭೌತಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿ ಲಭಿಸಿತ್ತು. ಅವರು ಇಟಲಿಯ ಟ್ರೀಸ್ಟಿಯಲ್ಲಿ "ಇಂಟರ್‌ನ್ಯಾಶನಲ್ ಸೆಂಟರ್ ಫೋರ್ ಥಿಯರಿಟಿಕಲ್ ಫಿಸಿಕ್ಸ್"ನ್ನು ಸ್ಥಾಪಿಸಿದರು. ವಿಕಾಸಶೀಲ ರಾಷ್ಟ್ರಗಳ ವೈಜ್ಞಾನಿಕ ಪ್ರಗತಿಗೋಸ್ಕರ ಅವರು ದೊಡ್ಡ ಕೊಡುಗೆಯನ್ನಿತ್ತಿದ್ದಾರೆ. 1961ರಿಂದ ಪಾಕಿಸ್ಥಾನದ ಅಧ್ಯಕ್ಷರ ಪ್ರಧಾನ ವೈಜ್ಞಾನಿಕ ಸಲಹೆಗಾರರಾಗಿದ್ದ ಅವರು 1974ರಲ್ಲಿ ಅಹ್ಮದಿಯರನ್ನು ಪಾಕಿಸ್ಥಾನ ಅಮುಸ್ಲಿಮರೆಂದು ಘೋಷಿಸಿದಾಗ, ಸರಕಾರದ ಧೋರಣೆಯನ್ನು ಪ್ರತಿಭಟಿಸಿ ಆ ಹುದ್ದೆಗೆ ರಾಜೀನಾಮೆ ನೀಡಿದ್ದರು.

ನೊಬೆಲ್ ಪ್ರಶಸ್ತಿ ಪಡೆದ ಪ್ರಥಮ ಮುಸ್ಲಿಂ ವಿಜ್ಞಾನಿ ಡಾ| ಅಬ್ದುಸ್ಸಲಾಂ ಆಗಿದ್ದಾರೆ.

## ಮಡಿಕೇರಿಯಲ್ಲಿ ಮಹಿಳಾ ಸಭೆ

ಮಡಿಕೇರಿ ಜಮಾಅತಿನ ಲಜ್‌ನಾ ಇಮಾಇಲ್ಲಾಹ್ ವಾರ್ಷಿಕ ಸಭೆಯು ಕಳೆದ ಅಕ್ಟೋಬರ್ 17ರಂದು ಆಝಾದ್ ನಗರದಲ್ಲಿ ಝುಬೈದ ಹಸನ್ ಸಾಹಿಬರ ವಸತಿಯಲ್ಲಿ ಜರಗಿತು.

ಬೆಳಿಗ್ಗೆ 10.30ಕ್ಕೆ ನಿಶಾನ ಸಾಹಿಬರ ಖುರ್‌ಆನ್ ಪಠನದೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಅಧ್ಯಕ್ಷೆ ಬುಶ್ರಾ ಸಿದ್ದೀಖ ಸಾಹಿಬ ಪ್ರತಿಜ್ಞೆ ಓದಿ ಹೇಳಿದರು. ವಿ. ಎ. ನಸೀರ ಸಾಹಿಬ ಉರ್ದು ನಝ್ಮ್ ಹಾಡಿದರು. ಎಂ. ಎ. ಝೀನತ್ ಸಾಹಿಬ ಸ್ವಾಗತ ಭಾಷಣ ಮಾಡಿದರು.

ಆ ಬಳಿಕ ಖುರ್‌ಆನ್ ಪಾರಾಯಣ, ಅರಬಿ - ಉರ್ದು - ಮಲಯಾಳಂ ಪದ್ಯಗಳು ಮತ್ತು ಭಾಷಣಗಳ ಸ್ಪರ್ಧೆಗಳು ಮಹಿಳೆಯರಿಗೂ ಹೆಣ್ಮಕ್ಕಳಿಗೂ (ನಾಸಿರಾತ್) ಬೇರೆ ಬೇರೆಯಾಗಿ ನಡೆದವು. ವಿಜೇತರಿಗೆ ಫಾತಿಮ ಸಾಹಿಬ ಬಹುಮಾನ ವಿತರಣೆ ಮಾಡಿದರು. ಕೊನೆಗೆ ಅಧ್ಯಕ್ಷೆ ಅವಲೋಕನ ಮಾಡಿದರು. ವಿ. ಎ. ನಸೀರ ಸಾಹಿಬ ಕೃತಜ್ಞತೆ ಸಲ್ಲಿಸಿದರು. ಸಂಜೆ 6-30ಕ್ಕೆ ಸಮ್ಮೇಳನ ಮುಕ್ತಾಯವಾಯಿತು.

## ನಿಧನ ವಾರ್ತೆ

### ಮೌಲಾನಾ ಬಶೀರ್ ಅಹ್ಮದ್ ಫಾಝಿಲ್ ದಹ್ಲವಿ

ಲಂಡನ್ : ಪ್ರಮುಖ ಅಹ್ಮದಿಯಾ ಮಿಶನರಿಗಳಲ್ಲೋರ್ವರಾದ ಜನಾಬ್ ಮೌಲಾನಾ ಬಶೀರ್ ಅಹ್ಮದ್ ಫಾಝಿಲ್ ದಹ್ಲವಿ ಸಾಹೇಬರು ಕಳೆದ ಜನವರಿ 11ರಂದು ಬೆಳಿಗ್ಗೆ 7 ಗಂಟೆಗೆ ನಿಧನರಾದರು (ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್). ಎರಡು ವರ್ಷಗಳಿಂದ ವಾತರೋಗ ಪೀಡಿತರಾಗಿದ್ದ ಅವರು ಕೆಲವು ಕಾಲದಿಂದ ಲಂಡನಿನಲ್ಲೇ ಇದ್ದರು. ಹಝ್ರತ್ ಖಲೀಫತುಲ್ ಮಸೀಹ್‌ರವರು ಜನಾಝ ನಮಾಝ್ ಮಾಡಿದರು. ಮೃತಶರೀರವನ್ನು ಖಾದಿಯಾನಿಗೆ ತಂದು ದಫನ ಮಾಡಲಾಯಿತು.

ಅಹ್ಮದಿಯಾ ಮಿಶನರಿಯಾಗಿ ಅವರು ದೀರ್ಘಕಾಲ ಸೇವೆ ಸಲ್ಲಿಸಿದ್ದರು. ಕೇರಳ ರಾಜ್ಯದ ಅಹ್ಮದಿಯಾ ವಾರ್ಷಿಕ ಸಮ್ಮೇಳನದಲ್ಲಿ ಸಹ ಅನೇಕ ಬಾರಿ ಅವರು ಭಾಗವಹಿಸಿದ್ದಾರೆ. ಅಲ್ಲಾಹನು ಅವರಿಗೆ ಮಗ್‌ಫಿರತ್ ದಯಪಾಲಿಸಲಿ . ಆಮೀನ್

# 108ನೇ ಅಹ್ಮದಿಯಾ ವಾರ್ಷಿಕ ಮಹಾಸಮ್ಮೇಳನ

ಖಾದಿಯಾನ್ ದಾರುಲ್ ಅಮಾನ್ : ಅಲ್ಲಾಹನ ಅಪಾರವಾದ ಅನುಗ್ರಹದಿಂದ ಜಾಗತಿಕ ಅಹ್ಮದಿಯಾ ಮುಸ್ಲಿಂ ಜಮಾಅತಿನ ತ್ರಿದಿನ ವಾರ್ಷಿಕ ಸಮ್ಮೇಳನ (ಜಲ್ಸ ಸಾಲಾನ) ನವೆಂಬರ್ 13, 14, 15 ದಿನಾಂಕಗಳಂದು ವಿಜಯಕರವಾಗಿ ಇಲ್ಲಿ ಜರಗಿತು.

ಪಾಕಿಸ್ಥಾನ, ಬಂಗ್ಲಾದೇಶ, ನೇಪಾಳ, ಶ್ರೀಲಂಕಾ, ಭೂತಾನ, ಯುನೈಟಡ್ ಕಿಂಗ್‌ಡಂ, ಜರ್ಮನಿ, ಕೆನಡ, ಯುನೈಟಡ್ ಸ್ಟೇಟ್ ಓಫ್ ಅಮೇರಿಕ, ಮಾರಿಷ್ಯಸ್, ನೋರ್ವೆ, ಪೆಲಸ್ತೀನ್, ಅಬೂದಾಬಿ, ಸ್ವಿಟ್ಜರ್ಲೇಂಡ್, ಸೌತ್ ಅಮೇರಿಕ, ಡೆನಾರ್ಕ್, ಗ್ರೀಸ್, ಸಿಂಗಾಪುರ, ದುಬಾಯಿ, ಇಟೆಲಿ ಮುಂತಾದ ರಾಷ್ಟ್ರಗಳಿಂದ ಆಗಮಿಸಿದ ಪ್ರತಿನಿಧಿಗಳ ಸಹಿತ ಇಪ್ಪತ್ತೊಂದು ಸಾವಿರಕ್ಕಿಂತ ಮಿಕ್ಕಿ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದರು. ಪಂಜಾಬಿನ, ಸಮಾಜದ ಅನೇಕ ಗಣ್ಯರು ಸಹ ಸಮ್ಮೇಳನದಲ್ಲಿ ಉಪಸ್ಥಿತರಿದ್ದರು.

ಮೌಲಾನಾ ಹಕೀಂ ಮುಹಮ್ಮದುದ್ದೀನ್ ಸಾಹೇಬರ ಖಿರಾಅತ್‌ನೊಂದಿಗೆ ಉದ್ಘಾಟನೆ ಸಭೆ ಆರಂಭವಾಯಿತು. ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬರು (ನಾಝಿರ್ ಅಲ್‌ಲಾ) ಅಧ್ಯಕ್ಷತೆ ವಹಿಸಿದರು. ಮೌಲಾನಾ ಮುಹಮ್ಮದ್ ಇನಾಂ ಘೋರಿ ಸಾಹೇಬರು ದೇವಾಸ್ತಿತ್ವದ ಬಗ್ಗೆ ಭಾಷಣ ಮಾಡಿದರು. ಹ| ಮಿರ್ಝಾ ವಸೀಂ ಅಹ್ಮದ್ ಸಾಹೇಬರು ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಪರಿಶುದ್ಧ ಜೀವನದ ಕುರಿತು ಮಾತನಾಡಿದರು. ನಂತರ ಕೆನಡದ ಪ್ರತಿನಿಧಿ ತೈಮೂರ್ ಅಹ್ಮದ್ ಚುಗ್ತಾಯಿ, ಪೆಲಸ್ತೀನ್ ಮಿಶನರಿ ಮತ್ತು ಅಮೀರ್ ಮೌ| ಅತಾಉಲ್ಲಾ ಕಲೀಂ ಸಾಹೇಬ್ ಭಾಷಣ ಮಾಡಿದರು. ಕನ್ನಡ, ಮಲಯಾಳಂ, ತಮಿಳು, ತೆಲುಗು, ಬಂಗಾಳಿ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ತಕ್ಷಣ ಭಾಷಾಂತರವನ್ನು ಆಲಿಸುವ ವ್ಯವಸ್ಥೆ ಮಾಡಲಾಗಿತ್ತು.

ಪ್ರಥಮ ದಿನ: ಎರಡನೇ ಅಧಿವೇಶನ ಅಪರಾಹ್ನ 2.30ಕ್ಕೆ ಉತ್ತರ ಪ್ರದೇಶ ಅಮೀರ್ ಚೌಧರಿ ಮುಹಮ್ಮದ್ ನಸೀಂ ಖಾನ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ಕಾಶ್ಮೀರದ ಚೀಫ್ ಮಿಶನರಿ ಗುಲಾಂ ನಬಿ ನಿಯಾಝ್ ಸಾಹೇಬ್ ಭಾಷಣ ಮಾಡಿದರು. ಮಾಸ್ಟರ್ ಅಕ್‌ರಂ ಸಾಹೇಬ್ (ಹೆಡ್‌ಮಾಸ್ಟರ್, ಬಟ್ಟಿಂಡಾ), ಡಾಕ್ಟರ್ ಬಶೀರ್ ಅಹ್ಮದ್ ಸಾಹೇಬ್ ಹಿಮಾಚಲ ಪ್ರದೇಶ, ಖುರೈಶಿ ಸಮೀರ್ ಅಹ್ಮದ್ ಆಗ್ರಾ ಎಂಬಿವರು ತಾವು ಅಹ್ಮದಿಯಾ ಜಮಾಅತಿಗೆ ಸೇರಲಿಕ್ಕೆ ಕಾರಣಗಳೇನೆಂದು ವಿವರಿಸಿದರು.

ದ್ವಿತೀಯ ದಿನ ಬೆಳಿಗ್ಗೆ ನಡೆದ ಸಮ್ಮೇಳನದಲ್ಲಿ ಲಾಸ್‌ಏಂಜಲ್ಸ್ (ಅಮೇರಿಕ) ಜಮಾಅತಿನ ಪ್ರೆಸಿಡೆಂಟ್ ಡಾ| ಹಮೀದುರ್ರಹ್ಮಾನ್ ಸಾಹೇಬ್ ಅಧ್ಯಕ್ಷರಾಗಿದ್ದರು. "ಖಿಲಾಫತಿನ ಅನುಗ್ರಹಗಳು" ಎಂಬ ವಿಷಯದ ಬಗ್ಗೆ ಮೌ| ಇನಾಯತುಲ್ಲಾಹ್ ಸಾಹೇಬ್ ಭಾಷಣ ಮಾಡಿದರು. ಆ ಬಳಿಕ ಮೌ| ಗ್ಯಾನಿ ತನ್‌ವೀರ್ ಅಹ್ಮದ್ ಖಾದಿಂ ಸಾಹೇಬ್ "ಅಂಧವಿಶ್ವಾಸಗಳು ಮತ್ತು ಅನಾಚಾರಗಳು" ಎಂಬ ವಿಷಯದ ಬಗ್ಗೆ ಪಂಜಾಬಿ ಭಾಷೆಯಲ್ಲಿ ಭಾಷಣ ಮಾಡಿದರು. ನಂತರ "ಇಸ್ಲಾಂ ನೀಡ್ ಓಫ್ ದ ಔಅರ್" ಎಂಬ ವಿಷಯದಲ್ಲಿ ಸಯ್ಯಿದ್ ಮಹ್ಮೂದ್ ಅಹ್ಮದ್ ಸಾಹೇಬ್ ಕಲ್ಕತ್ತ ಮಾತನಾಡಿದರು. ಮೌ| ಮುನೀರ್ ಅಹ್ಮದ್ ಸಾಹೇಬ್ (ಚೀಫ್ ಮಿಶನರಿ ಕೆನಡ) ಕೆನಡದಲ್ಲಿ ಜಮಾಅತಿನ ಚಟುವಟಿಕೆಗಳು ಮತ್ತು ಅಭಿವೃದ್ಧಿಗಳ ಬಗ್ಗೆ ವಿವರಿಸಿದರು.

ಅಪರಾಹ್ನ 2.30 ಕ್ಕೆ ಆರಂಭವಾದ ಎರಡನೇ ಸಭೆಯ ಅಧ್ಯಕ್ಷತೆಯನ್ನು ನಾಝಿರ್ ಉಮೂರ್‌ಆಮ ಚೌಧರಿ ಮುಹಮ್ಮದ್ ಅಕ್ಬರ್ ಸಾಹೇಬ್ ವಹಿಸಿದರು. ಜಮಾಅತಿನ ವ್ಯವಸ್ಥೆಯ ಬಗ್ಗೆ ಮೌ| ಮುನೀರ್ ಅಹ್ಮದ್ ಖಾದಿಂ ಸಾಹೇಬ್, "ಸಮಾಜದಲ್ಲಿ ಸ್ತ್ರೀಯರಿಗಿರುವ ಸ್ಥಾನ" ಎಂಬ ವಿಷಯದಲ್ಲಿ ಮೌ| ಸುಲ್ತಾನ್ ಅಹ್ಮದ್ ಝಫರ್ ಸಾಹೇಬ್ (ಹೆಡ್‌ಮಾಸ್ಟರ್, ಮದ್ರಸ ತುಲ್ ಮುಅಲ್ಲಿಮೀನ್) ಭಾಷಣ ಮಾಡಿದರು.

ಮಾಸ್ಟರ್ ಶೇರ್‌ಅಲಿ ಭಟ್ಟಿ (ಪ್ರೆಸಿಡೆಂಡ್, ಜಮಾಅತ್ ಅಹ್ಮದಿಯಾ, ಉಗಾಲನ್, ಹರಿಯಾಣ), ಲಾಲ್ ಮುಹಮ್ಮದ್ (ಪೂರ್ವ ಗೋದಾವರಿ), ರಹೀಮುದ್ದೀನ್ (ಪೂರ್ವ ಗೋದಾವರಿ -ಆಂಧ್ರ ಪ್ರದೇಶ), ಅಬ್ದುಲ್‌ಗನಿ ದೇವದುರ್ಗ (ಕರ್ನಾಟಕ) ತಾವು ಅಹ್ಮದಿಯತ್ ಸ್ವೀಕರಿಸಲಿಕ್ಕೆ ಕಾರಣಗಳನ್ನು ವಿವರಿಸಿದರು.

ತೃತೀಯ ದಿನ ಬೆಳಿಗ್ಗೆ 10 ಗಂಟೆಗೆ ಆರಂಭವಾದ ಸಮಾವೇಶ ಮೌ| ಅತಾಉಲ್ಲಾ ಕಲೀಂ ಸಾಹೇಬ್ (ಅಮೀರ್ ಮತ್ತು ಚೀಫ್ ಮಿಶನರಿ, ಪೆಲಸ್ತೀನ್)ರವರ ಅಧ್ಯಕ್ಷತೆಯಲ್ಲಿ ಜರಗಿತು. ಹಾಫಿಝ್ ಸಾಲಿಹ್ ಮುಹಮ್ಮದ್ ಅಲ್ಲಾದೀನ್ ಸಾಹೇಬ್ (ಹೈದರಾಬಾದ್), ಮೌ| ಮುಹಮ್ಮದ್ ನಸೀಂ ಖಾನ್ ಸಾಹೇಬ್, ಮೌಲಾನ ಮುಹಮ್ಮದ್ ಕರೀಮುದ್ದೀನ್ ಸಾಹೇಬ್ ಮೊದಲಾದವರು ಭಾಷಣ ಮಾಡಿದರು.

ಸಮಾಪನ ಸಭೆ ಮಧ್ಯಾಹ್ನ 2.30ಕ್ಕೆ ಖಾರೀ ನವಾಬ್ ಅಹ್ಮದ್ ಗಂಗೋಹಿ ಸಾಹೇಬರ ಖುರ್‌ಆನ್ ಪಾರಾಯಣದೊಂದಿಗೆ ಪ್ರಾರಂಭವಾಯಿತು. ರಾಜ್ಯಮಟ್ಟದಲ್ಲಿ ಉನ್ನತ ಮಾರ್ಕುಗಳನ್ನು ಪಡೆದು ತೇರ್ಗಡೆ ಹೊಂದುವ ಅಹ್ಮದೀ ವಿದ್ಯಾರ್ಥಿಗಳಿಗೆ, ಜಮಾಅತಿನ ತೃತೀಯ ಖಲೀಫ ಏರ್ಪಡಿಸಿದ ಸ್ವರ್ಣ ಪದಕಗಳನ್ನು ಸಮ್ಮೇಳನದಲ್ಲಿ ನೀಡಲಾಯಿತು.

ಭಾರತದ ಸಮಯ ಸಂಜೆ 4 ಗಂಟೆಗೆ ಲಂಡನ್‌ನಿಂದ ಉಪಗ್ರಹ ಮೂಲಕ ಹಝ್ರತ್ ಖಲೀಫತುಲ್ ಮಸೀಹ್ ಸಭಿಕರನ್ನು ಉದ್ದೇಶಿಸಿ ಮಾತನಾಡಿದರು. ಧರ್ಮಸಹಿಷ್ಣುತೆಯಲ್ಲಿ ಭಾರತವು ಪಾಕಿಸ್ಥಾನಕ್ಕೆ ಮಾದರಿಯಾಗಿದೆ ಎಂದು ಅವರು ನುಡಿದರು. ಅಹ್ಮದಿಯಾ ಸಂಘಟನೆಗೆ ಉಂಟಾಗಲಿರುವ ಪ್ರಗತಿಯ ಬಗ್ಗೆ ಸುಮಾರು 100 ವರ್ಷಗಳಿಗೆ ಮುಂಚೆ ಅಹ್ಮದಿಯಾ ಸಂಘಟನೆಯ ಸ್ಥಾಪಕರು ನುಡಿದ ಭವಿಷ್ಯವಾಣಿ ಈಡೇರಿದ ಬಗ್ಗೆ ಅವರು ವಿವರಿಸಿದರು.

ಮಗ್‌ರಿಬ್ ನಮಾಝ್ ನಂತರ 20 ನಿಕಾಹ್‌ಗಳು ನಡೆದವು. ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬರು ನಿಕಾಹ್ ಖುತುಬ ಓದಿದರು. ಆ ಬಳಿಕ ತರಬೇತಿ ಸಭೆ ನಡೆಯಿತು. ಮರುದಿನ ಬೆಳಿಗ್ಗೆ 10 ಗಂಟೆಗೆ "ಮಜ್ಲಿಸ್ ಮುಶಾವರತ್" ಜರಗಿತು.

ಅಹ್ಮದಿಯಾ ವಿರೋಧಿಗಳಾದ ಮೌಲ್ವಿಗಳು ಅಹ್ಮದಿಯಾ ಜಮಾಅತಿನ ಬಗ್ಗೆ ಅನೇಕ ಸುಳ್ಳುಗಳನ್ನು ಹೇಳಿ ಸಾವಿರಗಟ್ಟಲೆ ನವ ಅಹ್ಮದಿಯರನ್ನು ಖಾದಿಯಾನಿನ ಸಮ್ಮೇಳನಕ್ಕೆ ಬಾರದಂತೆ ತಡೆಯಲು ಬಹಳವಾಗಿ ಪ್ರಯತ್ನಿಸಿದ್ದರು. ಆದರೆ ಅವರ ಪ್ರಯತ್ನಗಳೆಲ್ಲ ವಿಫಲವಾಯಿತು. ಕಲ್ಕತ್ತಾದಿಂದ 15 ಬೋಗಿಗಳ ವಿಶೇಷ ರೈಲುಗಾಡಿಯ ಮೂಲಕ ನವ ಅಹ್ಮದಿಯರು ಸಮ್ಮೇಳನದಲ್ಲಿ ಭಾಗವಹಿಸಲು ಆಗಮಿಸಿದರು. ಆಂಧ್ರದಿಂದಲೂ 5 ವಿಶೇಷ ಬೋಗಿಗಳ ಏರ್ಪಾಡು ಮಾಡಲಾಗಿತ್ತು. ಭಾರತದ 17 ಪ್ರಾಂತ್ಯಗಳಿಂದ 10 ಸಾವಿರಕ್ಕಿಂತಲೂ ಮಿಕ್ಕಿ ನವ ಅಹ್ಮದಿಯರು ಸಮ್ಮೇಳನದಲ್ಲಿ ಪಾಲುಗೊಂಡರು.

### "ಇಸ್ಲಾಮಿನ ವಿಜಯ ಇಮಾಂ ಮಹ್‌ದಿ ಮೂಲಕ"

# ಸಂದೇಶ ಪ್ರಚಾರ ವಾಹನ ಯಾತ್ರೆ

ಕೇರಳದ ಉತ್ತರ ತುದಿಯಿಂದ ದಕ್ಷಿಣ ತುದಿಯ ವರೆಗೆ "ಇಸ್ಲಾಮಿನ ವಿಜಯ ಇಮಾಂ ಮಹ್‌ದಿ ಮೂಲಕ" ಎಂಬ ದಿವ್ಯ ಸಂದೇಶವನ್ನು ಸಾರುತ್ತಾ ಜನಾಕರ್ಷಣೆಯನ್ನು ಪಡೆದ ಸಂದೇಶ ಪ್ರಚಾರ ವಾಹನ ಯಾತ್ರೆ ವಿಜಯಕರವಾಗಿ ಮುಕ್ತಾಯವಾಯಿತು.

1999 ಎಪ್ರಿಲ್ 2ರಂದು ಮಂಜೇಶ್ವರದಿಂದ ಪ್ರಯಾಣ ಆರಂಭಿಸಿದ ಸಂದೇಶ ವಾಹನ 54 ದಿನಗಳ ಪರ್ಯಟನೆಯ ಮಧ್ಯೆ 50ಕ್ಕೂ ಮಿಕ್ಕಿ ಸಾರ್ವಜನಿಕ ಸಭೆಗಳನ್ನೂ 500ಕ್ಕೂ ಮಿಕ್ಕಿ ಬೀದಿ ಭಾಷಣಗಳನ್ನೂ ನಡೆಸಲಾಯಿತು. ಸಾವಿರಾರು ಕಿರುಕೃತಿಗಳನ್ನು ವಿತರಣೆ ಮಾಡಲಾಯಿತು. ವಾಹನಕ್ಕೆ ಜೋಡಿಸಲಾದ ಸಂದೇಶ ಫಲಕಗಳು ಜನರನ್ನು ಬಹಳವಾಗಿ ಆಕರ್ಷಿಸಿದವು. ಹೆಚ್ಚಿನ ಕಡೆಗಳಲ್ಲಿ ಭಾಷಣಗಳನ್ನು ಜನರು ಗಮನವಿಟ್ಟು ಆಲಿಸಿದರು. ಕೆಲವು ಕಡೆಗಳಲ್ಲಿ ಅಡೆತಡೆಗಳನ್ನು ಒಡ್ಡಲು ಜನರು ವಿಫಲ ಪ್ರಯತ್ನ ಮಾಡಿದರು.

ಕೇರಳ ಅಹ್ಮದಿಯಾ ಅಮೀರ್ ಜನಾಬ್ ಕುಞ್ಞಾಮು ಸಾಹೇಬರು ಮಂಜೇಶ್ವರ ಅಹ್ಮದಿಯಾ ಮಸೀದಿಯಲ್ಲಿ ಜುಮುಅ ನಮಾಝ್ ಬಳಿಕ ವಾಹನ ಯಾತ್ರೆಯನ್ನು ಉದ್ಘಾಟಿಸಿದರು. ಮೌಲ್ವಿ ಎಂ. ನಾಸಿರ್ ಅಹ್ಮದ್ ಸಾಹೇಬ್ ವಾಹನದ ಮುಖ್ಯ ಭಾಷಣಗಾರರಾಗಿದ್ದರು. ಮೌಲ್ವಿ ವಿ. ಎಂ. ಅಲಿಕುಞ್ಞಿ ಸಾಹೇಬ್, ಮೌ| ಝಫರ್ ಅಹ್ಮದ್ ಸಾಹೇಬ್, ಮೌ| ಟಿ.ಎಂ. ಮುಹಮ್ಮದ್ ಸಾಹೇಬ್, ಮೌ| ಮುಹಮ್ಮದ್ ನಜೀಬ್‌ಖಾನ್ ಸಾಹೇಬ್, ಮುಅಲ್ಲಿಮ್‌ಗಳಾದ ಕೆ. ಕಮರುದ್ದೀನ್ ಸಾಹೇಬ್, ಪಿ. ಮುಹಮ್ಮದ್ ಯೂಸುಫ್ ಸಾಹೇಬ್, ಮುಹಮ್ಮದುಣ್ಣಿ ಮುಸ್ಲಿಯಾರ್, ಮೌಲ್ವಿ ಮುಹಮ್ಮದ್ ಯೂಸುಫ್ ಸಾಹೇಬ್ ಮೊದಲಾದವರು ಸಹ ಭಾಷಣಗಾರರಾಗಿ ವಾಹನದಲ್ಲಿ ಸಂಚರಿಸಿದರು. ಸಾರ್ವಜನಿಕ ಸಭೆಗಳಲ್ಲಿ ಮೌಲ್ವಿ ಮಹ್‌ಮೂದ್ ಅಹ್ಮದ್ ಸಾಹೇಬ್, ಮೌಲ್ವಿ ಮುಹಮ್ಮದ್ ಇಸ್ಮಾಈಲ್ ಸಾಹೇಬ್, ಅಮೀರ್ ಎ. ಪಿ. ಕುಞ್ಞಾಮು ಸಾಹೇಬ್, ಇ. ತಾಹಿರ್ ಸಾಹೇಬ್, ಪ್ರೊಫೆಸರ್ ಮಹ್‌ಮೂದ್ ಅಹ್ಮದ್ ಸಾಹೇಬ್ ಮೊದಲಾದವರು ಭಾಷಣ ಮಾಡಿದರು.

ಮೇ 26ರಂದು ತಿರುವನಂತಪುರ ಜಿಲ್ಲೆಯ ಪಳ್ಳಿಕ್ಕಲ್ ಎಂಬಲ್ಲಿ ಕಾರ್ಯಕ್ರಮ ಮುಕ್ತಾಯಗೊಂಡಿತು. ಮೌಲ್ವಿ ಎಂ. ಅಲಿಕುಞ್ಞಿ ಸಾಹೇಬರ ನೇತೃತ್ವದಲ್ಲಿ ಸಮಾಪನ ದುಆ ಮಾಡಲಾಯಿತು.

# ಅಂತಾರಾಷ್ಟ್ರೀಯ ಪುಸ್ತಕೋತ್ಸವದಲ್ಲಿ ಅಹ್ಮದಿಯಾ ಬುಕ್‌ಸ್ಟಾಲ್

ಎರ್ನಾಕುಳಂ : ಜನವರಿ 5ರಿಂದ 13ರ ವರೆಗೆ ದರ್ಬಾರ್ ಗ್ರೌಂಡಿನಲ್ಲಿ ಜರಗಿದ ಅಂತಾರಾಷ್ಟ್ರೀಯ ಪುಸ್ತಕೋತ್ಸವದಲ್ಲಿ ಅಹ್ಮದಿಯಾ ಸಂಘಟನೆಯ ಬುಕ್‌ಸ್ಟಾಲನ್ನು ತೆರೆಯಲಾಗಿತ್ತು. ಒಂಭತ್ತು ದಿನಗಳ ಕಾಲ ನಡೆದ ಈ ಪುಸ್ತಕೋತ್ಸವದಲ್ಲಿ 75 ಪ್ರಕಾಶನ ಸಂಸ್ಥೆಗಳ ಸ್ಟಾಲ್‌ಗಳಿದ್ದವು.

ಅಹ್ಮದಿಯಾ ಬುಕ್‌ಸ್ಟಾಲಿನಲ್ಲಿ 'ಮುಸ್ಲಿಂ ಟೆಲಿವಿಷನ್ ಅಹ್ಮದಿಯಾ' ಪ್ರದರ್ಶನ ಮತ್ತು ಪೋಸ್ಟರ್ ಎಕ್ಸಿಬಿಷನ್ ಜನಾಕರ್ಷಕವಾಗಿದ್ದವು. ಬುಕ್‌ಸ್ಟಾಲ್ ಸಂದರ್ಶಕರಲ್ಲಿ ಕೇಂದ್ರ ಸಚಿವ ಶ್ರೀ ಓ. ರಾಜಗೋಪಾಲನ್ ಸಹ ಇದ್ದರು. "ಅಹ್ಮದಿಯತ್ ಅಥವಾ ಯಥಾರ್ಥ ಇಸ್ಲಾಂ" ಎಂಬ ಪುಸ್ತಕವನ್ನು ಅವರಿಗೆ ಪಾರಿತೋಷಕವಾಗಿ ನೀಡಲಾಯಿತು.

# ಹ್ಯೂಮನಿಟಿ ಫಸ್ಟ್ (Humanity First)
# ಮಾನವ ಸೇವಾಕಾರ್ಯಕ್ಕೆ ಅಹ್ಮದಿ ಸಂಘ

ನಾಸಿರ್‌ಬಾಗ್ (ಜರ್ಮನಿ) : ಪ್ರಕೃತಿ ಪ್ರಕೋಪ, ಅಪಘಾತ, ಯುದ್ಧ ಮುಂತಾದ ಅನೇಕ ಕಾರಣಗಳಿಂದ ದುಃಖ ದುಮ್ಮಾನಗಳಿಗೆ ಗುರಿಯಾದ ನಿರಾಶ್ರಿತರಿಗೂ ನಿರ್ಗತಿಕರಿಗೂ ಜಾತಿ ಬೇಧವಿಲ್ಲದೆ ನೆರವು ನೀಡಲಿಕ್ಕೋಸ್ಕರ ಜರ್ಮನಿಯ ಅಹ್ಮದಿಯಾ ಮುಸ್ಲಿಂ ಸಂಘಟನೆಯ ಅಧೀನದಲ್ಲಿ 2 ವರ್ಷಗಳಿಂದ Humanity First ಸಂಘ ಕಾರ್ಯವೆಸಗುತ್ತಿದೆ. ಹಝ್ರತ್ ಖಲೀಫರ ಅಪೇಕ್ಷೆ ಮೇರೆಗೆ ಆರಂಭಿಸಿದ ಈ ಸಂಘಕ್ಕೆ ಅವರೇ ಹೀಗೆ ನಾಮಕರಣ ಮಾಡಿದ್ದು.

ಈ ಸಂಘದಲ್ಲಿ ಸದಸ್ಯರಾಗಲು ಬಯಸುವವರು ಅವರ ಹೆಸರು, ಪ್ರಾಯ, ವೃತ್ತಿ, ಜಮಾಅತ್, ದೂರವಾಣಿ ಸಂಖ್ಯೆ, ವಿಳಾಸ ಇತ್ಯಾದಿ ವಿವರಗಳನ್ನು ಕೆಳಗೆ ಬರೆದ ವಿಳಾಸಕ್ಕೆ ತಿಳಿಸಿರಿ.

ವಾರ್ಷಿಕ ದೇಣಿಗೆ : 20 ಜರ್ಮನ್ ಮಾರ್ಕ್ಸ್

Humanity First, E.V. Germany
Lajna Section
Frankfurter Stn. 136, 64521 Groes, Gerau,
Tel. : 06152, 910090

ದೇವಾಸ್ತಿತ್ವವನ್ನು ರುಜುಗೊಳಿಸುವ, ಧರ್ಮಗಳ ಆವಶ್ಯಕತೆಯನ್ನು
ಸಾರುವ, ಆಧ್ಯಾತ್ಮಿಕ ಜ್ಞಾನವನ್ನು ಜನರ ಹೃದಯಗಳಲ್ಲಿ
ಮೂಡಿಸುವ ಒಂದು ಉತ್ಕೃಷ್ಟ ತ್ರೈಮಾಸ ಪತ್ರಿಕೆ

# ಯುಗರಶ್ಮಿ

ಯಥಾರ್ಥ ಇಸ್ಲಾಂ ಮತ್ತು ಅಹ್ಮದಿಯಾ ಸಂಘಟನೆಯ ಸೇವೆಗಾಗಿ ಮೀಸಲಾಗಿರಿಸಿದ "ಯುಗರಶ್ಮಿ" ತ್ರೈಮಾಸಿಕವು ವಿವಿಧ ಧರ್ಮಗಳ ತುಲನಾತ್ಮಕ ಪಠನಾಸಕ್ತರಿಗೆ ಒಂದು ಉತ್ತಮ ಪತ್ರಿಕೆಯಾಗಿದೆ.

ದೇವಾಸ್ತಿತ್ವ, ಇತರ ಧರ್ಮ ಮತ್ತು ಧರ್ಮಾಚಾರ್ಯರ ಕುರಿತು ಇಸ್ಲಾಮಿನ ವೀಕ್ಷಣೆ, ಕೋಮು ಸೌಹಾರ್ದದ ಮಾರ್ಗಗಳು, ಇಸ್ಲಾಮಿನ ತತ್ವೋಪದೇಶಗಳು, ಮಾನವ ಕುಲದ ಏಳಿಗೆಗೆ ಇಸ್ಲಾಮಿನ ಕೊಡುಗೆ, ಇಂದಿನ ಆಧ್ಯಾತ್ಮಿಕ ಅಧಃಪತನ ಮತ್ತು ಪುನರುಜ್ಜೀವನ ಮಾರ್ಗಗಳು ಮೊದಲಾದ ವಿಷಯಗಳ ಕುರಿತು ಲೇಖನ ಪರಾಮರ್ಶೆಗಳನ್ನು ಈ ಪತ್ರಿಕೆಯ ಪ್ರತಿ ಸಂಚಿಕೆಯಲ್ಲೂ ಕಾಣಬಹುದು.

| | | |
|---|---|---|
| ಬಿಡಿ ಪ್ರತಿ: ರೂ. 5-00 | ವಾರ್ಷಿಕ ಚಂದಾ : ರೂ. 20-00 | ಅಂಚೆ ಮೂಲಕ : ರೂ. 25-00 |

ವ್ಯವಹರಿಸಿರಿ:
The Editor
**YUGARASHMI**
Kannada Quarterly
10-23-1008/1, I Floor, Ansari Road
Bunder, Mangalore - 575 001

ಈ ವರ್ಷದ "ಯುಗರಶ್ಮಿ"ಯ ಉಚಿತ ಪ್ರತಿಗಳನ್ನು ವಿತರಣೆ ಮಾಡಲು ಸಹಾಯಧನ ನೀಡಿದ ಉದಾರಶೀಲರು.

| | | ಪ್ರತಿಗಳು |
|---|---|---|
| 1. | ಜನಾಬ್ ಪಿ. ಎ. ರಹ್ಮಾನ್ ಸಾಹೇಬ್, ಮಡಿಕೇರಿ | 40 |
| 2. | ಜನಾಬ್ ಎಂ. ಬಿ. ನಾಸಿರ್ ಅಹ್ಮದ್ ಸಾಹೇಬ್, ಮಡಿಕೇರಿ | 40 |
| 3. | ಜನಾಬ್ ಎಂ. ಎ. ಬಶೀರ್ ಅಹ್ಮದ್ ಸಾಹೇಬ್, ಮಡಿಕೇರಿ | 20 |
| 4. | ಜನಾಬ್ ಎಂ. ಇ. ಮುಝಫ್ಫರ್ ಅಹ್ಮದ್ ಸಾಹೇಬ್, ಮಡಿಕೇರಿ | 20 |
| 5. | ಜನಾಬ್ ಯು. ಎಸ್. ಮಾಹಿನ್‌ಕುಞ್ಞಿ ಸಾಹೇಬ್, ಪುತ್ತೂರು | 20 |
| 6. | ಜನಾಬ್ ಪಿ. ಕೆ. ಅಬ್ದುಲ್ ಜಲೀಲ್ ಸಾಹೇಬ್, ಮಡಿಕೇರಿ | 20 |
| 7. | ಜನಾಬ್ ಸಿ. ಶೌಕತ್ ಅಲಿ ಸಾಹೇಬ್, ಮಡಿಕೇರಿ | 10 |

ದಿನಂಪ್ರತಿ 24 ಗಂಟೆಗಳ ಕಾಲ ಪ್ರಸಾರಗೊಳ್ಳುತ್ತಿರುವ

ಏಕೈಕ ಇಸ್ಲಾಮೀ ಟಿ.ವಿ. ಚ್ಯಾನೆಲ್

# ಮುಸ್ಲಿಂ ಟೆಲಿವಿಶನ್ ಅಹ್ಮದಿಯಾ ಇಂಟರ್‌ನೇಶನಲ್

# THE FIRST ISLAMIC SATELLITE CHANNEL

**BROADCASTING ROUND THE CLOCK**

**AUDIO FREQUENCY**

| | | |
|---|---|---|
| URDU | : | 6.50 |
| ENGLISH | : | 7.02 |
| ARABIC | : | 7.20 |
| BENGALI | : | 7.38 |
| FRENCH | : | 7.56 |
| DUTCH | : | 7.74 |
| TURKISH | : | 8.10 |

| | | |
|---|---|---|
| SATELLITE | : | INTELSAT 703 IS-703 AT 57* E |
| DECODER | : | C Band |
| POSITION | : | 57* East |
| POLARITY | : | Left Hand Circular |
| DISH SIZE | : | Max 8.Ft. |
| VIDEO FREQUENCY | : | 4177.5 Mhz |
| AUDIO FREQUENCY | : | 6.50 Mhz |

E Mail : mta @ bitinternet.com

INTERNET CODE : http://www.alislam.org/mta

**MTA International,** P.O. Box 12926, London SW 18 4ZN

Tel : 44-181 870 0922 Fax : 44-181 875 0249

Internet Code: http://www.alislam.org/mta

Regd. with the Registrar of Newspapers for India No. R.N. 27354/75
YUGARASHMI Kannada Quarterly, April - 2000

# ಸ್ಟ್ಯಾಂಡರ್ಡ್ ಟೈಲರಿ

ಕಡೂರು, ಚಿಕ್ಕಮಗಳೂರು ಜಿಲ್ಲೆ

## ರಾಜಾ ಮಾರ್ಕಿನ ಹಂಚುಗಳು

ಚಾವಣಿ ಹಂಚು, ಮೂಲೆ ಹಂಚು, ಗೋಡೆ ಹಂಚು, ಹಾಸು ಹಂಚು,
ಮೆತ್ತಡ ಹಂಚು, ಅಲಂಕಾರಿಕ ಹಂಚು ಮೊದಲಾದ
ಎಲ್ಲ ತರದ ಆವೆಮಣ್ಣಿನ ಉತ್ಪನ್ನಗಳು ದೊರೆಯುತ್ತವೆ.

# STANDARD TILERY

**KADUR,**
CHICKMAGALUR DISTRICT

## RAJA MARK

**Roofing Tiles, Ridges, Wall Tiles, Span Tiles, Floorings, Decorative Tiles, Ceillings Etc., Etc.**

**ALL CLAY PRODUCTS AVAILABLE.**

Edited and Published by **Muhammad Yusuf** on behalf of Jamath Ahmadiyya at 10-23-1008/1, I Floor, Ansari Road, Mangalore - 575 001.
Printed at **Unique Print,** Mangalore on behalf of Jubilee Printing Press, Mangalore.
Typeset at **Madhuban Graphics,** Alake, Mangalore - 575 003